# ಕರ್ನಾಟಕ ವಿಧಾನ ಪರಿಷತ್ತು

**ಶುಕ್ರವಾರ, 03ನೇ ಜೂನ್ 2011**

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಪೂರ್ವಾಹ್ನ 10 ಗಂಟೆ 38 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ.ಎಚ್.ಶಂಕರಮೂರ್ತಿ)**

**ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

## 1. ವರದಿಯನ್ನೊಪ್ಪಿಸುವುದು

**ಶ್ರೀಮತಿ ವಿಮಲಾ ಗೌಡ (ಉಪ ಸಭಾಪತಿಗಳು ಮತ್ತು ಅಧ್ಯಕ್ಷರು, ಖಾಸಗಿ ಸದಸ್ಯರುಗಳ ವಿಧೇಯಕ ಹಾಗೂ ನಿರ್ಣಯಗಳ ಸಮಿತಿ):–**ಮಾನ್ಯ ಸಭಾಪತಿಯವರೇ ನಾನು ಖಾಸಗಿ ಸದಸ್ಯರುಗಳ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಮೊದಲನೆಯ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

**ಸಭಾಪತಿಯವರು:–** ವರದಿಯನ್ನೊಪ್ಪಿಸಲಾಯಿತು.

**ಶ್ರೀಮತಿ ಮೋಟಮ್ಮ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ...

**ಸಭಾಪತಿಯವರು:–** ಇವತ್ತು ಕೂಡ ಪ್ರಶ್ನೋತ್ತರ ವೇಳೆ ಇರುವುದಿಲ್ಲ, ಈ ವಿಚಾರವನ್ನು ನಾನು ನಿನ್ನೆಯ ದಿವಸವೇ ತಿಳಿಸಿರುತ್ತೇನೆ. ಆದ್ದರಿಂದ ಪ್ರಶ್ನೋತ್ತರ ವೇಳೆಯ ನಂತರ ತೆಗೆದುಕೊಳ್ಳುವಂತಹ ಶೂನ್ಯ ವೇಳೆ ಪ್ರಸ್ತಾವಗಳೆನಿರುತ್ತವೆ ಅವುಗಳನ್ನು ಮೊದಲು ತೆಗೆದುಕೊಳ್ಳೋಣ. ಅನಂತರ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇನ್ನಿತರ ಸದಸ್ಯರುಗಳು ಕಳುಹಿಸಿಕೊಟ್ಟಿರುವಂತಹ ನೋಟೀಸ್ ಬಗ್ಗೆ ವಿಚಾರ ಮಾಡೋಣ. ಈಗ ಶೂನ್ಯವೇಳೆ ಪ್ರಸ್ತಾವದ ಅಡಿಯಲ್ಲಿ ಮಾನ್ಯ ಮನೋಹರ ಮಸ್ಕಿಯವರು ಕಳುಹಿಸಿಕೊಟ್ಟಿರುವ ವಿಷಯವನ್ನು ತೆಗೆದುಕೊಳ್ಳೋಣ.

## 2. ವಿಶೇಷ ಪ್ರಸ್ತಾವ

### ಭತ್ತದ ಬೆಲೆ ಕುಸಿತದಿಂದ ರೈತರು ಕಂಗಾಲಾಗಿರುವ ಕುರಿತು–

**ಶ್ರೀ ಮನೋಹರ ಮಸ್ಕಿ:–** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯ ಇಂದು ಭತ್ತ ಬೆಳೆಯುವಂತಹ ಪ್ರಮುಖ ರಾಜ್ಯವಾಗಿದೆ. ವಿಶೇಷವಾಗಿ ತುಂಗಭದ್ರಾ ಮತ್ತು ಭದ್ರಾ ಅಚ್ಚುಕಟ್ಟು ಪ್ರದೇಶಗಳಲ್ಲಿ ಬೆಳೆಯುವ 'ಸೋನಾಮಸೂರಿ' ದೈನಂದಿನ ಬಳಕೆಯ ಉತ್ಕೃಷ್ಟ ತಳಿಯಾಗಿ ಹೊರಹೊಮ್ಮಿದೆ.

ಆದರೆ ಇದೀಗ ಭತ್ತದ ಬೆಲೆ ದಿಢೀರನೆ ಕುಸಿದಿದ್ದು, ಈ ಬೆಳೆಯನ್ನೇ ನಂಬಿರುವ ರಾಯಚೂರು, ಕೊಪ್ಪಳ, ಬಳ್ಳಾರಿ, ದಾವಣಗೆರೆ ಹಾಗೂ ಯಾದಗಿರಿ ಜಿಲ್ಲೆಗಳ ಲಕ್ಷಾಂತರ ರೈತರು ಕಂಗಾಲಾಗಿದ್ದಾರೆ. ಅವರು ಬೆಳೆಗೆ ಮಾಡಿರುವ ಖರ್ಚು ಮರಳಿಬಾರದೆ ಅನಿವಾರ್ಯವಾಗಿ ಸಾಲದ ಕೂಪಕ್ಕೆ ಬೀಳುವಂತಾಗಿದೆ.

ದಾವಣಗೆರೆ ಜಿಲ್ಲೆಯ ಭತ್ತದ ಬೆಳೆಗಾರರು ಇಂದು ಬೆಂಗಳೂರು "ಚಲೋ" ಕೈಗೊಂಡಿದ್ದಾರೆ. ರಾಯಚೂರು, ಕೊಪ್ಪಳ ಜಿಲ್ಲೆಗಳಲ್ಲಿ ಪ್ರತಿಭಟನೆಗಳು ನಡೆಯುತ್ತಿವೆ.

ಆದ್ದರಿಂದ ಸರ್ಕಾರ ಭತ್ತದ ಬೆಳೆಗಾರರ ರಕ್ಷಣೆಗೆ ತಕ್ಷಣ ಮುಂದಾಗಬೇಕು ಮತ್ತು ಶೀಘ್ರ ಭತ್ತ ಖರೀದಿ ಆರಂಭಿಸಬೇಕೆಂದು ಸರ್ಕಾರದ ಗಮನ ಸೆಳೆಯಬಯಸುತ್ತೇನೆ.

**ಡಾ: ವಿ. ಎಸ್. ಆಚಾರ್ಯ (ಸಭಾನಾಯಕರು):–**ಮಾನ್ಯ ಸಭಾಪತಿಯರೇ, ಈ ವಿಷಯವನ್ನು ಸಂಬಂಧಪಟ್ಟ ಸಚಿವರ ಗಮನಕ್ಕೆ ತಂದು ಅವರಿಂದ ಸೋಮವಾರದಂದು ಉತ್ತರವನ್ನು ಕೊಡಿಸಲಾಗುತ್ತದೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೇ, ಇದು ಇಡೀ ರಾಜ್ಯದ ಸಮಸ್ಯೆಯಾಗಿದೆ. ಅಂದರೆ ಗಂಗಾವತಿ, ರಾಯಚೂರು ಎಲ್ಲಾ ಜಿಲ್ಲೆಗಳಲ್ಲಿಯೂ ಭತ್ತ ಬೆಳೆಯುವ ರೈತರಿಗೆ ಸಮಸ್ಯೆಯಾಗಿದೆ.

**ಸಭಾಪತಿಯವರು:–** ಮಾನ್ಯ ಸಚಿವರು ಸೋಮವಾರ ಈ ವಿಷಯಕ್ಕೆ ಸ್ಪಂದಿಸಿದರೆ ಅದರ ಪ್ರಾಮುಖ್ಯತೆ ನೋಡಿ ಯಾವ ರೀತಿ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂಬುದರ ಬಗ್ಗೆ ತೀರ್ಮಾನ ಮಾಡೋಣ.

ಈಗ ವಿರೋಧ ಪಕ್ಷದ ನಾಯಕರು ಹಾಗೂ ಇನ್ನೂ ಹಲವಾರು ಜನ ಸದಸ್ಯರುಗಳು ನಿನ್ನೆಯೇ ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದರು.

**ಶ್ರೀ ಮನೋಹರ ಮಸ್ಕಿ:–** ಮಾನ್ಯ ಸಭಾಪತಿಯವರೇ, ನಾನು ಈ ಸಭೆಯ ಸದಸ್ಯನಾಗಿ ಒಂದು ಖಾಸಗಿ ಬಿಲ್ ಮಂಡಿಸಿದ್ದೆ. ನನ್ನ ಖಾಸಗಿ ಬಿಲ್ ಈ ಶುಕ್ರವಾರ ಚರ್ಚೆಗೆ ಬರುತ್ತದೆಂದು ಭಾವಿಸಿದ್ದೆ. ಅದು already table ಆಗಿತ್ತು. ಆದರೆ ಕಳೆದ ಅಧಿವೇಶನದಲ್ಲಿಯೂ ಸಹ ಈ ಬಿಲ್ ಅನ್ನು ಚರ್ಚೆಗೆ ತೆಗೆದುಕೊಳ್ಳಲಿಲ್ಲ. ಈ ಸಲ ಕೂಡ ಅದು ಪಟ್ಟಿ ಆಗಿಲ್ಲ. ದಯವಿಟ್ಟು ನನ್ನ ಈ ಹಕ್ಕನ್ನು ಕಸಿದುಕೊಳ್ಳಬಾರದೆಂದು ತಮ್ಮಲ್ಲಿ ವಿನಂತಿಸುತ್ತೇನೆ.

**ಸಭಾಪತಿಯವರು:–** ಈ ನಿಲುವಳಿ ಸೂಚನೆಯ ವಿಷಯ ಮುಗಿದ ಮೇಲೆ ನಿಮ್ಮ ವಿಷಯದ ಬಗ್ಗೆ ಸರ್ಕಾರಕ್ಕೆ ತಿಳಿಸೋಣ.

**ಶ್ರೀ ವೀರಣ್ಣ ಮತ್ತೀಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಸನ್ಮಾನ್ಯ ನಾಣಯ್ಯನವರು ಕಳಿಸಿರುವಂತಹ ಖಾಸಗಿ ನಿರ್ಣಯವು ಸಹ ಸಂಪೂರ್ಣವಾಗಿಲ್ಲ.

**ಸಭಾಪತಿಯವರು:–** ಅದೂ ಸಹ ಆಗಿಲ್ಲವೇ?

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ, ಖಾಸಗೀ ನಿರ್ಣಯ ಬರುವುದೇ ಕಡಿಮೆ, ಬಂದರೂ ಸಹ ಅದಕ್ಕೆ ಅವಕಾಶವೇ ಸಿಗುತ್ತಿಲ್ಲ. ದಯವಿಟ್ಟು ಇದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ.

**ಶ್ರೀ ಮನೋಹರ ಮಸ್ಕಿ:–** ಮಾನ್ಯ ಸಭಾಪತಿಯವರೇ, ಮಾನ್ಯ ನಾಣಯ್ಯನವರ ಬಿಲ್ ಹಾಗೂ ನನ್ನ ಬಿಲ್ ಎರಡೂ ಟೇಬಲ್ ಆಗಿದೆ. ಆದರೆ ಇವೆರಡು ಮುಂದುವರೆಯದೆ ಇದ್ದರೆ ನಾವು ಶಾಸನ ಮಾಡುವಂತಹ ಖಾಸಗಿ ಸದಸ್ಯರ ಹಕ್ಕುಗಳೇ ಆಗಲಿಲ್ಲ ಎಂದು ಆಗಬಾರದಲ್ಲವೆ.

**ಸಭಾಪತಿಯವರು:–** ಇವತ್ತಿನ ದಿವಸ ಈ ವಿಷಯದ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತೇನೆ. ಸರ್ಕಾರ ಏನು ಹೇಳುತ್ತದೆ ಎಂಬುದನ್ನು ತಿಳಿಯೋಣ. ನಾವು ಸಹ ಅದನ್ನು ಲಿಸ್ಟ್ ಮಾಡುವಂತಹ

ಪ್ರಯತ್ನವನ್ನು ಮಾಡುತ್ತೇವೆ. ಈಗ ವಿರೋಧ ಪಕ್ಷದ ನಾಯಕರು ಹಾಗೂ ಹಲವಾರು ಸದಸ್ಯರು ನಿನ್ನೆ ದಿವಸವೇ ನನಗೆ ಒಂದು ನಿಲುವಳಿ ಸೂಚನೆಯ ನೋಟಿಸನ್ನು ಕೊಟ್ಟಿದ್ದರು. ಆದರೆ ಆ ವಿಷಯವನ್ನು ನಿನ್ನೆ ದಿವಸ ಏಕೆ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲವೆಂಬುದು ತಮಗೆಲ್ಲರಿಗೂ ಸಹ ತಿಳಿದಿದೆ. ಆ ವಿಷಯವನ್ನು ಇವತ್ತು ಪ್ರಸ್ತಾಪ ಮಾಡೋಣ ಎನ್ನುವ ಹಿನ್ನಲೆಯಲ್ಲಿ ಅದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಕೆಲವು ಸದಸ್ಯರು ಪ್ರಿಲಿಮನರಿ ಸಬ್‌ಮಿಶನ್ ಮಾಡಬಹುದು.

## 3. ನಿಲುವಳಿ ಸೂಚನೆಗೆ ಅನುಮತಿ ಕೋರಿ ಚರ್ಚೆ

## ಸರ್ವೋಚ್ಚ ನ್ಯಾಯಾಲಯವು ಶಾಸಕರನ್ನು ಅನರ್ಹಗೊಳಿಸುವ ವಿಚಾರದಲ್ಲಿ ನೀಡಿರುವ ತೀರ್ಪಿನ ಬಗ್ಗೆ:

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ ನಿಯಮ 59ರ ಮೇರೆಗೆ ತಂದಿರುವಂತಹ ಈ ನಿಲುವಳಿ ಸೂಚನೆಯನ್ನು ಪ್ರಸ್ತಾಪ ಮಾಡುವುದಕ್ಕೆ ನೀವು ಅವಕಾಶ ಕೊಟ್ಟಿದ್ದಕ್ಕಾಗಿ ಅಭಿನಂದಿಸುತ್ತೇನೆ. ನಿಜವಾಗಿಯೂ ಇವತ್ತು ನಮಗೆ ಸುಪ್ರೀಂ ಕೋರ್ಟ್ ಏನು ಒಂದು ಮಹತ್ತರ ತೀರ್ಪನ್ನು ಈ ಸರ್ಕಾರಕ್ಕೆ ನೀಡಿದೆ, ಅದು ಒಂದು ರೀತಿಯಲ್ಲಿ ನಮಗೆ ಆಘಾತಕಾರಿ ಏಕೆಂದರೆ, ತೀರ್ಪು ಆಘಾತಕಾರಿ ಅಲ್ಲ. ಇಂತಹ ಒಂದು strictures, remarks ಏನು ಮಾಡಿದ್ದಾರೆ, ಈ ಒಂದು ಕರ್ನಾಟಕ ಸರ್ಕಾರದಲ್ಲಿ ಸಂವಿಧಾನ ಬಾಹಿರವಾದ ನಡವಳಿಕೆಗಳು ಹೇಗೆ ನಡೆಯುತ್ತವೆ ಎನ್ನುವುದರ ವಿರುದ್ಧ ಏನು ತೀವ್ರವಾದ ಒಂದು ಕಠಿಣ ಶಬ್ದಗಳಲ್ಲಿ ಹೇಳಿದ್ದಾರೆ; ಅಂದರೆ 16 ಜನ ಅನರ್ಹ ಶಾಸಕರು ಏನು ಸುಪ್ರೀಂ ಕೋರ್ಟಗೆ ಮನವಿ ಮಾಡಿದ್ದರು, ಆ ಒಂದು ಮನವಿಯಲ್ಲಿ ಅವರು ಏನು ಹೇಳಿದ್ದರು, ನಮಗೆ ನಮ್ಮ ಮುಖ್ಯಮಂತ್ರಿ ಯಡಿಯೂರಪ್ಪನವರ ನಾಯಕತ್ವದಲ್ಲಿ ನಂಬಿಕೆ ಇಲ್ಲ, ಬಾರಿ ಭ್ರಷ್ಟಾಚಾರ, ಅಧಿಕಾರದಲ್ಲಿ ದುರುಪಯೋಗ, ಸ್ವಜನಪಕ್ಷಪಾತ, ತಾರತಮ್ಯ

ಇಂಥದೆಲ್ಲಾ ನಡೆಯುತ್ತಿರುವ ದಿಶೆಯಿಂದ ನಮಗೆ ಅವರ ನಾಯಕತ್ವದಲ್ಲಿ ನಂಬಿಕೆ ಇಲ್ಲ, ಅವರ ನಾಯಕತ್ವ ಬದಲಾವಣೆ ಆಗಬೇಕೆಂದು ಹೇಳಿ ಮಾನ್ಯ ರಾಜ್ಯಪಾಲರಿಗೆ ಒಂದು ಮನವಿಯನ್ನು ಸಲ್ಲಿಸಿದ್ದರು. ಅದರ ಹಿನ್ನಲೆಯನ್ನು ಇಟ್ಟುಕೊಂಡು ವಿನಾಃ ಕಾರಣ ತಮಗೆ ಅಧಿಕಾರ ಇದೆ ಎನ್ನುವ ಒಂದೇ ಕಾರಣಕ್ಕೋಸ್ಕರ ಯಾವುದೇ ಒಂದು ನೋಟಿಸನ್ನು ಕೊಡದೆ ಮಾನ್ಯ ಸದಸ್ಯರುಗಳ ಸದಸ್ಯತ್ವವನ್ನು ರದ್ದುಪಡಿಸಿದ್ದಾರೆ. ಒಬ್ಬ ಸದಸ್ಯನ ಸದಸ್ಯತ್ವವನ್ನು ರದ್ದುಪಡಿಸಬೇಕಾದರೆ ಮೊದಲು ನೋಟೀಸನ್ನು ಕೊಡಬೇಕು. ಆದರೆ ಅದಕ್ಕೆ ಅವಕಾಶವನ್ನೇ ಸರ್ಕಾರ ಕೊಡಲಿಲ್ಲ. 16 ಜನ ಶಾಸಕರು ಅಕ್ಟೋಬರ 6ನೇ ತಾರೀಖು ಮಾನ್ಯ ರಾಜ್ಯಪಾಲರಿಗೆ ಅರ್ಜಿಯನ್ನು ಕೊಟ್ಟಿದ್ದಾರೆ, ಮಾನ್ಯ ರಾಜ್ಯಪಾಲರು ಮಾನ್ಯ ಮುಖ್ಯಮಂತ್ರಿಗಳಿಗೆ ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡಿ, ಈ ರೀತಿ ನಿಮ್ಮ ಬಗ್ಗೆ 16 ಜನ ಶಾಸಕರು ಅವಿಶ್ವಾಸವನ್ನು ತಂದಿದ್ದಾರೆ ಇದರ ಬಗ್ಗೆ..........

**ಶ್ರೀ ಎಸ್.ಎ.ರಾಮದಾಸ್ (ವೈದ್ಯಕೀಯ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ವಿಶೇಷವಾಗಿ ಸುಪ್ರೀಂ ಕೋರ್ಟನಲ್ಲಿ ಈ ವಿಚಾರದ ಬಗ್ಗೆ ಏನೇನು ಆಗಿದೆ ಎನ್ನುವುದು ಒಂದು ಭಾಗ. ನ್ಯಾಯಾಲಯದ ವ್ಯಾಪ್ತಿಯಲ್ಲಿ ಅಂದರೆ ನ್ಯಾಯಾಲಯದಲ್ಲಿ ಬಂದಂತಹ ವಿಚಾರಗಳು ಹಾಗೆಯೇ 10thSheduleನಲ್ಲಿ ಇರುವಂತಹ ಒಂದು ಪವರ್ ಏನಿದೆ, ಅದನ್ನು execute ಮಾಡಿದಂತಹ ವಿಚಾರಗಳನ್ನು ಸದನದಲ್ಲಿ ನಿಲುವಳಿ ಸೂಚನೆಯ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಬರುತ್ತದೆಯೇ ಎನ್ನುವುದು ನನ್ನ ಒಂದು ಪ್ರಶ್ನೆ. ಈಗ 10thSheduleನಲ್ಲಿ ತಮಗೆ ಅಥವಾ ಕೆಳಮನೆಯಲ್ಲಿರುವಂತಹ ಸಭಾಧ್ಯಕ್ಷರಿಗೆ ತಮ್ಮದೇ ಆದಂತಹ ಒಂದು ಅಧಿಕಾರ ವ್ಯಾಪ್ತಿ ಇದೆ. ಆ ಅಧಿಕಾರದ ವ್ಯಾಪ್ತಿಯನ್ನು exercise ಮಾಡಿದರು. ಆ ವಿಷಯ ನ್ಯಾಯಾಲಯದಲ್ಲಿ ಬಂತು.ಆದರೆ ನ್ಯಾಯಾಲಯದ ತೀರ್ಪನ್ನು ಇಲ್ಲಿ ಚರ್ಚೆ ಮಾಡುವಂತಹ

ವಿಚಾರಗಳು ಅದರಲ್ಲಿಯೂ ವಿಶೇಷವಾಗಿ ನಿಲುವಳಿ ಸೂಚನೆಯ ಅಡಿಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಸಾಧ್ಯವಿದೆಯೇ? If it is possible, ಕಾನೂನಿನ ಚೌಕಟ್ಟಿನ ಅಡಿಯಲ್ಲಿ ಇದ್ದರೆ ತಾವು ಅನುಮತಿ ನೀಡಿ. ಆದರೆ ಇಲ್ಲಿ ಪೂರ್ವಭಾವಿ ಚರ್ಚೆಗೆ ಅವಕಾಶ ಇಲ್ಲದೆ ಇರುವುದರಿಂದ ಮಾಡಬಾರದು ಎಂದು ನಾನು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ.

**ಶ್ರೀ ವೀರಣ್ಣ ಮತ್ತೀಕಟ್ಟಿ:-** ಮಾನ್ಯ ಸಭಾಪತಿಯವರೇ, ತಾವು ಪೂರ್ವಭಾವಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಸರ್ಕಾರದ ಪರವಾಗಿ ಬೇಕಾದರೆ ಅನಂತರ ಅವರು ಮಾತನಾಡಲಿ.

**ಸಭಾಪತಿಯವರು:** ನಾನು ಪ್ರಾರಂಭದಲ್ಲಿಯೇ ಹೇಳಿದೆ, Priliminary Submission ಮಾಡಿ ಎಂದು. Don't go to the merits or demerits of the case. Importance of the case.Importance of the case ಏನಾದರು ಇದ್ದರೆ ಅಷ್ಟನ್ನು ಮಾತ್ರ ಹೇಳಿದರೆ ಸಾಕು. ಈಗ ತಾವು ಕೊಟ್ಟಿರುವಂತಹ ನಿಲುವಳಿ ಸೂಚನೆಯ ನೋಟೀಸ್ ಪ್ರಕಾರ ನಾವು ಇವತ್ತಿನ ದಿವಸಕ್ಕೆ ಲಿಸ್ಟ್ ಆಗಿರುವಂತಹ ಬಿಸಿನೆಸ್ ಎಲ್ಲಾ ಪಕ್ಕಕ್ಕೆ ಇಟ್ಟು, ನೀವೇ ಪ್ರಮುಖವಾಗಿ ಇರುವಂತಹ ಸಂಗತಿಗಳ ಬಗ್ಗೆ ಚರ್ಚೆ ಮಾಡಿ ತೀರ್ಮಾನ ಮಾಡೋಣ ಎಂದು ಹೇಳಿದ್ದೀರಿ. ಯಾವ ಕಾರಣಕ್ಕಾಗಿ ಈ ವಿಷಯ ಇಷ್ಟೊಂದು ಪ್ರಮುಖ ವಾಗಿದೆ ಎಂದು ಹೇಳಿದರೆ ಆ ಚರ್ಚೆ Allow ಮಾಡಿದಾಗ you can definitely go into details. ಆದುದರಿಂದ ನೀವು ವಿಷಯದ ಬಗ್ಗೆ ಪ್ರಾಮುಖ್ಯತೆಯನ್ನು ಮಾತ್ರ ತಿಳಿಸಿ, ವಿವರಗಳನ್ನು ಹೇಳುವುದಕ್ಕೆ ಹೋಗಬೇಡಿ. ಮಾನ್ಯ ಗೌರವಾನ್ವಿತ ಸಚಿವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ, ಸಚಿವರಿಗೆ ನಾನು ಆ ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಿಲುವಳಿ ಸೂಚನೆಯ ಬಗ್ಗೆ ಹೇಳುವಾಗ ಸ್ವಲ್ಪ ಅದರ ಹಿನ್ನಲೆಯನ್ನು ಸಹ ಹೇಳಬೇಕಾಗುತ್ತದೆ. ಆದುದರಿಂದ ನಾನು ಅದನ್ನು ಗಮನಿಸುತ್ತಿದ್ದೇನೆ. ಮಾನ್ಯ ಸದಸ್ಯರು ನಿಲುವಳಿ ಸೂಚನೆಯನ್ನು ಏಕೆ ತೆಗೆದುಕೊಳ್ಳಬೇಕು ಎನ್ನುವುದನ್ನು

ಅವರು ಹೇಳಲೇ ಇಲ್ಲ. ಲಿಸ್ಟ್ ಆಗಿರುವಂತಹ ಕಾರ್ಯಕಲಾಪಗಳನ್ನು ಪಕ್ಕಕ್ಕೆ ಏಕೆ ಇಡಬೇಕು ಎಂಬುದನ್ನು ಅವರು ಮೊದಲು ತಿಳಿಸಲಿ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೇ, ಸುಪ್ರೀಂ ಕೋರ್ಟಿನ ಒಂದು ತೀರ್ಪು ಮಹತ್ತರ ತೀರ್ಪು. ನಮ್ಮ ರಾಜ್ಯ ಸರ್ಕಾರದ ವಿರುದ್ಧ ತಂದಿದ್ದರ ಹಿನ್ನಲೆಯನ್ನು ನಾವು ಹೇಳುತ್ತಿದ್ದೇವೆ. ಸಂವಿಧಾನಬಾಹಿರವಾಗಿ 16 ಜನ ಶಾಸಕರಿಗೆ ಕಾರಣ ಹೇಳುವುದಕ್ಕೆ ಅವಕಾಶವನ್ನೇ ಕೊಡದೆಯೇ ಅವರ ಸದಸ್ಯತ್ವವನ್ನು ರದ್ದು ಮಾಡಿದ್ದರಿಂದ ಇಂತಹ ಒಂದು ಪ್ರಸಂಗ ಸುಪ್ರೀಂ ಕೋರ್ಟಿಗೆ ಹೋಗಬೇಕಾಯಿತು. ಸುಪ್ರೀಂ ಕೋರ್ಟ್ ಇವತ್ತು ಈ ರೀತಿ ತೀವ್ರತರವಾದ ಮಾತುಗಳಲ್ಲಿ ಇದನ್ನು condemn ಮಾಡಿದೆ. ಇಲ್ಲಿ ಏನಾಗಿದೆ ಎಂದರೆ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಸರ್ಕಾರವನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಯಾವ ರೀತಿಯಲ್ಲಿ ಅಧಿಕಾರವನ್ನು ದುರಪಯೋಗಪಡಿಸಿಕೊಂಡರು, ಮತ್ತು ಆ ಸಂಖ್ಯಾಬಲ ಕಡಿಮೆ ಆದರೆ ನನ್ನ ಸರ್ಕಾರ ಉಳಿಯುತ್ತದೆ ಎನ್ನುವ ದೃಷ್ಟಿಯಲ್ಲಿ ನಮ್ಮ ಕೆಳಮನೆಯ ಅಧ್ಯಕ್ಷರನ್ನು ಒಂದು ರೀತಿ ದಾಳದ ರೀತಿಯಲ್ಲಿ ಬಳಸಿಕೊಂಡು ಈ 16 ಜನ ಶಾಸಕರ ಸದಸ್ಯತ್ವವನ್ನು ರದ್ದತಿ ಮಾಡುವುದಕ್ಕೆ ಕಾರಣರಾಗಿದ್ದಾರೆ. ಒಂದು ರೀತಿಯಲ್ಲಿ ಪ್ರೇರಕರಾಗಿದ್ದಾರೆ.ಇದನ್ನು ಇಂಗ್ಲೀಷಿನಲ್ಲಿ abettor ಎಂದು ಹೇಳುತ್ತಾರೆ. ಆ ರೀತಿ ಪ್ರೇರಕರಾಗಿ 16 ಜನ ಶಾಸಕರ ಸದಸ್ಯತ್ವದ ರದ್ದತಿಗೆ ಅವಕಾಶ ಮಾಡಿಕೊಟ್ಟರು. ಅಕ್ಟೋಬರ್ 10ನೇ ತಾರೀಖಿನಿಂದ ಮೇ 13ನೇ ತಾರೀಖಿನವರೆಗೆ ಅನೈತಿಕವಾಗಿ ಸರ್ಕಾರವನ್ನು ನಡೆಸಿಕೊಂಡು ಬಂದಿರುವುದು ಎಷ್ಟರಮಟ್ಟಿಗೆ ಸರಿ? ಇದು ಸಾರ್ವಜನಿಕ ಮಹತ್ವ ವಿಚಾರ ಆಗುವುದಿಲ್ಲವೇ? ಈ ನಾಡಿನ ಗೌರವಕ್ಕೆ ಧಕ್ಕೆ ಆಗುವುದಿಲ್ಲವೇ? ಪ್ರಜಾಪ್ರಭುತ್ವದ ಕಗ್ಗೊಲೆ ಆಗುವುದಿಲ್ಲವೇ? ಅದಕ್ಕಾಗಿ ಈ ವಿಚಾರದ ಬಗ್ಗೆ ಚರ್ಚೆ ಮಾಡಲಿಕ್ಕೆ ಒಂದು ಅವಕಾಶವನ್ನು ನೀಡಬೇಕೆನ್ನುವುದು ನನ್ನ ಒಂದು ವಾದ.

**ಶ್ರೀ ಸಿ.ಸಿ.ಪಾಟೀಲ:–** ಗೌರವಾನ್ವಿತ ಉಚ್ಚನ್ಯಾಯಾಲಯ ನೀಡಿದ ತೀರ್ಪಿನ ಆಧಾರದ ಮೇಲೆ ನಾವು ಇಷ್ಟು ದಿವಸಗಳ ಕಾಲ ಸರ್ಕಾರವನ್ನು ನಡೆಸಿಕೊಂಡು ಬಂದಿದ್ದೇವೆ.

**ಸಭಾಪತಿಯವರು:–** ಸಚಿವರಾದ ಗೋವಿಂದ ಕಾರಜೋಳರವರು ಏನೋ ಹೇಳಬಯಸುತ್ತಿದ್ದಾರೆ, ಅವರಿಗೆ ಅವಕಾಶ ನೀಡೋಣ.

**ಶ್ರೀಮತಿ ಮೋಟಮ್ಮ:–** ಈ ವಿಚಾರ ಸುಪ್ರೀಂಕೋರ್ಟಿಗೆ ಹೋಗಿ, ಅಲ್ಲಿ ತೀರ್ಮಾನ ಆದ ನಂತರ ಮೊದಲ ತೀರ್ಪು ಜಾರಿಯಲ್ಲಿರುವುದಿಲ್ಲ.

**ಸಭಾಪತಿಯವರು:–** ಇಲ್ಲಿ ನಾವೆಲ್ಲರೂ ನಮ್ಮ ಚರ್ಚೆಯ ಮಟ್ಟವನ್ನು ಉನ್ನತ ಸ್ಥಾನಕ್ಕೆ ತೆಗೆದುಕೊಂಡು ಹೋಗುವುದಕ್ಕೆ ಪ್ರಯತ್ನವನ್ನು ಮಾಡೋಣ. ಮಾನ್ಯ ವಿರೋಧ ಪಕ್ಷದ ನಾಯಕರು ಇಂತಹ ಕಾರಣಕ್ಕಾಗಿ ಇವತ್ತಿನ ಕಲಾಪಗಳನ್ನೆಲ್ಲ ಬದಿಗೊತ್ತಿ, ಈ ಬಗ್ಗೆ ಚರ್ಚೆಯನ್ನು ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಕೇಳಿದ್ದಾರೆ.ಈ ಮಧ್ಯದಲ್ಲಿ ಮಾನ್ಯ ಸಚಿವರಾದ ಗೋವಿಂದ ಕಾರಜೋಳರವರು ಏನೋ ಹೇಳಬಯಸುತ್ತಿದ್ದಾರೆ, ಅವರಿಗೆ ಅವಕಾಶ ನೀಡೋಣ.

**ಶ್ರೀ ಗೋವಿಂದ ಕಾರಜೋಳ:–** ಮಾನ್ಯ ಸಭಾಪತಿಗಳೇ, ಮಾನ್ಯ ವಿರೋಧ ಪಕ್ಷದ ನಾಯಕರು 'ಯಡಿಯೂರಪ್ಪನವರು ತಮ್ಮ ಸರ್ಕಾರವನ್ನು ಉಳಿಸಿಕೊಳ್ಳುವುದಕ್ಕೆ ಕಾನೂನುಬಾಹಿರವಾದ ಚಟುವಟಿಕೆಗಳನ್ನು ಮಾಡಿದ್ದಾರೆ' ಎನ್ನುವ ಮಾತನ್ನು ಹೇಳಿದರು. ಆದರೆ ಈ ರೀತಿಯ ಚಟುವಟಿಕೆಗಳು ಕಳೆದ ಮೂರು ವರ್ಷಗಳಲ್ಲಿ ಮಾತ್ರವಲ್ಲ ನೂರು ವರ್ಷಗಳಿಂದಲೂ ನಡೆದುಕೊಂಡು ಬಂದಿದೆ. ಎನ್ನುವ ಮಾತನ್ನು ನಾನು ಕೂಡ ಹೇಳುತ್ತೇನೆ.

**(ಗೊಂದಲ)**

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಹಿಂದೆ ಆಡಳಿತ ನಡೆಸಿದಂತಹ ಸರ್ಕಾರ ನೂರು ವರ್ಷಗಳ ಕಾಲ ಇದೇ ರೀತಿಯ ಆಡಳಿತವನ್ನು ನಡೆಸಿದ್ದಲ್ಲಿ

ನಾವ್ಯಾರು ಇಲ್ಲಿರಲಿಕ್ಕೆ ಸಾಧ್ಯವಾಗುತ್ತಿರಲಿಲ್ಲ ಎನ್ನುವ ವಿಚಾರ ಎಲ್ಲರಿಗೂ ತಿಳಿದಿದೆ. ಈ ರಾಷ್ಟ್ರದ ಮೌಲ್ಯಗಳನ್ನು ಹಾಗೂ ಸಂವಿಧಾನವನ್ನು ಕಾಪಾಡಲಿಕ್ಕೆ ನಮ್ಮ ಕೇಂದ್ರಸರ್ಕಾರ ಅತ್ಯಂತ ವಿಶಾಲ ಮನೋಭಾವನೆಯಿಂದ ನಡೆದುಕೊಂಡಿದೆ.ಅದನ್ನು ಎಲ್ಲರೂ ತಿಳಿದುಕೊಳ್ಳಬೇಕಾಗುತ್ತದೆ. ಕೇಂದ್ರ ಸರ್ಕಾರವೂ ಕೂಡ ಇದೇ ರೀತಿಯಲ್ಲಿ ನಡೆದುಕೊಂಡಿದ್ದರೆ ಪರಿಸ್ಥಿತಿಯೇ ಬೇರೆ ಆಗುತ್ತಿತ್ತು.ಈ ರಾಜ್ಯದಲ್ಲಿ ಈ ಸರ್ಕಾರ ತನ್ನದೇ ಆದ ತುಮುಲಗಳು ಹಾಗೂ ಭಿನ್ನಾಭಿಪ್ರಾಯಗಳಿಂದ ಕುಸಿದು ಹೋಗತಕ್ಕ ಸಂದರ್ಭದಲ್ಲಿಯೂ ಸಹ ಕೇಂದ್ರಸರ್ಕಾರದಲ್ಲಿರುವ ಕಾಂಗ್ರೆಸ್ ಪಕ್ಷ ಬಹಳ ವಿಶಾಲ ಮನೋಭಾವದಿಂದ ಈ ರಾಜ್ಯದಲ್ಲಿನ ಸರ್ಕಾರವನ್ನು ಉಳಿಸಿ ಬೆಳೆಸಿಕೊಂಡು ಬಂದಿದೆ.

**(ಗೊಂದಲ)**

**ಶ್ರೀ ವೀರಣ್ಣ ಮತ್ತಿಕಟ್ಟಿ:**-ಮಾನ್ಯ ಸಭಾಪತಿಗಳೇ, ನಮ್ಮ ದೇಶದ ಸಂವಿಧಾನವೂ ಇಡೀ ವಿಶ್ವದಲ್ಲಿಯೇ ಅತ್ಯಂತ ಶ್ರೇಷ್ಠ ಸಂವಿಧಾನ. ಇಂತಹ ಸಂವಿಧಾನವನ್ನು ಕೊಟ್ಟಿರುವವರು ನಮ್ಮ ಹಿರಿಯರು, ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯಲ್ಲಿರುವ ಮೌಲ್ಯಾಧಾರಿತ ಕಾಂಗ್ರೆಸ್ಸಿನ ಹಿರಿಯ ಮುತ್ಸದ್ಧಿಗಳು. ಇವತ್ತು ಈ ವಿಧಾನಮಂಡಲದಲ್ಲಿ ಸದನಗಳು ನಡೆಯುತ್ತಿರುವುದರಿಂದ ನಾವೆಲ್ಲರೂ ಇಲ್ಲಿ ಬಂದು ಮಾತನಾಡುತ್ತೇವೆ. ಇದಕ್ಕೆಲ್ಲ ಪೂರಕವಾಗಿ ಯಾರ ಶ್ರಮಿಸಿದ್ದಾರೆ ನಮ್ಮ ಹಿರಿಯ ಕಾಂಗ್ರೆಸ್ಸಿಗರು.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, .....

**ಶ್ರೀಮತಿ ಮೋಟಮ್ಮ:**-ಮಾನ್ಯ ಸಭಾಪತಿಗಳೇ, ಭಾರತಿಶೆಟ್ಟಿಯವರಿಗೆ ತಮ್ಮ ಅನುಮತಿಯನ್ನು ಪಡೆದು ಮಾತನಾಡುವಂತಹ ಪರಿಪಾಠ ಇಲ್ಲವೇ?

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಚಿವರಾದ ಕಾರಜೋಳರವರು ಮಾತನಾಡಲು ಸ್ವಲ್ಪ ಅವಕಾಶವನ್ನು ಕೊಡಿ.

**ಶ್ರೀ ಗೋವಿಂದ ಕಾರಜೋಳ:–**ಮಾನ್ಯ ಸಭಾಪತಿಗಳೇ, ನಮ್ಮ ಭಾಗದಲ್ಲಿ ನೀರು ಬಂದಾಗ ಎಲ್ಲರೂ ನಾ ಮುಂದು ತಾ ಮುಂದು ಎಂದು ನೀರನ್ನು ತುಂಬಿಕೊಳ್ಳಲು ಜಗಳ ಮಾಡುತ್ತಾರೆ. ಇಲ್ಲಿ ಆ ರೀತಿ ಆಗುವುದು ಬೇಡ. ಮಾನ್ಯ ವಿರೋಧ ಪಕ್ಷದ ನಾಯಕರು 'ಯಡಿಯೂರಪ್ಪನವರು ತಮ್ಮ ಸರ್ಕಾರವನ್ನು ಉಳಿಸಿಕೊಳ್ಳುವದಕ್ಕೆ ಕಾನೂನುಬಾಹಿರವಾದ ಚಟುವಟಿಕೆಗಳನ್ನು ಮಾಡಿದ್ದಾರೆ' ಎನ್ನುವ ಮಾತನ್ನು ಹೇಳಿದರು. ನಾನು ಒಂದು ಪ್ರಶ್ನೆಯನ್ನು ಕೇಳಬಯಸುತ್ತೇನೆ. ಯಾರೇ ಆಗಲಿ ನೀತಿ ಪಾಠವನ್ನು ಹೇಳುವ ಮೊದಲು ತಾವು ಕೂಡ ತಮ್ಮ ಕಡೆ ಸ್ವಲ್ಪ ಆತ್ಮಾವಲೋಕನವನ್ನು ಮಾಡಿಕೊಳ್ಳಬೇಕಾಗುತ್ತದೆ. ಈ ಮಾತನ್ನು ನಾನು ಪಕ್ಷಬೇಧವನ್ನು ಮರೆತು ಹೇಳುತ್ತಿದ್ದೇನೆ. ನಾನು ಸರ್ಕಾರದಲ್ಲಿರುವುದರಿಂದ ಈ ಮಾತನ್ನು ಹೇಳುತ್ತಿಲ್ಲ. ನಾನು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಕೇಳುವುದೇನೆಂದರೆ, ನಮ್ಮ ಸಿದ್ದರಾಮಯ್ಯನವರು ಜನತಾದಳ ಪಕ್ಷದಲ್ಲಿ ಬಹಳ ಗೌರವದಿಂದ ಇದ್ದರು. ಅವರನ್ನು ಅಲ್ಲಿಂದ ಬಿಡಿಸಿ ಕಾಂಗ್ರೆಸ್ ಪಕ್ಷಕ್ಕೆ ಏಕೆ ಕರೆದುಕೊಂಡು ಬಂದರು ಎನ್ನುವ ಮಾತನ್ನು ಹೇಳಬೇಕು.

**ಶ್ರೀ ಆರ್. ವಿ. ವೆಂಕಟೇಶ್:–** ಮಾನ್ಯ ಸಭಾಪತಿಗಳೇ, ಅವರು ಸ್ವಯಂಪ್ರೇರಿತವಾಗಿ ನಮ್ಮ ಪಕ್ಷಕ್ಕೆ ಬಂದಿದ್ದಾರೆ. ನಿಮ್ಮ ರೀತಿಯ ಪರಿಸ್ಥಿತಿ ನಮಗೇನು ಇರಲಿಲ್ಲ.

**(ಗೊಂದಲ)**

**ಸಭಾಪತಿಯವರು:–** ಈ ರೀತಿಯಾಗಿ ಹೊಸ ವಿಚಾರಗಳು ಚರ್ಚೆಗೆ ಬಂದಾಗ ಉತ್ತರ ನೀಡಲು ಅವಕಾಶ ಕೊಡಬೇಕೆಂದು ವೀರಣ್ಣ ಮತ್ತಿಕಟ್ಟಿಯವರು ಕೇಳಿದ್ದಾರೆ. ಇಲ್ಲಿ ಮಾತನಾಡುವುದನ್ನೆಲ್ಲ ನೋಟ್ ಮಾಡಿಕೊಳ್ಳಿ. ನಾನು ನಿಮಗೆ ಅವಕಾಶವನ್ನು ಕೊಡುತ್ತೇನೆ.

**ಶ್ರೀ ಗೋವಿಂದ ಕಾರಜೋಳ:–**ಮಾನ್ಯ ಸಭಾಪತಿಗಳೇ, ಹಿಂದೆ ಮಾನ್ಯ ಸಭಾಪತಿಗಳಾದ ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ಅವರ ಪಕ್ಷದ ಹಿರಿಯ ನಾಯಕರು ಈ ದೇಶಕ್ಕೆ ಸಂವಿಧಾನವನ್ನು ನೀಡಿದ್ದಾರೆ ಎನ್ನುವ ಮಾತನ್ನು ಹೇಳಿದ್ದರು. ಆದರೆ ಈ ಸಂವಿಧಾನವನ್ನು ಬರೆದಂತವರೆ ಈ ಕಾಂಗ್ರೆಸ್ ಪಕ್ಷವನ್ನು ಬಿಟ್ಟು ಹೊರಕ್ಕೆ ಹೋದರು. ಮತ್ತು "Congress is burning house" ಎನ್ನುವ ಮಾತನ್ನು ಹೇಳಿದರು. ಇದು ನಾನು ಹೇಳುತ್ತಿರುವ ಮಾತಲ್ಲ, ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಹೇಳಿದಂತಹ ಮಾತುಗಳನ್ನು ನಾನಿಲ್ಲಿ ಹೇಳುತ್ತಿದ್ದೇನೆ. ಕೇಂದ್ರಸರ್ಕಾರದಲ್ಲಿರುವ ಕಾಂಗ್ರೆಸ್ ಪಕ್ಷದವರ ದಯಾದಾಕ್ಷಿಣ್ಯದಿಂದ ಇವತ್ತು ನಮ್ಮ ರಾಜ್ಯದಲ್ಲಿ ನಮ್ಮ ಸರ್ಕಾರ ಉಳಿದುಕೊಂಡಿದೆ ಎನ್ನುವ ಮಾತನ್ನು ಹೇಳಿದರು. ಯಾರ ದಯಾದಾಕ್ಷಿಣ್ಯದಿಂದಲೂ ನಮ್ಮ ಸರ್ಕಾರ ಉಳಿದಿಲ್ಲ. ನಮ್ಮ ಸರ್ಕಾರಕ್ಕೆ ಬಹುಮತವಿದೆ, ಆದ್ದರಿಂದ ನಮ್ಮ ಸರ್ಕಾರ ಕಾನೂನಿನ ಚೌಕಟ್ಟಿನಲ್ಲಿಯೇ ಬಹುಮತ ಸಾಬೀತು ಪಡಿಸಿ ಉಳಿದುಕೊಂಡಿದೆಯೇ ಹೊರತು ಯಾರದೇ ದಯಾದಾಕ್ಷಿಣ್ಯದಿಂದ ನಮ್ಮ ಸರ್ಕಾರ ಉಳಿದುಕೊಂಡಿಲ್ಲ. ರಾಷ್ಟ್ರಪತಿ ಭವನದಲ್ಲಿ ನಮ್ಮ ತಲೆಗಳನ್ನು ಎಣಿಸತಕ್ಕ ಕೆಲಸವನ್ನು ಮಾಡಿ ನಮ್ಮ ಸರ್ಕಾರವನ್ನು ಉಳಿಸಿದ್ದಾರೆ.

**ಶ್ರೀ ನಸೀರ್ ಅಹಮದ್:–** 'ಆಪರೇಷನ್ ಕಮಲ' ದಿಂದ ನಿಮ್ಮ ಸರ್ಕಾರ ಉಳಿದುಕೊಂಡಿದೆ.

**(ಗೊಂದಲ)**

**ಶ್ರೀ ಸಿ.ಸಿ.ಪಾಟೀಲ್:–** ತಾಂತ್ರಿಕತೆ ಆಧಾರದ ಮೇಲೆ ನಮ್ಮ ಸರ್ಕಾರ ಉಳಿದಿದೆ.

**ಶ್ರೀ ಗೋವಿಂದ ಕಾರಜೋಳ:–** ಮಾನ್ಯ ಸಭಾಪತಿಗಳೇ, ಯಾರದೋ ದಯಾದಾಕ್ಷಿಣ್ಯದಿಂದ ನಮ್ಮ ಸರ್ಕಾರ ಉಳಿದುಕೊಂಡಿದೆ ಎನ್ನುವ ಮಾತನ್ನು

ನಾವು ಒಪ್ಪಿಕೊಳ್ಳುವುದಿಲ್ಲ. ನಮಗೆ ಬಹುಮತ ಇದ್ದ ಕಾರಣ ಕಾನೂನಿನ ಚೌಕಟ್ಟಿನಲ್ಲಿ ನಮ್ಮ ಸರ್ಕಾರ ಉಳಿದುಕೊಂಡಿದೆ. ಸುಪ್ರೀಂ ಕೋರ್ಟ್ ನಮ್ಮ ಸರ್ಕಾರಕ್ಕೆ ಛೀಮಾರಿ ಹಾಕಿದ್ದಾರೆ ಎನ್ನುವ ಮಾತನ್ನು ವಿರೋಧ ಪಕ್ಷದ ನಾಯಕರು ಹೇಳಿದರು. ಅನೇಕ ಸಂದರ್ಭಗಳಲ್ಲಿ ಲೋಕಸಭೆಯಲ್ಲಿ ಆಗಿರತಕ್ಕ proceedings ಬಗ್ಗೆ ಕೇಂದ್ರಸರ್ಕಾರ ಕೈಗೊಳ್ಳತಕ್ಕ ನಿರ್ಧಾರಗಳ ಬಗ್ಗೆ ಸುಪ್ರೀಂಕೊರ್ಟ್ ಮತ್ತು ಹೈಕೋರ್ಟ್‌ಗಳು ತಮ್ಮ ಆಕ್ಷೇಪಣೆಯನ್ನು ವ್ಯಕ್ತಪಡಿಸಿವೆ. ಅದರರ್ಥ ಛೀಮಾರಿ ಹಾಕುವುದು ಎಂದಲ್ಲ. ಅಥವಾ ಒಂದು ಸರ್ಕಾರದ ಬಗ್ಗೆ remark ಮಾಡಿದ್ದಾರೆ ಎಂದರ್ಥವಲ್ಲ. ಈಗ ಸಭಾಪತಿಗಳು ತಮ್ಮ ಅಧಿಕಾರದ ವ್ಯಾಪ್ತಿಯಲ್ಲಿ ಕಾನೂನಿನ ಚೌಕಟ್ಟಿನಲ್ಲಿ ಸಂವಿಧಾನಕ್ಕೆ ಬದ್ದವಾಗಿ ತಮ್ಮ ಕೆಲಸವನ್ನು ಮಾಡಿರುತ್ತಾರೆ. ಹೈಕೋರ್ಟ್‌ನವರು ಸಹ ತಮಗಿರುವ ಅಧಿಕಾರದ ವ್ಯಾಪ್ತಿಯಲ್ಲಿ ಕೆಲಸವನ್ನು ಮಾಡಿದ್ದಾರೆ. ಅದೇ ರೀತಿ ಸುಪ್ರೀಂಕೋರ್ಟ್‌ನವರು ಕೂಡ ತಮ್ಮ ಕೆಲಸವನ್ನು ಮಾಡಿದ್ದಾರೆ. ಈ ಬಗ್ಗೆ ಹೈಕೋರ್ಟ್ ನಮ್ಮ ಪರವಾಗಿ ಹೇಳಿದೆ, ಸುಪ್ರೀಂಕೋರ್ಟ್ ನಮ್ಮ ಪರವಾಗಿ ಹೇಳಿಲ್ಲ ಎನ್ನುವದು ಸರಿಯಲ್ಲ. ಕಾನೂನಿನ ವಿಶ್ಲೇಷಣೆಯನ್ನು ಪ್ರತಿಯೊಬ್ಬ ನ್ಯಾಯಾಧೀಶರು ಅವರಿಗಿರುವ ದೃಷ್ಟಿಕೋನ ಮತ್ತು ಅಧಿಕಾರದ ವ್ಯಾಪ್ತಿಗೆ ಒಳಪಟ್ಟು ಮಾಡುತ್ತಾರೆ.ಆದ್ದರಿಂದ ಯಾರೂ ಕೂಡ ಅದನ್ನು ಅಡ್ಡದಾರಿಯಲ್ಲಿ ತರತಕ್ಕ ಪ್ರಯತ್ನವನ್ನು ಮಾಡಬಾರದು.ಆದ್ದರಿಂದ ಕಾನೂನಿನ ಮತ್ತು ನಮ್ಮ ನಿಯಮಗಳ ಚೌಕಟ್ಟಿನಲ್ಲಿ ಏನು ಅವಕಾಶವಿದೆ ಆ ರೀತಿಯಲ್ಲಿ ಚರ್ಚೆಯನ್ನು ಮಾಡಿ, ಅದಕ್ಕೆ ಉತ್ತರವನ್ನು ನೀಡಲು ಸರ್ಕಾರ ಸಿದ್ಧವಿದೆ. ಆದರೆ ಏನೇನೋ ಮಾತನಾಡಿ ವಿಚಾರವನ್ನು ಎಲ್ಲೆಲ್ಲಿಗೋ ತೆಗೆದುಕೊಂಡು ಹೋಗುವುದು ಬೇಡ. ಇವರು ಹೇಳುವುದು ಹೇಗಿದೆ ಎಂದರೆ “ತಿನ್ನುವುದು ಬದನೆಕಾಯಿ, ಹೇಳುವುದು ಪುರಾಣ” ಎನ್ನುವ ಹಾಗಿದೆ. ಬದನೆಕಾಯಿಯನ್ನು ತಿನ್ನುವವರು ಪುರಾಣವನ್ನು ಹೇಳುವುದು ಬೇಡ.

**ಶ್ರೀಮತಿ ಮೋಟಮ್ಮ:**–ಮಾನ್ಯ ಸಭಾಪತಿಗಳೇ, ಈ ನೀತಿ ಅವರಿಗೂ ಸಹ ಅನ್ವಯವಾಗುತ್ತದೆ.

**ಶ್ರೀ ಎಸ್.ಎ.ರಾಮದಾಸ್:-** ಮಾನ್ಯ ಸಭಾಪತಿಗಳೇ, ನನ್ನದೊಂದು point of order ಇದೆ. Kaul and Shakdher ಅವರ 'Practice and Procedure of Parliament' ಪುಸ್ತಕದ 545ನೇ ಪುಟದಲ್ಲಿ ನಿಲುವಳಿ ಸೂಚನೆ ಬಗ್ಗೆ ಏನು ಹೇಳಿದ್ದಾರೆ ಎಂದರೆ"Conduct of the Speaker or an order passed by the Speaker should not be questioned" ಎಂದಿದೆ. ಅಂದರೆ ನಿಲುವಳಿ ಸೂಚನೆಯ ಅಡಿಯಲ್ಲಿ ಯಾವುದೇ ಸಭಾಧ್ಯಕ್ಷರು ಪಾಸ್ ಮಾಡಿರುವ ತೀರ್ಪಿನ ಬಗ್ಗೆ ಯಾವುದೇ ಕಾರಣಕ್ಕೂ ಸಹ ಚರ್ಚೆ ಮಾಡಲು ಸಾಧ್ಯವಿಲ್ಲ. ಎರಡನೆಯದಾಗಿ, ಅದೇ ಪುಸ್ತಕದ 546ನೇ ಪುಟದಲ್ಲಿ ಈ ರೀತಿ ಹೇಳಿದ್ದಾರೆ:

> "It has been observed by the Speaker that members should not make allegations or cast aspersions against members of statutory bodies, high dignitaries and the Governor of a State, Chief Minister or any other minister in a State Governmentand the State Legislature."

(11.00 ಗಂಟೆ)

ಇವರ ಬಗ್ಗೆ ಯಾವುದೇ ವಿಚಾರವನ್ನು ಚರ್ಚೆ ಮಾಡಲು, ನಿಲುವಳಿ ಸೂಚನೆ ಅಡಿಯಲ್ಲಿ ತರಲು ಸಾಧ್ಯವಿಲ್ಲ. ಇಲ್ಲಿ ಎರಡು matter ಗಳು ಇವೆ, ಅವರು ಕೊಟ್ಟಿರುವ ನೋಟಿಸ್‌ನ್ನು ದಯಮಾಡಿ ನೋಡಿ. ಇಬ್ಬರ ವಿಚಾರವನ್ನು ಅವರು ಇದರಲ್ಲಿ ಹೇಳಿದ್ದಾರೆ. ಇವರು ಕೊಟ್ಟಿರುವ ನೋಟಿಸ್‌ನಲ್ಲಿ ಸರ್ವೋಚ್ಚ ನ್ಯಾಯಾಯಲದ ಸಿವಿಲ್ ಅಪೀಲ್ ಸಂಖ್ಯೆಯನ್ನು ಹಾಕಿ ಐತಿಹಾಸಿಕ ತೀರ್ಪನ್ನು ನೀಡಿದೆ. ಕೇವಲ ಅಧಿಕಾರದಲ್ಲಿ ಉಳಿದುಕೊಳ್ಳಬೇಕೆಂಬ ಕಾರಣದಿಂದ ಸಂವಿಧಾನ ಹಾಗೂ ನೈತಿಕ ಮೌಲ್ಯಗಳಿಗೆ ವಿರುದ್ಧವಾಗಿ...this is the conduct of the Chief Minister and

the Speaker. ನಡುವಳಿಕೆ ಮಾನ್ಯ ಮುಖ್ಯಮಂತ್ರಿಗಳದ್ದಾಗಿರುತ್ತದೆ. "Conduct of the Chief Minister" ಏನು ಎನ್ನುವುದರ ಬಗ್ಗೆ ಅವರೇ ಪತ್ರದಲ್ಲಿ declare ಮಾಡಿದ್ದಾರೆ. ಪ್ರಜಾಪ್ರಭುತ್ವದ ಜನಾದೇಶ ಮತ್ತು ಸಂವಿಧಾನದ ಪ್ರಚಲಿತ ಪದ್ಧತಿಗಳಿಗೆ ವಿರುದ್ಧವಾಗಿ...ಸಂವಿಧಾನದ ವಿಚಾರದ ಬಗ್ಗೆ ಯಾವುದೇ ಕಾರಣಕ್ಕೂ ನಿಲುವಳಿ ಸೂಚನೆಯ ಅಡಿಯಲ್ಲಿ ಚರ್ಚೆ ಮಾಡಲು ಆಗುವುದಿಲ್ಲ ಎನ್ನುವುದು ಮೂರನೇ ಅಂಶ. ಹೀಗಿರುವಾಗ ಮಾನ್ಯ ಮುಖ್ಯಮಂತ್ರಿಗಳು ಅಧಿಕಾರದಲ್ಲಿ ಮುಂದುವರೆಯಲು ನೈತಿಕ ಹಕ್ಕನ್ನು ಕಳೆದುಕೊಂಡಿರುತ್ತಾರೆ, ಅದರ ಅರ್ಥ ಇಲ್ಲಿ ಪ್ರಶ್ನೆ ಮಾಡಿರುವುದು ಸ್ಪೀಕರ್‌ರವರ ರೂಲಿಂಗನ್ನು ಮತ್ತು ನ್ಯಾಯಾಲಯದ ವಿಚಾರವನ್ನು ಚರ್ಚೆ ಮಾಡುತ್ತಾ, ಮಾನ್ಯ ಮುಖ್ಯಮಂತ್ರಿಗಳ conduct ವಿಚಾರದಲ್ಲಿ ಚರ್ಚೆ ಮಾಡುತ್ತಿರುವದರಿಂದ ಅದನ್ನು ನಿಲುವಳಿ ಸೂಚನೆಯಲ್ಲಿ ಚರ್ಚೆ ಮಾಡಲು provision ಇಲ್ಲ. ಆದ್ದರಿಂದ ದಯಮಾಡಿ ಇದಕ್ಕೆ ಅವಕಾಶವನ್ನು ಕೊಡಬಾರದು.

**ಶ್ರೀ ಸಿ. ಸಿ. ಪಾಟೀಲ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು):–** ಮಾನ್ಯ ಸಭಾಪತಿಗಳೇ, ಮಾನ್ಯ ಹಿರಿಯ ಸಚಿವರು, ಸಭಾಪತಿಗಳ ಉನ್ನತವಾದ ಸ್ಥಾನದಲ್ಲಿ ಕುಳಿತು ಕಾರ್ಯನಿರ್ವಹಿಸಿದಂತಹ ಮಾನ್ಯ ವೀರಣ್ಣ ಮತ್ತೀಕಟ್ಟಿಯವರು ನಮ್ಮ ಭಾಗದವರು ಅವರ ಬಗ್ಗೆ ನನಗೆ ಅಪಾರ ಗೌರವವಿದೆ. ಮೊನ್ನೆ ನಡೆದಂತಹ ಬೆಳವಣಿಗೆಯಲ್ಲಿ ನಿಮ್ಮ ಸರ್ಕಾರವನ್ನು ಕೇಂದ್ರ ಸರ್ಕಾರ ತನ್ನ ಹೃದಯ ವೈಶಾಲ್ಯತೆಯಿಂದ ಉಳಿಸಿತು ಎಂದು ಹೇಳಿದರು. ಆದರೆ ನಮ್ಮ ಸರ್ಕಾರವನ್ನು ಕೆಡುವಬೇಕು ಎಂದು ರಾಜ್ಯ ಕಾಂಗ್ರೆಸ್‌ನವರು ಕೇಂದ್ರಕ್ಕೆ ಹೋದರಲ್ಲ ಇವರ ಹೃದಯ ವೈಶಾಲ್ಯತೆಯಿಂದ ಕೂಡಿದ್ದೋ ಅಥವಾ ಸಂಕೀರ್ಣದಿಂದ ಕೂಡಿದ್ದೋ ಎನ್ನುವುದಷ್ಟನ್ನೇ ನಾನು ಕೇಳುವುದು.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಅದನ್ನು ನಾವು ಹೇಳುತ್ತೇವೆ, ಮೊದಲು ನಿಮ್ಮ ಮಾತನ್ನು ನಾವು ಕೇಳುತ್ತೇವೆ. ನಂತರ ನಾವು ಹೇಳುವುದನ್ನು ನೀವು ಸಮಾಧಾನದಿಂದ ಕೇಳಬೇಕು.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):–**ಮಾನ್ಯ ಸಭಾಪತಿಗಳೇ, ನಾವು ನಿಮ್ಮನ್ನು ಕೆಡವಲು ಹೋಗಲಿಲ್ಲ. ನಿಮ್ಮನ್ನು ಕೆಡುವಲು ನಿಮ್ಮ ಹಿಂದೆಯೇ ನಿಮ್ಮ ಜನ ಇದ್ದಾರೆ. ಆದರೂ ಬೀಳಲಿಲ್ಲವಲ್ಲ, ಏಕೆ ಬೀಳಲಿಲ್ಲ ಎನ್ನುವುದನ್ನು ನಾವು ನೋಡಲು ಅಲ್ಲಿಗೆ ಹೋಗಿದ್ದೆವು.

**ಶ್ರೀ ಆರ್.ವಿ.ವೆಂಕಟೇಶ್:–** ಸರ್ಕಾರವನ್ನು ಉಳಿಸಿಕೊಳ್ಳುವುದೊಂದೇ ಅವರ ವಿಚಾರವಾಗಿದೆ.

**ಶ್ರೀ ಸಿ.ಸಿ.ಪಾಟೀಲ್:–** ಏನೂ ಮಾಡಲು ಆಗುವುದಿಲ್ಲ ನಿಮ್ಮ ಕೈಯಿಂದ.

**ಶ್ರೀ ಆರ್.ವಿ.ವೆಂಕಟೇಶ್:–** ನಿಮ್ಮ ಕೈಯಿಂದ ಏನೂ ಮಾಡಲು ಆಗುವುದಿಲ್ಲ ಎಂದು ಭಂಡತನದಿಂದ ಮಾತನಾಡುತ್ತಿದ್ದಾರೆ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ನೀವು ಮಾತನ್ನು ಮುಂದುವರೆಸುತ್ತೀರಾ ಅಥವಾ ಮಾನ್ಯ ವೀರಣ್ಣ ಮತ್ತೀಕಟ್ಟಿಯವರಿಗೆ ಮಾತನಾಡಲು ಅವಕಾಶವಿದೆಯೇ? ಅವರಿಗೆ ಅವಕಾಶವಿದ್ದರೆ ಮಾತನಾಡಲು ನಾನು ಅವರಿಗೆ ಅವಕಾಶವನ್ನು ಕೊಡುತ್ತೇನೆ.

**ಶ್ರೀಮತಿ ಮೋಟಮ್ಮ:–**ಅವಕಾಶ ಕೊಡಿ ಎಂದು ನಾನು ಕೇಳಿದ್ದೇನೆ. ಆದರೆ ಈ ಮಧ್ಯೆ strictures ಬಂತು ಅದಕ್ಕೆ ನಾನು ಉತ್ತರ ಹೇಳುತ್ತಿದೇನೆ.

**ಶ್ರೀ ಗಣೇಶ್ ಕಾರ್ಣಿಕ್:–**ಮಾನ್ಯ ಸಭಾಪತಿಗಳೇ,point of order ಬಗ್ಗೆ ತಾವು ಏನು ಹೇಳಲಿಲ್ಲ.

**ಸಭಾಪತಿಯವರು:**–point of order ಬಗ್ಗೆ ನಾನು ಪುಸ್ತಕ ತರಿಸಿ ನೋಡುತ್ತಿದ್ದೇನೆ. ಮಾನ್ಯ ವೀರಣ್ಣ ಮತ್ತೀಕಟ್ಟಿಯವರು ಹಿರಿಯರು, ಅವರು ಮಾತನಾಡುತ್ತೇನೆ ಎಂದು ಕೇಳುತ್ತಿದ್ದಾರೆ, ಅವರು ಮಾತನಾಡಲಿ, ನಾನು ನಂತರ ತೀರ್ಮಾನವನ್ನು ತಿಳಿಸುತ್ತೇನೆ. ಮಾನ್ಯ ಸುದರ್ಶನ್‌ರವರು ಮಾತನಾಡಲಿ, ಅವಕಾಶವನ್ನು ಕೊಡುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ point ಬಗ್ಗೆ ಹೇಳಿ ಮುಗಿಸಬೇಕು. ಈಗ clarifications, point of order ಇದರಲ್ಲಿಯೇ ಚರ್ಚೆ ನಡೆದರೆ subject ಎಲ್ಲಿಗೋ ಹೋಗಿ ಬಿಡುತ್ತದೆ.

**ಶ್ರೀ ಗೋ.ಮಧುಸೂಧನ್:**–ಮಾನ್ಯ ಸಭಾಪತಿಗಳೇ, ನಾನು ಒಂದು ವಿಚಾರವನ್ನು ಹೇಳಿಬಿಡುತ್ತೇನೆ. ಅದಕ್ಕೆ ನಮ್ಮ ಅಕ್ಕನವರು ಅವಕಾಶ ಕೊಡುತ್ತಾರೆ.

**ಶ್ರೀಮತಿ ಮೋಟಮ್ಮ:**–ತಾವು ನಂತರ ಮಾತನಾಡಿ, ಹಿರಿಯರು ಮಾತನಾಡಿರುವುದರ ಬಗ್ಗೆ ನಾನು ಸ್ವಲ್ಪ ಹೇಳಿ ಮುಗಿಸುತ್ತೇನೆ. ನಿಮ್ಮ ಸರ್ಕಾರ ಇದ್ದಾಗ ಏಕೆ ಮಾನ್ಯ ಸಿದ್ಧರಾಮಯ್ಯನವರನ್ನು ಕರೆದುಕೊಂಡು ಬಂದಿದ್ದೀರಿ ಎಂದು ಹಿರಿಯರಾದ ಮಾನ್ಯ ಕಾರಜೋಳರವರು ಒಂದು ಮಾತನ್ನು ಹೇಳಿದರು, ಆದರೆ ಇವರ ರೀತಿ ನಾವು "ಆಪರೇಶನ್ ಕಮಲ" ಮಾಡಿ ಸಿದ್ದರಾಮಯ್ಯನವರನ್ನು ಕರೆಯಲು ಹೋಗಿರಲಿಲ್ಲ, ಆದರೆ ಮಾನ್ಯ ಸಿದ್ದರಾಮಯ್ಯನವರಿಗೆ ಆ ಪಕ್ಷದಲ್ಲಿ ಇರಲು ಆಗಲಿಲ್ಲ, ಅವರಿಗೆ ಹಲವು ಆತಂಕಗಳು ಉಂಟಾಗಿರುವುದರಿಂದ...

**ಸಭಾಪತಿಯವರು:**– ಬೇರೆ ಸದನದ ಸದಸ್ಯರ ಬಗ್ಗೆ ಚರ್ಚೆ ಮಾಡುವುದು ಬೇಡ.

**ಶ್ರೀಮತಿ ಮೋಟಮ್ಮ:-**ಇವರ ರೀತಿ ನಾವೇನು "ಆಪರೇಶನ್ ಕಮಲ" ಮಾಡಿದ್ದೆವೆಯೇ? ಕಾಂಗ್ರೆಸಿನ ತತ್ವ ಸಿದ್ಧಾಂತಕ್ಕೆ ಒಪ್ಪಿ ಅವರು ಬಂದಿದ್ದಾರೆ.

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:-**ಇವರು ಏನು ಮಾಡಲಿಲ್ಲವೇ?

**ಶ್ರೀಮತಿ ಮೋಟಮ್ಮ:-** ನಾನು ಮಾತನಾಡುತ್ತಿರುವಾಗ ತಾವು ಅವರಿಗೆ ಮಾತನಾಡಲು ಅನುಮತಿ ಕೊಡುವುದಾದರೆ ನಾನು ಮಾತೆ ಆಡುವುದಿಲ್ಲ ಬಿಡಿ. ಸುಮ್ಮನೆ ಮಧ್ಯೆದಲ್ಲಿ ಬಾಯಿ ಹಾಕುವುದು ಸರಿಯಲ್ಲ. ಯಾರದಾರು ಮಾತನಾಡಬೇಕಾದರೆ ನಿಮ್ಮ ಅನುಮತಿಯನ್ನು ಪಡೆದುಕೊಂಡು ಮಾತನಾಡಬೇಕು.

**ಸಭಾಪತಿಯವರು:-** ವೀರಣ್ಣ ಮತ್ತೀಕಟ್ಟಿಯವರು ಮಾತನಾಡುತ್ತಾರೆ. ಮಾನ್ಯ ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ ಕುಳಿತುಕೊಳ್ಳಿ.

**ಶ್ರೀ ವೀರಣ್ಣ ಮತ್ತೀಕಟ್ಟಿ:-** ಸದನದಲ್ಲಿ ಒಟ್ಟು 5 ಜನ ಮಹಿಳೆಯರು ಇದ್ದಾರೆ. ಒಬ್ಬರು ಮಾತನಾಡುವಾಗ ಇನ್ನೊಬ್ಬರು ಮಧ್ಯೆ ಮಾತನಾಡಬಾರದು. ಮಾನ್ಯ ಭಾರತಿ ಶೆಟ್ಟಿಯವರಿಗೆ ನಾನು ವಿನಂತಿ ಮಾಡಿಕೊಳ್ಳುವುದು.ನಮ್ಮ ವಿರೋದ ಪಕ್ಷದ ನಾಯಕಿಯವರು ಮಾತನಾಡುವಾಗ ದಯಮಾಡಿ ಮಧ್ಯೆ ಮಾತನಾಡಬೇಡಿ. ನೀವು ಬೇಕಾದರೆ ಗಂಡುಮಕ್ಕಳು ಮಾತನಾಡುವಾಗ ಮಾತನಾಡಿ.ಆದರೆ ನಮ್ಮ ನಾಯಕಿಯವರು ಮಾತನಾಡುವಾಗ ತಾವು ಮಧ್ಯೆದಲ್ಲಿ ಮಾತನಾಡುವುದು ಒಳ್ಳೆಯದಲ್ಲ. ಇದು ಒಳ್ಳೆಯ ಪರಂಪರೆಯೂ ಅಲ್ಲ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಗಳೇ, ಇಲ್ಲಿ ಹೆಣ್ಣುಮಕ್ಕಳು, ಗಂಡು ಮಕ್ಕಳು ಎನ್ನುವ ಪ್ರಶ್ನೆ ಬರುವುದಿಲ್ಲ. ಯಾರೇ ಆಗಲಿ ನಿಯಮಬದ್ಧವಾಗಿ ಮಾತನಾಡಬೇಕು. ಸಭಾಪತಿಗಳೇ ಎಂದು ತಮ್ಮ ಅನುಮತಿಯನ್ನು ಪಡೆದು ನಾವು ಮಾತನಾಡುತ್ತೇವೆ. ನಿಮ್ಮ ಅನುಮತಿ ಇಲ್ಲದೆ

ನಾವು ಮಾತನಾಡುವುದಿಲ್ಲ. ಹಾಗೆ ಎಲ್ಲರೂ ತಮ್ಮ ಅನುಮತಿಯನ್ನು ಪಡೆದೇ ಮಾತನಾಡಬೇಕು. ಆದರೆ ಯಾವಾಗಲು ತಮ್ಮ ಅನುಮತಿಯನ್ನು ಪಡೆಯದೆ ಅವರು ಮಧ್ಯೆ ಮಾತನಾಡುವುದು ಎಷ್ಟರಮಟ್ಟಿಗೆ ಸರಿ?ಅವರ ಸದಸ್ಯತ್ವಕ್ಕೆ ಅದು ತಕ್ಕದ್ದಲ್ಲ. ಒಬ್ಬ ಸದಸ್ಯರಾಗಿ ಶಿಸ್ತನ್ನು ಬೆಳಿಸಿಕೊಳ್ಳಬೇಕು. ಶಿಸ್ತು ಇಲ್ಲದೇ ಹೋದರೆ ಅದಕ್ಕೆ ಏನು ಮರ್ಯಾದೆ ಇರುತ್ತೇ?

**ಶ್ರೀ ಗೋ.ಮಧುಸೂಧನ್:–**ವಿರೋಧ ಪಕ್ಷದ ನಾಯಕರು ಮಾನ್ಯ ಸಿದ್ಧರಾಮಯ್ಯನವರನ್ನು ಕಾಂಗ್ರೆಸ್‌ಗೆ ಹೇಗೆ ಕರೆದುಕೊಂಡು ಬರಲಾಯಿತು ಎನ್ನುವುದನ್ನು ಹೇಳುತ್ತಿದ್ದರು, ಅದನ್ನು ಅರ್ಧಕ್ಕೆ ಬಿಟ್ಟರು, ಅವರು ಅದನ್ನು ದಯಮಾಡಿ ಪೂರ್ಣ ಹೇಳಬೇಕು.

**ಸಭಾಪತಿಯವರು:–**ಬೇರೆ ಸದನದ ಸದಸ್ಯರ ವಿಚಾರ ಇಲ್ಲಿ ಮಾತನಾಡುವುದು ಬೇಡ.

**ಶ್ರೀಮತಿ ಮೋಟಮ್ಮ:–** ನಾವು ಅವರನ್ನು ಕರೆದುಕೊಂಡು ಬರಲಿಲ್ಲ. ಅವರೇ ಸ್ವಪ್ರೇರಣೆಯಿಂದ ಕಾಂಗ್ರೆಸ್ಸಿನ ತತ್ವ ಸಿದ್ಧಾಂತಗಳನ್ನು ಒಪ್ಪಿ ಬಂದಿದ್ದಾರೆ. ಚುನಾವಣೆಯಲ್ಲಿ ಗೆದ್ದು ಬಂದಿದ್ದಾರೆ.

**ಸಭಾಪತಿಯವರು:–** ಪ್ರಾಸಂಗಿಕವಾಗಿ ಬಂದಾಗ ನಾನು ಹೆಚ್ಚಾಗಿ ಮಧ್ಯೆ ಬಾಯಿ ಹಾಕುವುದಿಲ್ಲ. ಆದರೆ ಬೇರೆ ಸದನದ ಸದಸ್ಯರ ಬಗ್ಗೆ ಅವರ ಹೆಸರನ್ನು ತೆಗೆದುಕೊಂಡು ನಮ್ಮ ಸದನದಲ್ಲಿ ಚರ್ಚೆ ಮಾಡುವುದು ಸರಿಯಲ್ಲ. ಚರ್ಚೆ ಮಾಡುವಾಗ ಪ್ರಾಸಂಗಿಕವಾಗಿ ಒಂದೊಂದು ಸಾರಿ ಬರುತ್ತದೆ ಅದೇನು ತಪ್ಪಲ್ಲ. ಆದರೆ ಅದನ್ನೇ ತೆಗೆದುಕೊಂಡು ಉದ್ದಕ್ಕೆ ಚರ್ಚೆ ಮಾಡುವುದು ಸರಿಯಲ್ಲ. ಮಾನ್ಯ ಸಚಿವರಾದ ರಾಮದಾಸ್‌ರವರು Kaul and Shakdher ಅವರ 'Practice and Procedure of Parliament'ಪುಸ್ತಕದ ಉಲ್ಲೇಖ ಮಾಡಿ ಒಂದು ಮಾತನ್ನು ಹೇಳಿದರು. 546ನೇ ಪುಟದಲ್ಲಿ

"It has been observed by the Speaker that members should not make allegations or cast aspersions against members of statutory bodies, high dignitaries and the Governor of a State, Chief Minister or any other minister in a State Government and the State Legislature."

ಎನ್ನುವ ಪದಗಳನ್ನು ಹೇಳಿದ್ದಾರೆ. ಸ್ಪೀಕರ್ ಮತ್ತು ಮುಖ್ಯಮಂತ್ರಿಗಳ ಮೇಲೆ ಇರುವ ವಿಚಾರ ಇದು. ಅದಕ್ಕಾಗಿ ಇದಕ್ಕೆ ಅವಕಾಶ ಕೊಡಬೇಡಿ ಎಂದು ಹೇಳಿದ್ದಾರೆ. ನಾನು ಪ್ರಾರಂಭದಲ್ಲಿಯೇ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹೇಳಿದೆ, ಅದನ್ನು ಅವರು ಅರ್ಥ ಮಾಡಿಕೊಂಡು ಅಲ್ಲಿಗೇ ಕೈ ಬಿಟ್ಟರು. ಸ್ಪೀಕರ್‌ರವರ ನಡುವಳಿಕೆಯಾಗಲಿ, ಅವರು ಕೊಟ್ಟಿರುವಂತಹ ತೀರ್ಪುಗಳನ್ನಾಗಲಿ ಇಲ್ಲಿ ನಾವು ಚರ್ಚೆ ಮಾಡಲು ನಮಗೆ ಅಧಿಕಾರವಿಲ್ಲ, ಚರ್ಚೆಗೆ ನಾನು ಅವಕಾಶವನ್ನು ಕೊಡುವುದಿಲ್ಲ. ಪ್ರಾಸಂಗಿಕವಾಗಿ ಅದನ್ನು ಉಲ್ಲೇಖ ಮಾಡಬಹುದು, ಚರ್ಚೆಗೆ ಅವಕಾಶವಿಲ್ಲ. ಮುಖ್ಯಮಂತ್ರಿಗಳ ನಿರ್ಣಯವನ್ನು ಚರ್ಚೆ ಮಾಡಲು ಅವಕಾಶವಿಲ್ಲ. ಬೇಕಾದರೆ ಬೇರೆ ರೀತಿಯ ನಿಯಮಗಳಲ್ಲಿ ಅದನ್ನು ತಂದು ಚರ್ಚೆ ಮಾಡಬಹುದು. ಆದರೆ ಇವರು ಎತ್ತಿರುವ ನಿಲುವಳಿ ಸೂಚನೆಯಲ್ಲಿ ನೈತಿಕತೆಯ ಪ್ರಶ್ನೆಯನ್ನು ಎತ್ತಿ, ಇದರ ಹಿನ್ನಲೆಯಲ್ಲಿ ನಮಗೆ ಚರ್ಚೆಗೆ ಅವಕಾಶ ಕೊಡಿ ಎಂದು ಕೇಳುತ್ತಿದ್ದಾರೆ.ಇದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ನಾಲ್ಕು ಮಾತುಗಳನ್ನಾಡಿದ್ದಾರೆ. ಇನ್ನು ಹಿರಿಯ ಸದಸ್ಯರಾದ ವೀರಣ್ಣ ಮತ್ತೀಕಟ್ಟಿಯವರು, ಸುದರ್ಶನ್‌ರವರು ತಮ್ಮ ಅಭಿಪ್ರಾಯಗಳನ್ನು ಹೇಳಬೇಕು ಎಂದು ಹೇಳಿದ್ದಾರೆ. ತಮ್ಮ objectionಗೆ ಏನು ಸಮಜಾಯಿಸಿ ಹೇಳಬೇಕು ಅದನ್ನು ಹೇಳಿದ್ದೇನೆ ಎಂದು ನಾನು ಅಂದುಕೊಂಡಿದ್ದೇನೆ. ಈಗ ಸರ್ಕಾರದಿಂದ ಏನು ಉತ್ತರ ಬರುತ್ತದೆ ಕೇಳಿದ ನಂತರ ನನ್ನ ನಿರ್ಣಯವನ್ನು ಹೇಳಬಹುದೇ ಹೊರತು

ಪ್ರಾರಂಭದಲ್ಲಿಯೇ ನನ್ನ ನಿರ್ಣಯವನ್ನು ಹೇಳಿದರೆ ಅದಕ್ಕೆ ಅವಕಾಶವೇ ಇಲ್ಲದ ಹಾಗೇ ಆಗುತ್ತದೆ. ಈಗ ವೀರಣ್ಣ ಮತ್ತೀಕಟ್ಟಿಯವರು ಮಾತನಾಡಬೇಕು.

**ಶ್ರೀ.ಎಸ್.ಎ.ರಾಮದಾಸ್(ವೈದ್ಯಕೀಯ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಗಳೇ, ತಮ್ಮ ವಿಚಾರವನ್ನು ನಾನು ಸ್ವಾಗತ ಮಾಡುತ್ತೇನೆ. ಮಾನ್ಯ ಅಧ್ಯಕ್ಷರ ವಿಚಾರವನ್ನು ನಾನು ಎತ್ತಿದ್ದೇನೆ. ಅದರ ಜೊತೆಯಲ್ಲಿ ಇನ್ನೊಂದು ಅಂಶವನ್ನು ನಾನು ಹೇಳಿದೆ, ಅದನ್ನು ತಮ್ಮ ಗಮನಕ್ಕೆ ತಂದೆ. ಅದರಲ್ಲಿ "interpretation of the provisions of the Constitution is desired, ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟ್‌ನ ನಿರ್ಣಯಗಳ ಬಗ್ಗೆಯು ಕೂಡ ನಾವು ನಮ್ಮ ಇಚ್ಛೆಯ ಪ್ರಕಾರ ಅದನ್ನು ವಿಶ್ಲೇಷಣೆ ಮಾಡಬಾರದು" ಎಂದು ಇದೆ. ಅದನ್ನು ನಾನು ತಮ್ಮ ಗಮನಕ್ಕೆ ತಂದೆ.

**ಶ್ರೀಮತಿ ಮೋಟಮ್ಮ:–**ಮಾನ್ಯ ಸಭಾಪತಿಗಳೇ, ನಾವು ಸ್ವಯಂ ಪ್ರೇರಣೆಯಿಂದ ಮಾನ್ಯ ಮುಖ್ಯಮಂತ್ರಿಗಳ ಬಗ್ಗೆಯಾಗಲೀ, ಕೆಳಮನೆ ಅಧ್ಯಕ್ಷರ ಬಗ್ಗೆಯಾಗಲೀ ವಿಷಯವನ್ನು ಪ್ರಸ್ತಾಪ ಮಾಡಲು ಹೋಗಲಿಲ್ಲ. ಸುಪ್ರೀಂ ಕೋರ್ಟ್ ಒಂದು ಮಹತ್ತರವಾದ ತೀರ್ಪನ್ನು ಕೊಟ್ಟಿದೆ. ಮಾನ್ಯ ಕಾರಜೋಳರವರು ಸುಪ್ರೀಂ ಕೋರ್ಟ್ ನಮಗೆ ಛೀಮಾರಿ ಹಾಕಿದೆ ಎಂದು ಹೇಳಿದ್ದಾರೆ ಎಂದು ಅವರು ತಮಗೆ ತಾವೇ ಹೇಳಿಕೊಂಡರು. ಆದರೆ ನಾನು ಆ ಪದವನ್ನು ಬಳಿಸಿರುವುದಿಲ್ಲ. ಸುಪ್ರೀಂ ಕೋರ್ಟ್ ಮಹತ್ತರವಾದ ತೀರ್ಪನ್ನು ತೀವ್ರತರವಾದ ಪದಗಳನ್ನು ಬಳಕೆ ಮಾಡಿ ಕೊಟ್ಟಿದೆ ಎಂದು ಹೇಳಿದ್ದೇನೆ. ಇದು ನಮ್ಮ ರಾಜ್ಯ ಸರ್ಕಾರಕ್ಕೆ ಅಗೌರವ ತರುವ ರೀತಿಯಲ್ಲಿ ಆಗಿದೆ. ನಮ್ಮ ರಾಜ್ಯದ ಜನತೆಗೆ ಧಕ್ಕೆ ತರುವ ಹಾಗೆ ಆಗಿದೆ. ಮಾನ್ಯ ಮುಖ್ಯಮಂತ್ರಿಗಳ ಮತ್ತು ಸ್ಪೀಕರ್‌ರವರ ಬಗ್ಗೆ ತುಂಬಾ serious ಆದ strictures‌ನ್ನು ಸುಪ್ರೀಂ ಕೋರ್ಟ್ ಏನು pass ಮಾಡಿದೆ ಅದರ ಬಗ್ಗೆ ನಾವು ಗಮನಹರಿಸಬೇಕಾಗಿದೆ. ಸುಪ್ರೀಂ ಕೋರ್ಟ್ ಆರ್ಡರ್‌ನ ಪುಟ ಸಂಖ್ಯೆ 123ರಲ್ಲಿ ಹೇಳುತ್ತಾರೆ: " The objective…

**ಸಭಾಪತಿಯವರು:-** ಅದು strictures ಎಂದು ಅವರು ಹೇಳಿದ್ದಾರೆ. ಅದು strictures ಹೌದೋ ಅಲ್ಲವೋ ಅದನ್ನು ಸಭೆ ನಿರ್ಣಯ ಮಾಡಿಲ್ಲ, ಅದು ಅವರ ಅಭಿಪ್ರಾಯ. ಅವರ ಅಭಿಪ್ರಾಯವನ್ನು ಅವರು ಹೇಳಲಿ.

**ಶ್ರೀ ಗಣೇಶ ಕಾರ್ಣಿಕ್:-**ಅದು ಕಡತಕ್ಕೆ ಹೋಗಿದೆ.

**ಸಭಾಪತಿಯವರು:-** ಸದನದ ನಿರ್ಣಯ ಯಾವಾಗಲೂ ಅವರು ಹೇಳಿದ ಮಾತಿನ ಆಧಾರದ ಮೇಲೆ....

**Dr.** S. R. LEELA:- Mr. Chairman, Sir, let them not say it is 'stricture' again and again. It is an observation.

**ಸಭಾಪತಿಯವರು:-** ಅವರ ಅಭಿಪ್ರಾಯವನ್ನು ಹೇಳುತ್ತಿದ್ದಾರೆ, ಅದನ್ನು ಒಪ್ಪುವುದೂ ಬಿಡುವುದು ಸರ್ಕಾರದ ಜವಾಬ್ದಾರಿ, ಸರ್ಕಾರವು ಒಪ್ಪುವುದಕ್ಕೆ ಸಾಧ್ಯವಿಲ್ಲ ಎಂದು ವಾದ ಮಂಡಿಸಿ, ಆ ವಾದ ಸರಿಯಿದ್ದರೆ ಅದನ್ನು ನಾನು ಎತ್ತಿಹಿಡಿಯುತ್ತೇನೆ. ಅವರು ಮಾತನಾಡಿದ ನಂತರ ಸರ್ಕಾರ ಹೇಳುತ್ತದೆ.

**ಶ್ರೀಮತಿ ಮೋಟಮ್ಮ:-** ತೀರ್ಪಿನ 126ನೇ ಪುಟದಲ್ಲಿ ಸಭಾಧ್ಯಕ್ಷರ ಬಗ್ಗೆ ಹೇಳಿದ್ದಾರೆ. "The object behind the said paragraph is to ensure that the Speaker while holding the office acts absolutely impartially without any leaning towards any party including the party from which he is elected to the House"ಎಂದು ಹೇಳಿದ್ದಾರೆ. ಇದನ್ನು ನಾನು ಹೇಳಿಲ್ಲ. ತೀರ್ಪಿನಲ್ಲಿ ತಿಳಿಸಿರುವುದನ್ನು ಗಮನದಲ್ಲಿಟ್ಟುಕೊಂಡು ಪಕ್ಷಾತೀತವಾಗಿ ಇರಬೇಕಾದವರು ಪಕ್ಷಪಾತವಾಗಿ ನಡೆದುಕೊಳ್ಳುವ ಕೆಲಸ ಮಾಡಿದ್ದರಿಂದ 16 ಜನರ ಕ್ಷೇತ್ರಗಳು 7 ತಿಂಗಳು ಅನಾಥವಾದವು. ಅಲ್ಲಿ ಯಾವುದೇ ಸಭೆ ಆಗಿಲ್ಲ, ಓಟು ಹಾಕಿದವರ ಗತಿ ಏನಾಗಬೇಕು? ಅವರು ಯಾರ ಹತ್ತಿರ ಕಷ್ಟ-ಸುಖ ಹೇಳಿಕೊಳ್ಳಬೇಕು. ಮತ್ತೆ ಸುಪ್ರೀಂಕೋರ್ಟ್ ತೀರ್ಪು ಸರ್ಕಾರದ ವಿರುದ್ಧ

ಬರುತ್ತದೆ ಎಂಬ ದುರದ್ದೇಶದಿಂದ 3 ಜನ ಶಾಸಕರು ಹಾಗೂ ವಿರೋಧ ಪಕ್ಷವನ್ನು ಹತ್ತಿಕ್ಕುವ ದೃಷ್ಟಿಯಲ್ಲಿ ಆಪರೇಷನ್ ಕಮಲ ಮಾಡಿ, ದಿಢೀರ 3 ಕ್ಷೇತ್ರಗಳಿಗೆ ಚುನಾವಣೆ ಮಾಡಿದರು. ಇದು ಎಷ್ಟರಮಟ್ಟಿಗೆ ಸರಿ? ಸಾರ್ವಜನಿಕವಾಗಿ ಇದರ ಬಗ್ಗೆ ಏನು ಅನಿಸುತ್ತದೆ ಎಂದರೆಸರ್ಕಾರವನ್ನು ಉಳಿಸಿಕೊಂಡು, ಕುರ್ಚಿಯನ್ನು ಗಟ್ಟಿಮಾಡಿಕೊಳ್ಳಬೇಕು ಎಂಬ ದೃಷ್ಟಿಯಿಂದ ಸಂವಿಧಾನ ಬಾಹಿರವಾದ ಕೆಲಸವನ್ನು ಶ್ರೀ ಯಡಿಯೂರಪ್ಪನವರ ನಾಯಕತ್ವದಲ್ಲಿ ನಡೆಸುತ್ತಿದ್ದಾರೆ. ಇದು ಸರಿಯಲ್ಲ, ಇದು ಆಗಬಾರದು, ಇದರ ಬಗ್ಗೆ ವಿಸ್ತೃತವಾಗಿ ಚರ್ಚೆ ಆಗಬೇಕು ಎಂಬ ದೃಷ್ಟಿಯಿಂದ ನಿಯಮ 59ರಲ್ಲಿ ಅವಕಾಶ ಕೊಡಬೇಕೆಂದು ಪ್ರಸ್ತಾಪ ಮಾಡುತ್ತಿದ್ದೇನೆ ಮತ್ತು ಅದಕ್ಕೆ ಅವಕಾಶ ಕೊಡಬೇಕೆಂದು ಕೋರುತ್ತೇನೆ.

**ಶ್ರೀ ಗೋ. ಮಧುಸೂದನ್:**–ಮಾನ್ಯ ಸಭಾಪತಿಯವರೇ, ತಾವು ಒಳ್ಳೆಯ ಪರಂಪರೆಯನ್ನು ಅಂದರೆ ಕೆಳಮನೆಯ ಸದಸ್ಯರ ಹೆಸರುಗಳನ್ನು ಪ್ರಸ್ತಾಪಿಸಿ ಮಾತನಾಡುವುದು ಸರಿಯಲ್ಲ ಎಂದು ಈಗಷ್ಟೇ ಬೋಧನೆ ಮಾಡಿದಿರಿ. ಈ ಮನೆಯ ಸದಸ್ಯರಲ್ಲದಿರುವವರ ಬಗ್ಗೆ ಚರ್ಚೆಯಾಗುವುದು ಸರಿಯಲ್ಲ ಎಂದು ಹೇಳಿದಿರಿ. ಅಂದರೆ ಕೆಳಮನೆಯ ಸದಸ್ಯರ ವಿಷಯವನ್ನು ತಾವು ಇಷ್ಟೊಂದು ಗಂಭೀರವಾಗಿ ಪರಿಗಣಿಸಿರುವಾಗ, ಕೆಳಮನೆಯ ಮಾನ್ಯ ಸಭಾಧ್ಯಕ್ಷರ ಬಗ್ಗೆ ಚರ್ಚೆ ಮಾಡಬಹುದೇ?

**ಸಭಾಪತಿಯವರು:**–ಇಲ್ಲ, ಖಂಡಿತ ಸಾಧ್ಯವಿಲ್ಲ. ಅದರ ಬಗ್ಗೆ ಯಾರೂ ಪ್ರಸ್ತಾಪ ಮಾಡಿಲ್ಲ, ಉಲ್ಲೇಖ ಮಾಡಿದ್ದಾರೆ ಅಷ್ಟೇ.

**ಶ್ರೀ ಎಸ್.ಎ.ರಾಮದಾಸ್:–** ನ್ಯಾಯಾಲಯದ ತೀರ್ಪಿನ ವಿಚಾರವನ್ನು ಚರ್ಚೆ ಮಾಡಬಾರದು ಎಂದಾಗ ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ವಿಚಾರವನ್ನು ಹೇಳಿದರು. 7 ತಿಂಗಳುಗಳ ಕಾಲ ಕ್ಷೇತ್ರ ಅನಾಥವಾಗಿದ್ದವು ಎಂದು ಹೇಳಿದರು. ಅದು ಏಕೆ ಆಯಿತು? ರಾಜ್ಯದ ಹೈಕೋರ್ಟ್‌ನಿಂದ 6 ಜನ ನ್ಯಾಯಾಧೀಶರು ತೀರ್ಪು ಕೊಟ್ಟರು, ಆ

ತೀರ್ಪನ್ನು ನಾವು ಪ್ರಶ್ನೆ ಮಾಡುತ್ತೇವೆಯೇ? Are we questioning the judgement of the High Court? ರಾಜ್ಯದ ಉಚ್ಚ ನ್ಯಾಯಲಯದ ಎರಡು ವಿಭಾಗೀಯ ಪೀಠಗಳು ತೀರ್ಪನ್ನು ಕೊಟ್ಟಿವೆ. ಅದರಲ್ಲಿ ಮುಖ್ಯವಾಗಿ ಮುಖ್ಯ ನ್ಯಾಯಾಧೀಶರು ಇದ್ದರು. 5 ಜನ ನ್ಯಾಯಾಧೀಶರು ತೀರ್ಪನ್ನು ಕೊಟ್ಟ ಪ್ರಕಾರವಾಗಿ ಕ್ಷೇತ್ರಗಳು ಖಾಲಿಯಿದ್ದವು. Here, you are questioning the judgement of the High Court Justice. ನ್ಯಾಯಾಲಯದ ಆಧಾರದ ಮೇಲೆ ಮಾಡಿರುವುದರಿಂದ ಈ ರೀತಿಯ ಪ್ರಶ್ನೆಗಳು ನಿಂದನೆ ಮಾಡಿದಂತಾಗುತ್ತದೆ.

(ಗೊಂದಲ)

**ಶ್ರೀ ವೀರಣ್ಣ ಮತ್ತೀಕಟ್ಟಿ (ವಿಧಾನಸಭಾ ಕ್ಷೇತ್ರ):-**ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಮತ್ತು ಇತರ ಸದಸ್ಯರು ಕಳುಹಿಸಿದ ನಿಲುವಳಿ ಸೂಚನೆಗೆ ಪ್ರಾಸ್ತಾವಿಕವಾಗಿ ಅಭಿಪ್ರಾಯ ಹೇಳಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ತಿಳಿಸುತ್ತೇನೆ.

ಇದು ಸಂವಿಧಾನ ಪರಂಪರೆಯ ಪೂಜ್ಯ ನಿರ್ಧಾರ. ತಾವು ಬಹಳ ವರ್ಷಗಳಿಂದ ಮನೆಯ ಸದಸ್ಯರಾಗಿದ್ದು, ಇವತ್ತು ಹೊಸ ಯುವಕರು ಸದನಕ್ಕೆ ಸದಸ್ಯರಾಗಿ ಬಂದಿದ್ದಾರೆ. ವಿಧಾನ ಸಭೆ ಮತ್ತು ವಿಧಾನ ಪರಿಷತ್ತು ಈ ರಾಜ್ಯದ 6 ಕೋಟಿ ಜನರ ಪ್ರಾತಿನಿಧ್ಯವನ್ನು ಸಂವಿಧಾನಬದ್ಧವಾಗಿ ಹೊಂದಿರುತ್ತದೆ. ಇಲ್ಲಿ ನಿರ್ಧಾರಗಳು ಜನ ಸಾಮಾನ್ಯರ ಒಳ್ಳೆಯದ್ದಕ್ಕೆ ಮತ್ತು ರಾಜ್ಯದ ಅಭಿವೃದ್ಧಿಗೆ ಉಪಯೋಗವಾಗಬೇಕು.ಇವತ್ತು ಸಂಖ್ಯೆಯ ಆಧಾರದ ಮೇಲೆ ಅವಲಂಬನೆಯಾಗಬಾರದು. ಮಾನ್ಯ ಸಭಾನಾಯಕರಿಗೆ ಹೇಳುವುದೇನೆಂದರೆ, ಸಂವಿಧಾನದ ಪ್ರಕಾರ ಅಧಿಕಾರಕ್ಕೆ ಬಂದು ಆ ಪ್ರಕಾರವಾಗಿಯೇ ನಡೆದುಕೊಳ್ಳುತ್ತೇವೆಯೇ? ಹೇಗೇ? ಎಂದು ಮನೆಗೆ ಹೋದ ಮೇಲೆ ಅವರೇ ಒಂದು ಪ್ರಶ್ನೆಯನ್ನು ಹಾಕಿಕೊಂಡು ನೋಡಲಿ? ಇದರ ಬಗ್ಗೆ ಒಬ್ಬರೇ ಕುಳಿತು ವಿಚಾರ ಮಾಡಲಿ. ದುರ್ದೈವ ಎಂದರೆ ಮೌಲ್ಯಗಳೆಲ್ಲವೂ ಕುಸಿಯುತ್ತಿವೆ. ನಾವು ಸಣ್ಣ ಸಣ್ಣ ವಿಚಾರಗಳಿಗೆ

ಸಂವಿಧಾನದಲ್ಲಿ ಇರುವ ಅವಕಾಶಗಳನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದೇವೆ. ಅದು ಯಾವುದೇ ಸರ್ಕಾರ ಇದ್ದರೂ ಮಾಡಬಾರದು. ಇದರಿಂದ ರಾಜ್ಯಕ್ಕೆ ದೊಡ್ಡ ಅನ್ಯಾಯ ಮಾಡಿದಂತಾಗುತ್ತದೆ. ನಾವೆಂದೂ ಸರ್ಕಾರವನ್ನು ತೆಗೆಯಲು ಪ್ರಯತ್ನ ಪಟ್ಟಿಲ್ಲ ಎಂಬ ಸತ್ಯವನ್ನು ತಿಳಿದುಕೊಳ್ಳಬೇಕು. ಇದರ ಬಗ್ಗೆ ಆಧಾರವಾಗಿ ಹೇಳುತ್ತೇನೆ. ಇವತ್ತು ನಿಲುವಳಿ ಸೂಚನೆಯ ವಿಚಾರ ನಡೆದಾಗ ಮಾನ್ಯ ಕಾರಜೋಳರವರು, ಶ್ರೀ ಸಿ.ಸಿ.ಪಾಟೀಲ್ ಮತ್ತು ಶ್ರೀ ರಾಮದಾಸ್‌ರವರು ಹಲವಾರು ವಿಚಾರಗಳನ್ನು ಎತ್ತಿದರು. ನಾನು ಈ ನಿಲುವಳಿಗೆ ಬರುವ ಮೊದಲು ಎರಡು ವಿಚಾರಗಳ ಬಗ್ಗೆ ಹೇಳುತ್ತೇನೆ ಎಂದು ಹೇಳಿದ್ದೆ. ಕಾಂಗ್ರೆಸ್‌ನವರೇ ಅಂಬೇಡ್ಕರ್ ಏನು ಮಾಡಿದರು ಎಂಬ ವಿಚಾರದ ಬಗ್ಗೆ ಪ್ರಸ್ತಾಪಿಸಿದ್ದರು. ಇತಿಹಾಸವನ್ನು ಮತ್ತು ಸತ್ಯಗಳ ದಾಖಲೆಗಳನ್ನು ತಿಳಿದುಕೊಳ್ಳಬೇಕು. ಮಾನ್ಯ ಡಾ:ಅಂಬೇಡ್ಕರ್‌ರವರು ಈ ರಾಷ್ಟ್ರದ ದೊಡ್ಡ ಶಕ್ತಿ. ಯುಗಯುಗಗಳಿಂದ ಶೋಷಣೆಗೊಳಗಾದವರು ಮತ್ತು ದನಿಯಿಲ್ಲದವರಿಗೆ ಆಶಾಕಿರಣವಾಗಿ ಶಕ್ತಿಯನ್ನು ಕೊಟ್ಟವರೆಂಬ ಬಗ್ಗೆ ಎರಡು ಮಾತಿಲ್ಲ. Constituent Assemblyಗೆ ಚುನಾವಣೆ ನಡೆದ ವಿಷಯ ತಮಗೂ ಗೊತ್ತಿದೆ. ಆಗ ಅಂಬೇಡ್ಕರ್‌ರವರು ಸೋತರು.ಈ ವಿಚಾರವನ್ನು ತಿಳಿದುಕೊಳ್ಳಬೇಕು ಮತ್ತು ಜನರಿಗೆ ಗೊತ್ತಾಗಬೇಕು. ಅಂದಿನ ಕಾಂಗ್ರೆಸ್‌ನ ಹಿರಿಯ ನಾಯಕರುಗಳಾದ ಮಹಾತ್ಮಾ ಗಾಂಧಿ, ನೆಹರೂರವರು ಮತ್ತು ರಾಜೇಂದ್ರಪ್ರಸಾದ್‌ರವರು ಸೇರಿದಂತೆ ಎಲ್ಲರೂ ಮರಳಿ ಡಾ:ಅಂಬೇಡ್ಕರ್ ರವರನ್ನು ನಾಮಕರಣಗೊಳಿಸಿ, ಕರಡು ಸಮಿತಿಯ ಅಧ್ಯಕ್ಷತೆಯನ್ನು ಕೊಟ್ಟರು. ಇವುಗಳನ್ನು ತಿಳಿದುಕೊಂಡು ಮಾತನಾಡಬೇಕು.ಅಂದು ಯಾವುದೇ ನಾಯಕರು ಇರಬಹುದು, ಅವರು ಈ ರಾಷ್ಟ್ರಕ್ಕೆ ಮತ್ತು ಜನರಿಗೆ ಒಳ್ಳೆಯದಾಗಬೇಕು, ವ್ಯವಸ್ಥಿತವಾಗಿ ಆಡಳಿತ ನಡೆಸುವ ಶಕ್ತಿಬರಬೇಕೆಂದು ಹೇಳಿದರು.ಬ್ರಿಟಿಷರು ಸ್ವಾತಂತ್ರ್ಯ ಕೊಡುವುದಕ್ಕಿಂತ ಮೊದಲು ಭಾರತದಲ್ಲಿ ಕಲಿತವರು ಇಲ್ಲ, ತಿಳುವಳಿಕೆ ಇರುವವರು ಇಲ್ಲ, ಅಜ್ಞಾನ ಮತ್ತು ಬಡತನ ಇರುವುದರಿಂದ ಅವರಿಗೆ ಸ್ವಾತಂತ್ರ್ಯ ಕೊಡುವುದು ಬೇಡ ಎಂದರು.ಚರ್ಚಿಲ್

ಸಹ ಇದನ್ನೇ ಹೇಳಿದರು. ಆದರೆ ನಾವು ಯಾರೆಂದು ವಿಶ್ವಕ್ಕೆ ತೋರಿಸಿಕೊಟ್ಟಿದ್ದೇವೆ. ಭಾರತದ ಸಂವಿಧಾನವು ವಿಶ್ವದಲ್ಲಿಯೇ ಶ್ರೇಷ್ಠ ಸಂವಿಧಾನ. ನಾವು ಸಂವಿಧಾನಾತ್ಮಕವಾಗಿ ನಡೆಸುಕೊಳ್ಳುತ್ತಿದ್ದೇವೆ. ಇವತ್ತು ಯಾವುದೇ ಪಕ್ಷದ ಸರ್ಕಾರಗಳು ಅಧಿಕಾರ ನಡೆಸುವಾಗ ಕೇಂದ್ರದಲ್ಲಿ ಬೇರೆ ಪಕ್ಷದ ಸರ್ಕಾರಗಳಿದ್ದರೂ ನಾವು ಸರ್ಕಾರವನ್ನು ಸುಗಮವಾಗಿ ನಡೆಸಲು ಪರಂಪರೆಯನ್ನು ಎಲ್ಲಾ ಹಿರಿಯರು ಹಾಕಿಕೊಟ್ಟಿದ್ದಾರೆ. ಅದನ್ನು ದೃಷ್ಟೀಕರಿಸಬೇಕು.ನಮ್ಮ ಮೂಗಿನ ನೇರಕ್ಕೆ ಮಾತನಾಡುವುದು ದುರ್ದೈವ ಎಂದು ಹೇಳುತ್ತೇನೆ. ಇನ್ನೊಮ್ಮೆ ಮಾತನಾಡುವುದುಬೇಡ.ಮಾನ್ಯ ಭಾರತಿ ಶೆಟ್ಟಿಯವರೇ, ನಾನು 1978ರಿಂದ ಶಾಸಕನಾಗಿದ್ದು, ಯಾವುದೇ ಪಕ್ಷ ಮತ್ತು ತತ್ವವನ್ನು ಬಿಟ್ಟು ಮಾತನಾಡುವುದಿಲ್ಲ. ಈ ರಾಜ್ಯಕ್ಕೆ ಹೇಗೆ ಒಳ್ಳೆಯದಾಗಬೇಕು ಮತ್ತು ಸಂವಿಧಾನಬದ್ಧವಾಗಿ ಹೇಗೆ ನಡೆದುಕೊಳ್ಳಬೇಕು ಎಂದಷ್ಟೇ ಮಾತನಾಡುತ್ತೇನೆ ಅದರ ಬಗ್ಗೆ ವಿರೋಧ ಇದ್ದರೆ ತಿಳಿಸಿ.

**ಶ್ರೀ ಡಿ.ಎಸ್.ವೀರಯ್ಯ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಸಭಾಪತಿಗಳಾಗಿದ್ದ ವರು ಮತ್ತು ತುಳಿತಕ್ಕೆ ಒಳಗಾದವರ ಬಗ್ಗೆ ಯಾವಾಗಲೂ ಸಕಾರಾತ್ಮಕವಾಗಿ ಮಾತನಾಡಿದ್ದಾರೆ. ಅವರು ಡಾ: ಅಂಬೇಡ್ಕರ್ ಬಗ್ಗೆ ಸಹ ಬಹಳ ಗೌರವವನ್ನು ಹೊಂದಿರುವವರು. ಈ ರಾಷ್ಟ್ರಕ್ಕೆ ಸಂವಿಧಾನವನ್ನು ನೀಡಿದ ಹಾಗೂ ಸಂವಿಧಾನ ಶಿಲ್ಪಿಯಾದ ಡಾ:ಅಂಬೇಡ್ಕರ್‌ರವರು ಚುನಾವಣೆಗೆ ನಿಂತಾಗ, ಕಾಂಗ್ರೆಸ್‌ನವರು ಕ್ಯಾಂಡಿಡೇಟ್ ಹಾಕುವ ಮೂಲಕ ಅವರನ್ನು ಸೋಲಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಿದ ಪರಿಣಾಮವಾಗಿ ಅವರ ಸೋಲಿಗೆ ಕಾರಣವಾಯಿತು. ಅದಾದ ನಂತರ ಸನ್ಮಾನ್ಯ ಸಭಾಪತಿಯವರೇ, ಡಾ:ಬಿ.ಆರ್.ಅಂಬೇಡ್ಕರ್‌ರವರನ್ನು ಮಹಾರಾಷ್ಟ್ರ ಸರ್ಕಾರ ನಾಮ ನಿರ್ದೇಶನ ಮಾಡಲಿಲ್ಲ. ಪಶ್ಚಿಮ ಬಂಗಾಳದಿಂದ ಮಾನ್ಯ ಶ್ಯಾಮ್ ಪ್ರಸಾದ್ ಮುಖರ್ಜಿಯವರು ಅವರನ್ನು ಆಯ್ಕೆ ಮಾಡಿ ಕಳುಹಿಸಿಕೊಟ್ಟರು. ಅನಂತರ

ಅವರನ್ನು ಸಂವಿಧಾನ ಕರಡು ರಚನಾ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಡಾ:ಬಿ.ಆರ್.ಅಂಬೇಡ್ಕರ್ ಅವರನ್ನು ಸೋಲಿಸಿದ್ದು ಕಾಂಗ್ರೆಸ್ ಪಕ್ಷದವರು ಎನ್ನುವುದು ಮಾತ್ರ ಸತ್ಯ ಸಂಗತಿ.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕಿ):–**ಸನ್ಮಾನ್ಯ ಸಭಾಪತಿಯವರೇ, ಅದನ್ನೇ ರಾಜಕಾರಣ ಎನ್ನುವುದು. ಮಾನ್ಯ ದೇವರಾಜ್ ಅರಸುರವರು ಈ ರಾಜ್ಯದಲ್ಲಿ ಮಾಡಿದಂತಹ ಅಭಿವೃದ್ಧಿ ಕೆಲಸವನ್ನು ಬೇರೆ ಯಾವುದೇ ಮುಖ್ಯಮಂತ್ರಿಗಳು ಮಾಡಲಿಲ್ಲ. ಆದರೆ, ಅವರೂ ಕೂಡ ಮುಖ್ಯಮಂತ್ರಿಗಳ ಸ್ಥಾನವನ್ನು ತೊರೆದು ವಿರೋಧ ಪಕ್ಷದಲ್ಲಿ ಕುಳಿತುಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಯಿತು.ಜನ ಕೊಟ್ಟಂಥ ನಿರ್ಣಯ ಅದು. ರಾಜಕಾರಣದಲ್ಲಿ ವ್ಯತ್ಯಾಸಗಳು ಆಗುತ್ತವೆ. ಆಗಿನ ಕಾಂಗ್ರೆಸ್ ಸರ್ಕಾರ ಡಾ:ಬಿ.ಆರ್.ಅಂಬೇಡ್ಕರ್‌ರವರಿಗೆ ಸಂವಿಧಾನ ರಚನೆ ಮಾಡುವುದಕ್ಕೆ ಅವಕಾಶವನ್ನು ಮಾಡಿ ಕೊಟ್ಟ ಕಾರಣದಿಂದಾಗಿಯೇ ಭಾರತದ ಸಂವಿಧಾನ ರಚನೆಯಾಯಿತು.

**ಸಭಾಪತಿಯವರು:–** ಹಿರಿಯರು ಮತ್ತು ಈ ದೇಶದ ಗೌರವಾನ್ವಿತ ವ್ಯಕ್ತಿ ಮತ್ತು ಭಾರತ ರತ್ನ ಬಿರುದಿಗೆ ಪಾತ್ರರಾಗಿರುವಂತಹ ಡಾ:ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಬಗ್ಗೆ ಪ್ರಾಸಂಗಿಕವಾಗಿ ಒಂದೆರಡು ಉಲ್ಲೇಖಗಳು ಬಂದಿವೆ, ಅದರ ಬಗ್ಗೆ ಚರ್ಚೆ ಸಾಕು. ಚಾರಿತ್ರಿಕ ಘಟನೆಗಳ ಬಗ್ಗೆ ಚರ್ಚೆ ಮಾಡಬೇಕಾದರೆ, ಆ ಪುಸ್ತಕವನ್ನು ಎಲ್ಲ ಸದಸ್ಯರಿಗೂ ಹಂಚಿಕೆ ಮಾಡೋಣ, ನಾವೆಲ್ಲರೂ ಅದನ್ನು ಓದಿ, ನಂತರ ಅದರ ಬಗ್ಗೆ ಚರ್ಚೆ ಮಾಡೋಣ.ಈ ವಿಷಯವನ್ನು ಇಲ್ಲಿಗೆ ಮುಕ್ತಾಯಗೊಳಿಸೋಣ.

**ಶ್ರೀ ಗೋ. ಮಧುಸೂದನ್:–**ಸನ್ಮಾನ್ಯ ಸಭಾಪತಿಯವರೇ, ಸದನದ ರೆಕಾರ್ಡ್‌ಗೆ ತಪ್ಪು ಮಾಹಿತಿ ಹೋಗಬಾರದು.

**ಸಭಾಪತಿಯವರು:–** ಅದನ್ನು ಸರಿ ಮಾಡೋಣ.

**ಶ್ರೀ ವೀರಣ್ಣ ಮತ್ತೀಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ತಪ್ಪು ಮಾಹಿತಿ ನೀಡುತ್ತಿರುವವರು ಅವರು. ನಾವು ತಪ್ಪು ಮಾಹಿತಿ ನೀಡಿದ್ದೇವೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ.

**ಶ್ರೀ ಗೋ.ಮಧುಸೂದನ್:–**ಸನ್ಮಾನ್ಯ ಸಭಾಪತಿಯವರೇ, ನಾನು ಮಾನ್ಯ ವೀರಣ್ಣ ಮತ್ತಿಕಟ್ಟಿಯವರ ಬಗ್ಗೆ ಮಾತನಾಡುತ್ತಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕಿಯವರು ಮಾತನಾಡುತ್ತಾ, ಡಾ:ಬಿ.ಆರ್.ಅಂಬೇಡ್ಕರ್ ಅವರನ್ನು ಸೋಲಿಸಿ, ಅವರಿಂದ ಸಂವಿಧಾನವನ್ನು ಬರೆಸಿದ್ದೇವೆ ಎನ್ನುವಂತಹ ಮಾತನ್ನು ಹೇಳಿದರು.

**ಶ್ರೀಮತಿ ಭಾರತಿ ಶೆಟ್ಟಿ:– ಸನ್ಮಾನ್ಯ** ಸಭಾಪತಿಯವರೇ, ನಾನು ಮಾತನಾಡುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡುವುದಿಲ್ಲ. ಮಾನ್ಯ ವೀರಯ್ಯನವರು ಮಾತನಾಡುವುದಕ್ಕೆ ತಾವು ಅವಕಾಶವನ್ನು ನೀಡುತ್ತಿದ್ದೀರಿ.

**ಶ್ರೀ ಡಿ. ಎಸ್. ವೀರಯ್ಯ:–**ಸನ್ಮಾನ್ಯ ಸಭಾಪತಿಯವರೆ, ಡಾ:ಬಿ.ಆರ್.ಅಂಬೇಡ್ಕರ್ ಅವರನ್ನು ಎರಡು ಬಾರಿ ಚುನಾವಣೆಯಲ್ಲಿ ನೇರವಾಗಿ ಸೋಲಿಸಿದ್ದು ಕಾಂಗ್ರೆಸ್‌ಪಕ್ಷದವರು. ಆದ್ದರಿಂದ ತಪ್ಪು ಮಾಹಿತಿ ರೆಕಾರ್ಡ್‌ಗೆ ಹೋಗಬಾರದು.ಈ ದೇಶ ನಿಜವಾಗಿಯೂ ಅವರಿಗೆ ಗೌರವನ್ನು ಸಲ್ಲಿಸಬೇಕಾಗಿದ್ದರೆ, ಚುನಾವಣೆಯಲ್ಲಿ ಅವರ ವಿರುದ್ಧ ಅಭ್ಯರ್ಥಿಯನ್ನು ನಿಲ್ಲಿಸಬಾರದಾಗಿತ್ತು.

**ಶ್ರೀ ವೀರಣ್ಣ ಮತ್ತಿಕಟ್ಟಿ:–**ಸನ್ಮಾನ್ಯ ಸಭಾಪತಿಯವರೇ, ಡಾ: ಬಿ.ಆರ್. ಅಂಬೇಡ್ಕರ್‌ರವರು ಪಶ್ಚಿಮ ಬಂಗಾಳದಿಂದ ಚುನಾವಣೆಗೆ ಸ್ಪರ್ಧಿಸಿದಾಗ, ಅಲ್ಲಿ ಕಾಂಗ್ರೆಸ್ ಪಕ್ಷದ ಸರ್ಕಾರವೇ ಅಧಿಕಾರದಲ್ಲಿತ್ತು. ಡಾ:ಬಿ.ಆರ್.ಅಂಬೇಡ್ಕರ್ ಅವರನ್ನು ಆರಿಸಿ ಕಳುಹಿಸಿದ್ದು ಆ ಸರ್ಕಾರವೇ, ಮಾನ್ಯ ಜವಾಹರಲಾಲ್ ನೆಹರು ಅವರ ಸಚಿವ ಸಂಪುಟದಲ್ಲಿ ಕಾನೂನು ಮತ್ತು ಸಂಸದೀಯ ಮಂತ್ರಿಗಳಾಗಿ ಅವರು ಕಾರ್ಯವನ್ನು ನಿರ್ವಹಿಸಿದ್ದರು. ಅಂದಿನ ನಾಯಕರಲ್ಲಿ ಎಷ್ಟು ಸೌಹಾರ್ದತೆ ಇತ್ತು ಎನ್ನುವುದು ಎಲ್ಲರಿಗೂ ಗೊತ್ತಿದೆ.

**ಶ್ರೀ ಮನೋಹರ್ ಮಸ್ಕಿ:**–ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವೀರಯ್ಯನವರು ಡಾ: ಬಿ.ಆರ್.ಅಂಬೇಡ್ಕರ್ ಅವರನ್ನು ಹೇಗೆ ಸೋಲಿಸಲಾಯಿತು ಎನ್ನುವುದನ್ನು ದಾಖಲೆ ಸಮೇತ ಹೇಳುತ್ತಿದ್ದಾರೆ.

**ಶ್ರೀ ವೀರಣ್ಣ ಮತ್ತೀಕಟ್ಟಿ:**– ಸನ್ಮಾನ್ಯ ಸಭಾಪತಿಯವರೇ, ಇವರ ಸೌಹಾರ್ದ ರಾಜಕೀಯದ ಬಗ್ಗೆಯೂ ನಮಗೆ ಗೊತ್ತಿದೆ.ಹಿಂದೆ ಯಾರಾದರೂ ಉತ್ತಮ ನಾಯಕರು ಸೋತರೆ, ಅವರಿಗೆ ಮತ್ತೆ ಅವಕಾಶವನ್ನು ನೀಡುತ್ತಿದ್ದರು.ಇದಕ್ಕೆ ಉದಾಹರಣೆಯೆಂದರೆ, ಮಾನ್ಯ ಲೋಹಿಯಾರವರು ಮತ್ತು ಶ್ರೀಮಾನ್ ಅಟಲ್ ಬಿಹಾರಿ ವಾಜಪೇಯಿಯವರು ಆರಿಸಿ ಬರುವುದಕ್ಕೆ ಹೆಚ್ಚು ಸಹಕಾರವನ್ನು ನೀಡಲಾಗಿತ್ತು.ಹಾಗೆಯೇ, ಹಿಂದೆ ನೆಹರುವರ ನಾಯಕತ್ವದಲ್ಲಿ ಇದ್ದಂತಹ ಕಾಂಗ್ರೆಸ್ ಪಕ್ಷವೂ ಇದೇ ರೀತಿಯ ಸಹಕಾರವನ್ನು ನೀಡಿತ್ತು.

**ಸಭಾಪತಿಯವರು:**–ಇದರ ಬಗ್ಗೆಹೆಚ್ಚುಚರ್ಚೆ ಬೇಡ. ಅದನ್ನು ಇಲ್ಲಿಗೆ ನಿಲ್ಲಿಸೋಣ.ಈಗ ವಿಷಯಕ್ಕೆ ಬನ್ನಿ.

**ಶ್ರೀ ಮನೋಹನರ್ ಮಸ್ಕಿ:**–ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವೀರಯ್ಯನವರು ಒಳ್ಳೆಯ ಮಾಹಿತಿಯನ್ನು ನೀಡುತ್ತಿದ್ದಾರೆ ಅವರಿಗೆ ಮಾತನಾಡಲು ತಾವು ದಯವಿಟ್ಟು ಅವಕಾಶವನ್ನು ಮಾಡಿ ಕೊಡಿ ಎನ್ನುವುದು ನನ್ನ ವಿನಂತಿ.

**ಸಭಾಪತಿಯವರು:**–ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಮಾತನಾಡುವಂತಹ ಸಂದರ್ಭದಲ್ಲಿ, 'ವಿರೋಧ ಪಕ್ಷದ ನಾಯಕರು ಒಬ್ಬ ಮಹಿಳೆಯಾಗಿದ್ದಾರೆ. ಅವರು ಮಾತನಾಡುವಂತಹ ಸಂದರ್ಭದಲ್ಲಿ ತಾವು ಮಧ್ಯೆ ಬಾಯಿ ಹಾಕಿದರೆ ಅದು ಸರಿ ಕಾಣುವುದಿಲ್ಲ.ನಾನು ಮಾತನಾಡುವಂತಹ ಸಂದರ್ಭದಲ್ಲಿ ತಾವು ಮಾತನಾಡಿ' ಎಂದು ಶ್ರೀಮತಿ ಭಾರತಿ ಶೆಟ್ಟಿಯವರಿಗೆ ಹೇಳಿದ್ದಾರೆ. ವೀರಯ್ಯನವರು ತಮ್ಮ ಮಾತುಗಳನ್ನು

ಬೇಗನೇ ಮುಗಿಸಿದರೆ ಶ್ರೀಮತಿ ಭಾರತಿ ಶೆಟ್ಟಿಯವರಿಗೆ ಅವಕಾಶವನ್ನು ನೀಡುತ್ತೇನೆ.

**ಶ್ರೀ ವೀರಣ್ಣ ಮತ್ತಿಕಟ್ಟಿ**–ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವೀರಯ್ಯನವರು ಮಾತನಾಡುವುದಕ್ಕೂ ಮೊದಲು ಬಹಳಷ್ಟು ಚಿಂತನೆ ಮಾಡಬೇಕಾಗುತ್ತದೆ.ಇದು ಅವರ ಮೂಲಕ್ಕೆ ಬರುತ್ತದೆ.ಅದನ್ನು ಅರ್ಥ ಮಾಡಿಕೊಂಡು ಅವರು ಮಾತನಾಡಬೇಕಾಗುತ್ತದೆ. ಡಾ:ಬಿ.ಆರ್. ಅಂಬೇಡ್ಕರ್‌ರವರು ಈ ರಾಷ್ಟ್ರದಲ್ಲಿ ಇರುವಂತಹ ಶೋಷಣೆಯ ವಿರುದ್ಧ ಪರಿವರ್ತನೆಯನ್ನು ತರುವಂತಹ ಪ್ರಯತ್ನವನ್ನು ಮಾಡಿದ್ದರು. ಅದರ ಬಗ್ಗೆ ಮಾತನಾಡುವುದಕ್ಕೆ ಹೋದರೆ, ಇವರ ಮೂಲ ಕೊಚ್ಚಿಕೊಂಡು ಹೋಗುತ್ತದೆ.ಆದ್ದರಿಂದ ಈ ಬಗ್ಗೆ ಹೆಚ್ಚು ಮಾತನಾಡುವುದು ಬೇಡ ಎನ್ನುವುದು ನಾನು ಅವರಿಗೆ ನೀಡುತ್ತಿರುವ ಸಲಹೆಯಾಗಿದೆ. ಇದು ಅವರಿಗೆ ಅರ್ಥವಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಮನು ವಾದವನ್ನು ಮತ್ತು ಹುಟ್ಟಿನ ಆಧಾರದ ಮೇಲೆ ಮೇಲು–ಕೀಳು ಎನ್ನುವ ಭಾವನೆಯನ್ನು ಡಾ:ಬಿ.ಆರ್.ಅಂಬೇಡ್ಕರ್‌ರವರು ವಿರೋಧಿಸಿದ್ದರು. ಹೀಗೆ ಡಾ:ಬಿ.ಆರ್. ಅಂಬೇಡ್ಕರ್‌ರವರ ಹಲವಾರು ವಿಚಾರಧಾರೆಗಳನ್ನು ನಾವು ಈ ಸದನದ ಮುಂದೆ ಚರ್ಚೆಗೆ ತರಬೇಕಾಗುತ್ತದೆ. ಈಗ ಮಾನ್ಯ ವೀರಯ್ಯನವರು ಮಾತನಾಡುವುದಾದರೆ, ಅವರು ಮಾತನಾಡಲು ಬಯಸುವಂತಹ ವಿಷಯಕ್ಕೆ ಸಂಬಂಧಪಟ್ಟಂತೆ ಚರ್ಚಿಸಲು ಒಂದು ದಿನವನ್ನು ನಿಗದಿ ಮಾಡಿ, ನಾವು ಸಂಪೂರ್ಣವಾಗಿ ಎಲ್ಲ ವಿಚಾರಗಳನ್ನು ತಮ್ಮ ಮುಂದೆ ಮಂಡನೆ ಮಾಡುತ್ತೇವೆ. ಆಗ ಮಾನ್ಯ ವೀರಯ್ಯನವರ ಅಸ್ತಿತ್ವ ಕೊಚ್ಚಿ ಹೋಗುತ್ತದೆ.ಆದ್ದರಿಂದ ದಯಮಾಡಿ ಅವರು ಮಾತನಾಡದೇ ಕುಳಿತುಕೊಳ್ಳುವುದು ಉತ್ತಮ ಎನ್ನುವುದು ನನ್ನ ಸಲಹೆಯಾಗಿದೆ.

**ಶ್ರೀ ಡಿ.ಎಸ್.ವೀರಯ್ಯ:–** ಸನ್ಮಾನ್ಯ ಸಭಾಪತಿಯವರೇ, ಯಾವುದೂ ಕೊಚ್ಚಿ ಹೋಗುವುದಿಲ್ಲ. ಎಲ್ಲದರ ಬಗ್ಗೆಯೂ ಚರ್ಚೆ ಆಗಲಿ.

**ಶ್ರೀ ವೀರಣ್ಣ ಮತ್ತಿಕಟ್ಟಿ:**-ಸನ್ಮಾನ್ಯ ಸಭಾಪತಿಯವರೇ, ಮನು ವಾದವನ್ನು ಪ್ರತಿಪಾದನೆ ಮಾಡಿ, ಸಮಾಜದಲ್ಲಿ ಮೇಲು-ಕೀಳು ಎನ್ನುವಂತಹ ಭಾವನೆಯನ್ನು ಹುಟ್ಟಿ ಹಾಕಿದವರು ಯಾರು ಎನ್ನುವುದರ ಬಗ್ಗೆ ನಾವು ಯೋಚನೆ ಮಾಡಬೇಕಾಗುತ್ತದೆ.

**ಡಾ:ಎಸ್.ಆರ್.ಲೀಲಾ(ನಾಮನಿರ್ದೇಶಿತರು):-** ಸನ್ಮಾನ್ಯ ಸಭಾಪತಿಯ ವರೇ, ಮನು ವಾದ ಎಂದರೆ ಏನು ಎನ್ನುವುದನ್ನು ಮೊದಲು ತಿಳಿದುಕೊಂಡು ಅವರು ಮಾತನಾಡಬೇಕಾಗುತ್ತದೆ. ಉತ್ತರ ಪ್ರದೇಶದಲ್ಲಿ 'ಮನು ಮತ. . . .ಮನು ಮತ' ಎಂದು ಹೇಳಿಕೊಂಡು ಏನು ಮಾಡುತ್ತಿದ್ದಾರೆ ಎನ್ನುವುದು ಎಲ್ಲರಿಗೂ ತಿಳಿದಿದೆ.ಇದರ ಬಗ್ಗೆ ಮಾತನಾಡಿದರೆ ಯಾರ ಮೂಲ ಕೊಚ್ಚಿ ಹೋಗುತ್ತದೆ ಎನ್ನುವುದನ್ನು ಅವರು ತಿಳಿದುಕೊಳ್ಳಬೇಕಾಗಿದೆ. ಮನು ಮತ ಎಂದರೆ ಏನು ಎನ್ನುವುದನ್ನು ಅವರು ಸ್ಪಷ್ಟವಾಗಿ ಓದಿಕೊಳ್ಳಬೇಕಾಗಿದೆ. ಮನು ಮತದ ಬಗ್ಗೆ ಮಾನ್ಯ ರಾಮಾ ಜೋಯಿಷರು ಒಂದು ಒಳ್ಳೆಯ ಪುಸ್ತಕವನ್ನು ಬರೆದಿದ್ದಾರೆ.ಅದನ್ನು ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಓದಿ ನಂತರ ಮಾತನಾಡಬೇಕಾಗಿದೆ. ಹೀಗೆ ಅವರು ಸುಮ್ಮನೆ ಮಾತನಾಡಬಾರದು.

**ಸಭಾಪತಿಯವರು:**-ಚರ್ಚೆ ಬೇರೆ ದಿಕ್ಕಿನಲ್ಲಿ ಸಾಗುತ್ತಿದೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಸನ್ಮಾನ್ಯ ಸಭಾಪತಿಯವರೇ, ನಾವು ಶೋಷಣೆಯ ವಿರುದ್ಧ ಹೋರಾಟ ನಡೆಸಿ ಬದ್ಧತೆಯಿಂದ ಮೇಲೆ ಬಂದವರು. ಅದಕ್ಕಾಗಿಯೇ ನಾವು ಶೋಷಣೆ ರಹಿತ ಮತ್ತು ಸಮಾನತೆಯ ಒಂದು ಹೊಸ ವ್ಯವಸ್ಥೆಯನ್ನು 12ನೇ ಶತಮಾನದಲ್ಲಿ ಪ್ರಾರಂಭ ಮಾಡಿದ್ದೇವೆ. ಆ ಭೂಮಿಕೆ ನಮಗಿದೆ.

**ಡಾ:ಎಸ್.ಆರ್.ಲೀಲಾ:**-ಸನ್ಮಾನ್ಯ ಸಭಾಪತಿಯವರೇ, ಈಗ ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಶೋಷಣೆ ಮಾಡುತ್ತಿದ್ದಾರೆ. ಒಬ್ಬ ದಲಿತ ಸದಸ್ಯರು

ಮಾತನಾಡಲು ಎದ್ದು ನಿಂತರೆ ಮಾತನಾಡಲು ಅವರಿಗೆ ಅವಕಾಶವನ್ನು ನೀಡುತ್ತಿಲ್ಲ. ಇದು ಶೋಷಣೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, 12ನೇ ಶತಮಾನದಲ್ಲಿ ಬಸವಾದಿ ಶರಣರ ನೇತೃತ್ವದಲ್ಲಿ ಒಂದು ಹೊಸ ವ್ಯವಸ್ಥೆಯನ್ನು ಪ್ರಾರಂಭ ಮಾಡಲಾಯಿತು. ನಾವು ಆ ಮೂಲಕ್ಕೆ ಹೋದರೆ ಬೇರೆ ಕಥೆ ಆಗುತ್ತದೆ.ಈ ಬಗ್ಗೆ ನಮಗೆ ನೋವಿದೆ.ನಾವು ಸುಮ್ಮನೆ ಮಾತನಾಡುವುದಿಲ್ಲ.

**ಶ್ರೀ ಡಿ.ಎಸ್.ವೀರಯ್ಯ:–**ಸನ್ಮಾನ ಸಭಾಪತಿಯವರೇ, ಈ ರಾಷ್ಟ್ರಕ್ಕೆ ಸ್ವಾತಂತ್ರ್ಯ ಎಷ್ಟು ಮುಖ್ಯವೋ, ಸಂವಿಧಾನವೂ ಅಷ್ಟೇ ಮುಖ್ಯವಾಗಿದೆ. ಈ ರಾಷ್ಟ್ರಕ್ಕೆ ಸರಿರಿತೂಗುವಂತಹ ಸಂವಿಧಾನವನ್ನು ಕೊಟ್ಟಂಥ ಒಬ್ಬ ಸಂವಿಧಾನ ಶಿಲ್ಪಿ ಚುನಾವಣೆಗೆ ನಿಂತಾಗ, ಈ ರಾಷ್ಟ್ರ ನಿಜವಾಗಿಯೂ ಅವರಿಗೆ ಗೌರವವನ್ನು ಕೊಡುವಂತಿದ್ದರೆ ಅವರ ವಿರುದ್ಧ ಮತ್ತೊಬ್ಬ ಅಭ್ಯರ್ಥಿಯನ್ನು ಚುನಾವಣೆಗೆ ನಿಲ್ಲಿಸುತ್ತಾರೆಯೇ?

**ಶ್ರೀ ನಸೀರ್ ಅಹಮದ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**ಸನ್ಮಾನ್ಯ ಸಭಾಪತಿಯವರೇ ಡಾ:ಬಿ.ಆರ್.ಅಂಬೇಡ್ಕರ್ ಅವರಿಗೆ ನಾವು ಭಾರತ ರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದೇವೆ.

**ಶ್ರೀ ಡಿ.ಎಸ್.ವೀರಯ್ಯ:–**ಸನ್ಮಾನ್ಯ ಸಭಾಪತಿಯವರೇ, ಅವರಿಗೆ ಭಾರತ ರತ್ನ ಪ್ರಶಸ್ತಿಯನ್ನು ನೀಡಿದವರು ಅಂದಿನ ಪ್ರಧಾನ ಮಂತ್ರಿಗಳಾಗಿದ್ದ ಮಾನ್ಯ ವಿ.ಪಿ.ಸಿಂಗ್‌ರವರು. ಡಾ:ಬಿ.ಆರ್.ಅಂಬೇಡ್ಕರ್‌ರವರು ಚುನಾವಣೆಗೆ ನಿಂತಾಗ ಅವರ ವಿರುದ್ಧ ಪ್ರಭಲ ಪ್ರತಿಸ್ಪರ್ಧಿಯಾಗಿದ್ದವರು ಕಾಂಗ್ರೆಸ್‌ನ ಅಭ್ಯರ್ಥಿಯಾಗಿದ್ದ Narayan Sadoba Karjrolkarರವರು, ಡಾ:ಬಿ.ಆರ್. ಅಂಬೇಡ್ಕರ್ ಅವರಷ್ಟು ಅರ್ಹ ಅಭ್ಯರ್ಥಿಯಾಗಿರಲಿಲ್ಲ. ಒಬ್ಬ ಪ್ರಧಾನ ಮಂತ್ರಿಯಾದವರು ಸಾರ್ವತ್ರಿಕ ಚುನಾವಾಣೆಯಲ್ಲಿ ಜಿಲ್ಲೆಯಲ್ಲಿ ಒಂದೆರಡು ಕಡೆ ಬಂದು ಭಾಷಣ ಮಾಡಬಹುದು. ಆದರೆ, ಅಂಬೇಡ್ಕರ್ ಅವರು

ಸ್ಪರ್ಧಿಸಿದಂತಹ ಸಂದರ್ಭದಲ್ಲಿ ಮಾನ್ಯ ನೆಹರುರವರು ಎಷ್ಟು ಬಾರಿ ಆ ಕ್ಷೇತ್ರಕ್ಕೆ ಬಂದಿದ್ದರು ಮತ್ತು ಎಷ್ಟು ಬಾರಿ ಅವರ ವಿರುದ್ಧ ಚುನಾವಣಾ ಪ್ರಚಾರ ಮಾಡಿದ್ದರು ಎನ್ನುವುದನ್ನು ನಾನು ದಾಖಲೆ ಸಮೇತ ಮಂಡಿಸಬಲ್ಲೆ.ಅವರನ್ನು ಸೋಲಿಸಿದಂತಹ ಅಪಕೀರ್ತಿ ನಿಜವಾಗಿಯೂ ಕಾಂಗ್ರೆಸ್ ಪಕ್ಷಕ್ಕೆ ಸೇರುತ್ತದೆ.ಇದು ಸತ್ಯ ಸಂಗತಿಯಾಗಿದೆ.

**ಶ್ರೀಮತಿ ಮೋಟಮ್ಮ:**-ಸನ್ಮಾನ ಸಭಾಪತಿಯವರೇ, ಇವರ ಪಕ್ಷದ ಸರ್ಕಾರ ಇರುವಂತಹ ಕಡೆ ಮುಂದಿನ ಚುನಾವಣೆಯಲ್ಲಿ ಸಾಮಾಜಿಕ ಹೋರಾಟಗಾರ ಅಣ್ಣಾ ಹಜಾರೆ ಅವರನ್ನು ಚುನಾವಣೆಗೆ ನಿಲ್ಲಿಸಿ ಅವಿರೋಧವಾಗಿ ಗೆಲ್ಲಿಸಲಿ, ಆಗ ನಾವು ಒಪ್ಪಿಕೊಳ್ಳುತ್ತೇವೆ.

**ಶ್ರೀ ಸಿ.ಸಿ.ಪಾಟೀಲ(ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):**- ಸನ್ಮಾನ್ಯ ಸಭಾಪತಿಯವರೇ, ನಾವು ಅಣ್ಣಾ ಹಜಾರೆಯವರನ್ನು ಚುನಾವಣೆಗೆ ನಿಲ್ಲಿಸುತ್ತೇವೆ. ಅದಕ್ಕೆ ಅವರು ತಮ್ಮ ಒಪ್ಪಿಗೆಯನ್ನು ನೀಡುತ್ತಾರೆಯೇ ಎನ್ನುವುದು ನಮ್ಮ ಪ್ರಶ್ನೆಯಾಗಿದೆ.

**ಶ್ರೀ ಎನ್. ತಿಪ್ಪಣ್ಣ (ನಾಮ ನಿರ್ದೇಶಿತರು):**-ಸನ್ಮಾನ್ಯ ಸಭಾಪತಿಯವರೇ, ಸಚಿವರಾದ ಮಾನ್ಯ ರಾಮದಾಸ್‌ರವರು ಕ್ರಿಯಾಲೋಪವನ್ನು ಪ್ರಸ್ತಾಪ ಮಾಡಿ, ಇದನ್ನು ಸಭೆಯಲ್ಲಿ ಎಲ್ಲಿಯೂ ಚರ್ಚೆ ಮಾಡಬಾರದೆಂದು Kaul and Shakdher ಪುಸ್ತಕದಲ್ಲಿ ಇರುವುದನ್ನು ಓದಿ ಹೇಳಿದರು. ಆದರೆ, ಈಗ ಅದರ ಬಗ್ಗೆ ಚರ್ಚೆ ನಡೆಯುತ್ತಿದೆ. ಚರ್ಚೆ ನಡೆದ ನಂತರ ತಾವು ತೀರ್ಪು ನೀಡಿದರೆ ಯಾವುದೇ ರೀತಿಯಲ್ಲಿಯೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಮೊದಲು ತಾವು ತೀರ್ಪು ನೀಡಿ, ಅನಂತರ ಚರ್ಚೆಯ ಅವಶ್ಯಕತೆ ಇದ್ದರೆ ಅದರ ಬಗ್ಗೆ ಚರ್ಚೆ ಮಾಡೋಣ.ಚರ್ಚೆ ಮಾಡುವುದೇ ಬೇಡವೆಂದು ತಾವು ತೀರ್ಪು ನೀಡಿದರೆ ಚರ್ಚೆ ಮಾಡುವುದೇ ಬೇಡ.

**ಶ್ರೀಮತಿ ಭಾರತಿ ಶೆಟ್ಟಿ (ವಿಧಾನ ಸಭಾ ಕ್ಷೇತ್ರ):–**ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಹಿರಿಯರು, ಅವರು 1978ರಿಂದ ಎಂ.ಎಲ್.ಎ. ಆಗಿದ್ದೇನೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ನಾನು ಪ್ರಥಮ ಬಾರಿಗೆ ಎಂ.ಎಲ್.ಸಿ.ಆಗಿದ್ದೇನೆ. ಆದರೆ, ನನಗೆ ಸುಮಾರು 37 ವರ್ಷಗಳ ರಾಜಕೀಯ ಅನುಭವವಿದೆ.ನಾನು ಮೆಚ್ಚುವ ರಾಜಕೀಯ ನಾಯಕರುಗಳಲ್ಲಿ ಮಾನ್ಯ ವೀರಣ್ಣ ಮತ್ತಿಕಟ್ಟಿಯವರೂ ಒಬ್ಬರು. 'ನಿಮಗೆ ಏನೂ ಗೊತ್ತಿಲ್ಲ ಕುಳಿತುಕೊಳ್ಳಿ' ಎನ್ನುವ ಮಾತನ್ನು ಅವರು ಹೇಳಬಾರದು ಎನ್ನುವುದು ನನ್ನ ವಿನಂತಿಯಾಗಿದೆ. ಎರಡನೆಯದಾಗಿ, ಮಾನ್ಯ ವೀರಣ್ಣ ಮತ್ತಿಕಟ್ಟಿಯವರು, 'ಈ ಪ್ರಜಾಪ್ರಭುತ್ವಕ್ಕೆ, ಸಂವಿಧಾನಕ್ಕೆ ಮತ್ತು ಪರಂಪರೆಗೆ ಕಪ್ಪು ಚುಕ್ಕೆಯ ರೀತಿಯಲ್ಲಿ ನೀವು ವರ್ತಿಸಿದ್ದೀರಿ ಇದರ ಬಗ್ಗೆ ನೀವು ಮನೆಗೆ ಹೋಗಿ ಕುಳಿತುಕೊಂಡು ಯೋಚನೆ ಮಾಡಿ' ಎನ್ನುವಂತಹ ಮಾತುಗಳನ್ನು ಹೇಳಿದ್ದಾರೆ.ನಾವು ಕುಳಿತುಕೊಂಡು ಯೋಚನೆ ಮಾಡುವುದಕ್ಕೂ ಮೊದಲು ಅವರೆಲ್ಲಾ ಮನೆಗೆ ಹೋಗಿ ಕುಳಿತುಕೊಂಡು ಈ ದೇಶದ ಮೇಲೆ ತುರ್ತು ಪರಿಸ್ಥಿತಿಯನ್ನು ಹೇರಿದಂತಹ ಸನ್ನಿವೇಶವನ್ನು ಯೋಚನೆ ಮಾಡಬೇಕಾಗುತ್ತದೆ. ಈ ದೇಶದಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಣೆ ಮಾಡಿದಾಗ, ಆ ತುರ್ತು ಪರಿಸ್ಥಿತಿಯಲ್ಲಿ ಅರೆಸ್ಟ್ ಆದವರಲ್ಲಿ ನಾನು ಒಬ್ಬಳು.ನಾವು ಎಷ್ಟು ಕಷ್ಟ ಪಟ್ಟಿದ್ದೇವೆಂದು ನಮಗೆ ಗೊತ್ತು. ಅಂತಹ ಮಹಾ ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿರತಕ್ಕಂಥ ಒಂದು ನೀತಿಯನ್ನು ತಂದ ನೀವು ನಮಗೆ ಬುದ್ಧಿವಾದವನ್ನು ಹೇಳುವಾಗ ಇದೊಂದು ಹಾಸ್ಯಾಸ್ಪದ ಘಟನೆ ಎಂದು ನನಗೆ ಅನ್ನಿಸುತ್ತದೆ.ಆದುದರಿಂದ ಕೇಂದ್ರ ಸರ್ಕಾರದಲ್ಲಿರುವವರು ವಿಶಾಲ ಮನೋಭಾವವನ್ನು ಪ್ರದರ್ಶನ ಮಾಡಿದರು ಎಂದು ಹೇಳಿದರು.ಕೇಂದ್ರ ಸರ್ಕಾರದವರು ಏಕೆ ನಮ್ಮ ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತವನ್ನು ತಂದಿಲ್ಲವೆಂದರೆ, ಕರ್ನಾಟಕ ರಾಜ್ಯದಲ್ಲಿ ಏನಾದರೂ ರಾಷ್ಟ್ರಪತಿ ಆಡಳಿತವನ್ನು ಜಾರಿಗೆ ತಂದರೆ ಇಲ್ಲಿ ಕಾಂಗ್ರೆಸ್ zero ಆಗುತ್ತದೆ.ಆದ್ದರಿಂದ ಕಾಂಗ್ರೆಸ್ ನಾಯಕರು ನಮ್ಮ ಸರ್ಕಾರದ ವಿರುದ್ಧ ಕಾಲೆಳೆಯುವುದನ್ನು ನಿಲ್ಲಿಸಿ, ತಮ್ಮ

ಸಂಘಟನೆಯನ್ನು ಕಟ್ಟುವುದರಲ್ಲಿ ಮುತುವರ್ಜಿ ವಹಿಸಬೇಕು.ನಮ್ಮ ಸರ್ಕಾರ ಗಟ್ಟಿಯಾಗಿದೆ, ನಮಗೆ ಆಡಳಿತ ಮಾಡಲಿಕ್ಕೆ ಗೊತ್ತಿದೆ, ನಾವು ಆಡಳಿತ ನಡೆಸುತ್ತೇವೆ ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):–**ಮಾನ್ಯ ಸಭಾಪತಿಯವರೇ, ಇವರು 'Outlook' ಪತ್ರಿಕೆಯನ್ನು ಒಂದು ಸಾರಿ ಓದಲಿ. ಇವರ ನಾಯಕಿ ಸುಷ್ಮಾ ಸ್ವರಾಜ್ ಏನು ಹೇಳಿದ್ದಾರೆಂದರೆ, "ಭಿನ್ನಮತ ಶಮನ ಮಾಡಿ ನಾನು ಒಂದು ದೊಡ್ಡ ಪಾಪದ ಹೊರೆಯನ್ನು ಹೊತ್ತುಕೊಂಡ ಹಾಗಾಗಿದೆ" ಎನ್ನುವ ಮಾತನ್ನು ಹೇಳಿದ್ದಾರೆ.ಅದಕ್ಕೆ ಇವರೇನು ಹೇಳುತ್ತಾರೆ.

**ಶ್ರೀಮತಿ ಭಾರತಿ ಶೆಟ್ಟಿ:–**ಶ್ರೀ ಡಿ.ಕೆ.ಶಿವಕುಮಾರ ಮತ್ತು ಶ್ರೀಮತಿ ತೇಜಸ್ವಿನಿಯವರು ಏನು ಹೇಳಿದ್ದಾರೆಂದು ನೋಡಿ.

**ಸಭಾಪತಿಯವರು:–**ಮಾನ್ಯ ವೀರಯ್ಯನವರೆ, ನೀವು ಮಾತನಾಡಿ ಮುಗಿಯಿತೇ? ಮಾನ್ಯ ಸುದರ್ಶನ್‌ರವರು ನಂತರ ನಾವು ಸರ್ಕಾರದ ಕಡೆಯವರನ್ನು ಮಾತನಾಡಲು ಕರೆಯಬೇಕು.

**ಶ್ರೀ ವೀರಣ್ಣ ಮತ್ತಿಕಟ್ಟಿ (ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಶ್ರೀಮತಿ ಭಾರತಿ ಶೆಟ್ಟಿಯವರು ಹೇಳಿದರು. ಆದರೆ ಯಾರೇ ಒಬ್ಬ ಸದಸ್ಯರು ಮಾತನಾಡುವಾಗ ಇನ್ನೊಬ್ಬ ಸದಸ್ಯರು ಮಧ್ಯದಲ್ಲಿ interrupt ಮಾಡಬಾರದು. ಒಬ್ಬ ಸದಸ್ಯರ ಅಭಿಪ್ರಾಯ ಬಂದ ನಂತರ ಅವರ ಅಭಿಪ್ರಾಯ ಅದಕ್ಕೆ ವ್ಯತಿರಿಕ್ತವಾಗಿದ್ದರೆ ನಂತರ ಅವರು ಹೇಳಲಿ ಅಥವಾ ಅವರ ನಾಯಕರಿದ್ದಾರೆ, ಅವರು ಹೇಳಲಿ. ಅದಷ್ಟಕ್ಕೆ ಸೀಮಿತವಾಗಿ ಹೇಳಿದೆ ಹೊರತು ನನಗೇನೂ ಬೇರೆ ದುರುದ್ದೇಶವಿಲ್ಲ. ಅದರಲ್ಲಿಯೂ ಹೊಸಬರಿಗೆ, ಮಹಿಳೆಯರಿಗೆ, ಹಿಂದುಳಿದವರಿಗೆ, ದಲಿತರಿಗೆ ನಾನು ಹೆಚ್ಚು ಆದ್ಯತೆಯನ್ನು ಕೊಡುತ್ತೇನೆ. ನಂತರ ಡಾ॥ ಲೀಲಾರವರಿಗೆ ಕೇಳಿ.ಏಕೆಂದರೆ ಇವೆಲ್ಲಾ ಶೋಷಿತ ವರ್ಗ, ಈ ಚಿಂತನೆ, ಈ ಚರ್ಚೆ ಏಕೆ ನಡೆಯುತ್ತಿದೆ ಎಂದರೆ ಈ ನಿರ್ಧಾರಗಳಿಂದ ರಾಜ್ಯದ ಆಡಳಿತದ ಮೇಲೆ, ಅಭಿವೃದ್ಧಿ ಮೇಲೆ ಅಥವಾ

ನಮ್ಮ ರಾಜ್ಯದ ಮೇಲೆ ಏನು ಪರಿಣಾಮವಾಯಿತು?ಅದಕ್ಕೋಸ್ಕರ ಇದರಿಂದ ಪರಿಣಾಮ ಕೆಟ್ಟದಾಗಿದೆ ಎನ್ನುವ ಉದ್ದೇಶದಿಂದ ಇದನ್ನು ತಮ್ಮ ಮೂಲಕ ಸರ್ಕಾರದ ಮೇಲೆ ಒತ್ತಡ ತಂದು ಈಗಂತೂ ಮಾಡಿದ್ದೀರಿ. ಇನ್ನು ಮುಂದೆ ಮಾಡುವುದು ಬೇಡ ಎನ್ನುವುದನ್ನು ಹೇಳುವುದಕ್ಕೆ ನಾವಿದನ್ನು ತಂದಿದ್ದೇವೆ.

ನಾನು ಒಂದು ವಿಚಾರ ಹೇಳಬಯಸುವುದೇನೆಂದರೆ, ನಾವು ಇದರ ಹಿನ್ನೆಲೆಯ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಈ ರಾಜ್ಯದಲ್ಲಿ ಈ ಮೂರು ವರ್ಷಗಳ ಹಿಂದೆ ಚುನಾವಣೆಯಾದಾಗ ಬಿಜೆಪಿಯವರದು 110 ಸದಸ್ಯ ಬಲ ಇತ್ತು.ನಾವು ಸುಮಾರು 80 ಸದಸ್ಯ ಬಲ ಹೊಂದಿದ್ದೆವು.ಅದೇ ರೀತಿ ಜನತಾ ದಳದವರು 28 ಸದಸ್ಯ ಬಲವನ್ನು ಹೊಂದಿದ್ದರು. ಪಕ್ಷೇತರರು ಸಹ ಇದ್ದರು.ನಾವು ಸರ್ಕಾರವನ್ನು ರಚಿಸಬೇಕೆಂದು ನಿಜವಾಗಿಯೂ ಪ್ರಯತ್ನ ಮಾಡಿದೆವು. ಅಂದು ಜೆಡಿ(ಎಸ್)ನ ರಾಷ್ಟ್ರಾಧ್ಯಕ್ಷರು, ಶ್ರೀ ತಿಪ್ಪಣ್ಣನವರು ಇದ್ದರು. ಅವರು ನಮಗೆ ಬೇಷರತ್ ಬೆಂಬಲವನ್ನು ಕೊಡತ್ತೇವೆಂದರು. ಆದರೆ ನಮ್ಮ ನಾಯಕಿ ಶ್ರೀಮತಿ ಸೋನಿಯಾ ಗಾಂಧಿಯವರು ಹಾಗೂ ಪ್ರಧಾನಮಂತ್ರಿಗಳಾದ ಡಾ॥ ಮನಮೋಹನ್ ಸಿಂಗ್‌ರವರು ಜನರ ಅಭಿಪ್ರಾಯ ಬಿಜೆಪಿಯ ಪರವಾಗಿದೆ. 5 ಜನರ ಸದಸ್ಯ ಬಲ ಹೆಚ್ಚು ಬಂದಿರಬಹುದು ಅಥವಾ 10 ಜನರ ಸದಸ್ಯ ಬಲ ಹೆಚ್ಚು ಬಂದಿರಬಹುದು, ಸರ್ಕಾರವನ್ನು ರಚಿಸುವುದಕ್ಕೆ ಅವರಿಗೆ ಅವಕಾಶ ಮಾಡಿಕೊಡಿ. ನೀವು ವಿರೋಧ ಪಕ್ಷದಲ್ಲಿ ಕುಳಿತು ನಿಮ್ಮ ಕರ್ತವ್ಯವನ್ನು ನಿರ್ವಹಿಸಿ ಎಂದು ಹೇಳಿದರು. ಆ ಪ್ರಕಾರ ನಾವು ವಿರೋಧ ಪಕ್ಷದಲ್ಲಿ ಕುಳಿತಿದ್ದೇವೆ. ಒಂದು ನಿಮಿಷ ಸರ್ಕಾರದ ಕಡೆಯ ಸದಸ್ಯರು ನನ್ನ ಮಾತುಗಳನ್ನು ಕೇಳಲಿ. ನಂತರ ಬೇಕಾದರೆ ಎರಡು ದಿವಸಗಳ ಕಾಲ ನಾವು ಮಾತನಾಡೋಣ. ಇಲ್ಲಿ ನಮ್ಮ ಜೊತೆಗಿದ್ದವರು, ಈಗ ಅಲ್ಲಿರುವವರು ಎಲ್ಲರ ಅಭಿಪ್ರಾಯ ನಮಗೆ ಗೊತ್ತಿದೆ.ಅದಕ್ಕೋಸ್ಕರ ಅವರು ನಂತರ ಮಾತನಾಡಲಿ, ನಾನು ಅವರು ಮಾತನಾಡುವುದು ಬೇಡವೆಂದು ಹೇಳುವುದಿಲ್ಲ. ಸರಳ ಬಹುಮತ ಬಂದ ನಂತರ ಈ ಸಮಸ್ಯೆ ಕರ್ನಾಟಕ

ರಾಜ್ಯದಲ್ಲಿ ನಿರ್ಮಾಣವಾಗುವುದಕ್ಕೆ ಕಾರಣವೇನು? ಚುನಾಯಿತ ಸದಸ್ಯರನ್ನು ಯಾವುದೇ issue based ಅಲ್ಲ, ಯಾವುದೇ ತತ್ವ ಅಥವಾ ಪ್ರಣಾಳಿಕೆಯ ಮೇಲಲ್ಲ, ಚುನಾವಣೆ ನಡೆದ ಆರು ತಿಂಗಳೊಳಗೆ ರಾಜೀನಾಮೆಯನ್ನು ಕೊಟ್ಟು ಮತ್ತೆ ಚುನಾವಣೆಗೆ ನಿಲ್ಲಿಸತಕ್ಕಂಥಾದ್ದು, ಇದು ಒಂದು ಒಳ್ಳೆಯ ಪರಂಪರೆ ಅಲ್ಲ. ಅವತ್ತು ನಾನು ವಿರೋಧ ಪಕ್ಷದ ನಾಯಕನಾಗಿದ್ದೆ. ಆವತ್ತು ಸಹ ನಾನು ಹೇಳಿದೆ. 'ಈ ವಿಷವೃತ್ತದಲ್ಲಿ ನೀವು ಸಿಕ್ಕಿ ಹಾಕಿಕೊಳ್ಳುತ್ತೀರಿ, ನೀವೇ ಚಕ್ರವ್ಯೂಹವನ್ನು ನಿರ್ಮಾಣ ಮಾಡಿಕೊಂಡಿರಿ, ಇದು ಪ್ರಜಾಪ್ರಭುತ್ವಕ್ಕೆ ಒಳ್ಳೆಯದಲ್ಲ' ಎಂದು ನಾನು ಹೇಳಿದೆ.ಅದು ಇವತ್ತು ಅವರಲ್ಲಿ ನಡೆಯುತ್ತಿರತಕ್ಕಂಥ ದ್ವಂದ್ವಗಳು. ಅವರ ಮೂಲ ತತ್ವ, ಸಿದ್ಧಾಂತಕ್ಕೆ ಬದ್ಧತೆ ಇಲ್ಲದ ಜನ ಅಧಿಕಾರಕ್ಕೋಸ್ಕರ ಅವರ ಹತ್ತಿರಕ್ಕೆ ಬರುತ್ತಾರೆ.ಇವತ್ತು ಇವರು ಯಾರ್‍ಯಾರನ್ನು 'ಆಪರೇಷನ್ ಕಮಲ' ಮಾಡಿ ಕರೆದುಕೊಂಡರೋ ಅವರೇ ಇವರ ನಾಯಕತ್ವದ ಬಗ್ಗೆ ಸನ್ಮಾನ್ಯ ರಾಜ್ಯಪಾಲರಿಗೆ ಪತ್ರವನ್ನು ಬರೆದರು.ರಾಜ್ಯಪಾಲರಿಗೆ ಪತ್ರವನ್ನು ಕಾಂಗ್ರೆಸ್ ಶಾಸಕರು ಬರೆದಿಲ್ಲವೆಂಬುದನ್ನು ನಾನು ಗೌರವದಿಂದ ಹೇಳುತ್ತೇನೆ. ಇದನ್ನು ಬರೆದವರು ಯಾರು? "ಆಡಳಿತದಲ್ಲಿ ಭ್ರಷ್ಟತೆ ಇದ್ದು, ಈ ರಾಜ್ಯದಲ್ಲಿ ಸರ್ಕಾರವೇ ಇಲ್ಲದಂತಾಗಿದೆ.ಈ ರಾಜ್ಯದಲ್ಲಿ ಆಡಳಿತವನ್ನು ನಡೆಸುವವರೆ ಸ್ವಜನ ಪಕ್ಷಪಾತಿಗಳಾಗಿದ್ದಾರೆ" ಎಂದು ನಾವು ಯಾರೂ ರಾಜ್ಯಪಾಲರಿಗೆ ಬರೆದಿಲ್ಲ. ಅವರು ಸತ್ಯವಿದ್ದರೆ ಹೇಳಲಿ.ಅವರು ಹಾಗೆಲ್ಲಾ ಮಾತನಾಡಬಾರದು.

**ಶ್ರೀ ಸಿ. ಸಿ. ಪಾಟೀಲ್ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು):**-ಮಾನ್ಯ ಸಭಾಪತಿಯವರೇ, ಮಾನ್ಯ ವೀರಣ್ಣ ಮತ್ತಿಕಟ್ಟಿಯವರ ಬಗ್ಗೆ ನಮಗೆ ಗೌರವವಿದೆ. ನೀವು ಮಾತನಾಡುವಾಗ ನಾನು ಮಧ್ಯದಲ್ಲಿ ತೊಂದರೆ ಕೊಡಬೇಕೆಂದು ಭಾವಿಸಿಲ್ಲ. ರಾಜ್ಯಪಾಲರಿಗೆ ಆ ರೀತಿ ಬರೆದವರು ಯಾರೇ ಇದ್ದರೂ ಕೂಡ, ಅದನ್ನು ಬರೆಸಿದವರು ಅವರ ಕಡೆಯವರೇ ಎಂದು ಅವರಿಗೆ ಹೇಳಬಯಸುತ್ತೇನೆ.

**ಶ್ರೀಮತಿ ಮೋಟಮ್ಮ:-** ಅದನ್ನು ಒಪ್ಪಿಕೊಳ್ಳುವುದಕ್ಕೆ ಅವರು ಅನ್ನ ತಿಂದಿರುವುದಿಲ್ಲವೇ?

**ಶ್ರೀ ಸಿ.ಸಿ.ಪಾಟೀಲ್:-**ತಾವು ವಿರೋಧ ಪಕ್ಷದ ನಾಯಕರಿದ್ದೀರಿ, ತಮಗೆ ಮಾತಿನ ಮೇಲೆ ಹಿಡಿತ ಇರಬೇಕು.

**ಶ್ರೀಮತಿ ಮೋಟಮ್ಮ:-**ಯಾರೇ ಆಗಲಿ, ಅವರಿಗೆ ಬುದ್ಧಿ ಇರುವುದಿಲ್ಲವೇ?

**ಶ್ರೀ ಆರ್.ವಿ.ವೆಂಕಟೇಶ್:-**ಮಂತ್ರಿಯಾದವರು ಏನು ಬೇಕಾದರೂ ಮಾತನಾಡಬಹುದೇ?

**ಸಭಾಪತಿಯವರು:-**ಎಲ್ಲರೂ ದಯಮಾಡಿ ಕುಳಿತುಕೊಳ್ಳಿ ಮಾನ್ಯ ವೀರಣ್ಣ ಮತ್ತಿಕಟ್ಟಿಯವರೇ, ತಾವು ದಯಮಾಡಿ ತಮ್ಮ ಮಾತುಗಳನ್ನು ಮುಂದುವರೆಸಿ.

(ಗೊಂದಲ)

**ಶ್ರೀಮತಿ ಮೋಟಮ್ಮ:-** ಶಾಸಕರಾಗಿ ಇನ್ನೊಬ್ಬರು ಹೇಳಿದ್ದನ್ನು ಮಾಡಿದರೆ, ಅವರಿಗೆ ಬುದ್ಧಿ ಇಲ್ಲವೇ?

**ಶ್ರೀ ವೀರಣ್ಣ ಮತ್ತಿಕಟ್ಟಿ:-** ನಾನೇಕೆ ಹೇಳುತ್ತೇನೆಂದು ನಿಮಗೆಲ್ಲಾ ಗೊತ್ತಾಗುತ್ತದೆ.

**ಶ್ರೀ ಎಸ್. ಎ. ರಾಮದಾಸ್ (ವೈದ್ಯಕೀಯ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ಮಧ್ಯದಲ್ಲಿ ಮಾತನಾಡುವುದಿಲ್ಲ. ನಾನು ತಮಗೆ ಒಂದು ಮನವಿಯನ್ನು ಏಕೆ ಮಾಡಿದೆ ಎಂದರೆ, ಇಲ್ಲಿ ನಾವು ಏನನ್ನು present ಮಾಡಿದರೂ ಕೂಡ ಕಾನೂನಿನ ಚೌಕಟ್ಟಿನ ಒಳಗಡೆ ಅದನ್ನು present ಮಾಡಿದರೆ ಒಳ್ಳೆಯದು ಎನ್ನುವ ಉದ್ದೇಶಕ್ಕೋಸ್ಕರ ನಾನು

ಹೇಳುತ್ತಿದ್ದೇನೆ. ಅವರು ಹೇಳುವುದನ್ನು ನೀವು allow ಮಾಡಿದರೆ ನಾವು ಮಾತನಾಡೋಣ.

**ಶ್ರೀ ವೀರಣ್ಣ ಮತ್ತಿಕಟ್ಟಿ:-** ನೀವು ಬೇರೆ ಬೇರೆ ಮಾತನಾಡಿದ್ದರಿಂದ ನಾವು ಸಹ ಮಾತನಾಡುತ್ತಿರುವುದು. ನಿಜವಾಗಿಯೂ ಈ ನಿರ್ಧಾರದಿಂದ ಆದ ಸಮಸ್ಯೆಯ ಬಗ್ಗೆ ನಾವು ವಿಚಾರ ಮಾಡುತ್ತಿದ್ದೇವೆ. ನಾವು ವ್ಯಕ್ತಿಗತವಾಗಿ ಯಾರನ್ನು ಬಯ್ಯುತ್ತಿಲ್ಲ. ನಾವು ಅವರ ಹೆಸರನ್ನು ಸಹ ತೆಗೆದುಕೊಂಡು ಹೇಳಿಲ್ಲ.

**ಶ್ರೀ ಎಸ್. ಎ. ರಾಮದಾಸ್:-** ಮಾನ್ಯ ಸಭಾಪತಿಯವರೇ, ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಮಾತನಾಡುತ್ತಿರುವುದನ್ನು ನಾನು ಎಲ್ಲಿಯೂ ಸಹ ಆಕ್ಷೇಪ ಮಾಡುತ್ತಿಲ್ಲ. ನಾನು ಚೇರ್‌ಗೆ appeal ಮಾಡುತ್ತಿದ್ದೇನೆ. ನಾನು ತಮಗೆ ಎರಡು ಬಾರಿ ಏಕೆ ಪಾಯಿಂಟ್ ಆಫ್ ಆರ್ಡರ್‌ನ್ನು ಕೇಳಿದೆ ಎಂದರೆ, ತಾವು ಒಂದು ಆಜ್ಞೆಯನ್ನು ಮಾಡಿ. ತಾವು ಈ ವಿಚಾರವನ್ನು allow ಮಾಡಿದರೆ ನಾವು ಉತ್ತರವನ್ನು ಕೊಡಲಿಕ್ಕೆ ಪ್ರಾರಂಭ ಮಾಡುತ್ತೇವೆ. ಇಲ್ಲಿ ಏಕೆ ನಾನು ಆ ಪ್ರಶ್ನೆಯನ್ನು ಕೇಳಿದೆನೆಂದರೆ, ಇರುವಂಥ ಕಾನೂನಿನ ಚೌಕಟ್ಟಿನ ಒಳಗಡೆ ಹೇಳುವುದಾದರೆ, ನಿಯಮ 543 ಅಡಿಯಲ್ಲಿ ಒಂದು ವಿಚಾರವಿದೆ.The motion should not anticipate a matter which has been previously appointed for consideration ಎಂದು ಹೇಳಿ ಇಲ್ಲಿ ಒಂದು ವಿಚಾರವನ್ನು ಹೇಳುತ್ತಾರೆ. ಯಾವ ವಿಚಾರವನ್ನು ಬೇರೆ ನಿಯಮದ ಅಡಿಯಲ್ಲಿ ಚರ್ಚೆ ಮಾಡಲು ಸಾಧ್ಯವಿಲ್ಲವೋ ಅಂತಹದನ್ನು ಮಾತ್ರ ನಿಲುವಳಿ ಸೂಚನೆಯ ಅಡಿಯಲ್ಲಿ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕು.ಆದರೆ ಮಾನ್ಯ ಸದಸ್ಯರು ಕೊಟ್ಟಿರುವಂಥ ಸೂಚನೆಯನ್ನು ನಾನು ಎರಡು ಬಾರಿ ಓದಿದೆ.ಅದರಲ್ಲಿ "ಮಾನ್ಯ ಮುಖ್ಯಮಂತ್ರಿಗಳು ಅಧಿಕಾರದಲ್ಲಿ ಮುಂದವರೆಯುವ ನೈತಿಕ ಹಕ್ಕನ್ನು ಕಳೆದುಕೊಂಡಿದ್ದಾರೆ." It is nothing but no-confidence motion. ಆ ನಿಯಮದ ಅಡಿಯಲ್ಲಿ ಇದನ್ನು ತರುವಂಥ

ಅವಕಾಶ ಇರುವಂಥ ಸಂದರ್ಭದಲ್ಲಿ ಇದನ್ನು urgent matter ಎಂದು ಹೇಳಿ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿಲ್ಲ. ದಯಮಾಡಿ ಇದರಡಿಯಲ್ಲಿ ಇರುವ rulings ಓದಿ ನೋಡಿ.ಸಭಾಧ್ಯಕ್ಷರಾಗಿದ್ದಂಥ ಶ್ರೀ ಮಾಲವಂಕರ್‌ರವರ observation ಇದರಲ್ಲಿದೆ.ಯಾವ ವಿಚಾರವನ್ನು ಬೇರೆ ನಿಯಮದ ಅಡಿಯಲ್ಲಿ ಚರ್ಚೆಗೆ ತರುವುದಕ್ಕೆ ಸಾಧ್ಯವಿಲ್ಲವೋ ಅದನ್ನು ನಿಲುವಳಿ ಸೂಚನೆಯ ಅಡಿಯಲ್ಲಿ ತರಬಹುದು ಎಂದಿದೆ. ಹಾಗಿರುವುದರಿಂದ ಈಗ ಹೇಳಿದಂಥ ಎಲ್ಲಾ ವಿಚಾರಗಳು ನಮ್ಮ ಸರ್ಕಾರಕ್ಕೆ ಇಲ್ಲವೆನ್ನುವುದಾದರೆ, ಅವರು ಆ ವಿಷಯವನ್ನು ಸದನದ ಮುಂದೆ ತರಲಿ. ಅದಕ್ಕೆ ನಾವು ಉತ್ತರವನ್ನು ಹೇಳುತ್ತೇವೆ.

**ಶ್ರೀ ಆರ್. ವಿ. ವೆಂಕಟೇಶ್:-**ಮಾನ್ಯ ಸಭಾಪತಿಯವರೇ, ಅವರ ನೈತಿಕತೆಯ ಹಕ್ಕನ್ನು ಕಳೆದುಕೊಂಡಿದ್ದಾರೆ ಎಂದು ನಾವು ಹೇಳುತ್ತಿದ್ದೇವೆ. ನಾವು ಬೇರೆ ಯಾವುದೇ ವಿಚಾರವನ್ನು ಹೇಳುತ್ತಿಲ್ಲ.

**ಶ್ರೀ ಎಸ್. ಎ. ರಾಮದಾಸ್:-** ಮಾನ್ಯ ಸಭಾಪತಿಯವರೇ, ನಾವು ಸಹ ಅದನ್ನೇ ಹೇಳುತ್ತಿರುವುದು. ಅದು ಯಾವ ಹಕ್ಕು ಆದರೂ ಆಗಿರಬಹುದು. ಅವರ ಪ್ರಕಾರ ಇದಕ್ಕೆ substantiate ಮಾಡುವಂಥ ವ್ಯವಸ್ಥೆಗಳು ಇರಬೇಕಾಗುತ್ತದೆ. ಆದರೆ ಇದನ್ನು ಈ ರೀತಿ ನಿಲುವಳಿ ಸೂಚನೆಯ ಅಡಿಯಲ್ಲಿ ತರುವುದಕ್ಕೆ provision ಇಲ್ಲ. ನಾವು ತಮ್ಮ ಆದೇಶಕ್ಕಾಗಿ ಕಾಯುತ್ತೇವೆ. ಅವರು ಮುಂದೆ ಮಾತನಾಡಿದರೆ ಅದಕ್ಕೆ ನಾವು ಉತ್ತರವನ್ನು ಹೇಳುವುದಕ್ಕೆ ಸಿದ್ಧರಿದ್ದೇವೆ. ದಯಮಾಡಿ ತಾವಿದಕ್ಕೆ ಅವಕಾಶ ಮಾಡಿಕೊಡಬಾರದು.

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ರಾಮದಾಸ್‌ರವರು ಬಹಳ ತಿಳುವಳಿಕೆ ಇರುವವರು. ಈ ಸಮಸ್ಯೆಯಿಂದಾಗಿ ಅವರು ಸಹ ನೋವನ್ನು ಅನುಭವಿಸಿದ್ದಾರೆ. ಅದೇ ರೀತಿ ನೋವು ಅನುಭವಿಸಿದವರು ಬಹಳ ಜನ ಇದ್ದಾರೆ. ಅದಕ್ಕೋಸ್ಕರ ನಾವಿದನ್ನು

ಮಾಡಬಾರದು.ಇದರಿಂದ ಈ ರಾಜ್ಯಕ್ಕೆ ಒಳ್ಳೆಯದಾಗುವುದಿಲ್ಲ. ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ, ಇದರ ಬಗ್ಗೆ ಚರ್ಚೆ ಮಾಡುವುದು ಏಕೆ ಅವಶ್ಯವಾಗಿದೆ ಎಂದರೆ, ಮುಂದೆ ಈ ಪರಿಸ್ಥಿತಿ ಮುಂದುವರೆಯಬಾರದು. ಈ ರಾಜ್ಯದಲ್ಲಿ ಬಿಜೆಪಿಯವರಿಗೆ ಬಹುಮತವಿದೆ. ಅದರ ಬಗ್ಗೆ ನಾವು ಹೇಳುತ್ತಿಲ್ಲ. ಬಹುಮತವನ್ನು ಯಾರು ಕೊಟ್ಟರು, ಹೇಗೆ ಕೊಟ್ಟರು, ಹೇಗೆ ತೆಗೆದುಕೊಂಡರು ಎಂಬುದು ಬೇರೆ ಪ್ರಶ್ನೆ.ಅದು ಅವರಿಗೂ ಸಹ ಗೊತ್ತಿದೆ.

**ಶ್ರೀ ಮೋಹನ ಎ. ಲಿಂಬೀಕಾಯಿ:**-ಮಾನ್ಯ ಸಭಾಪತಿಯವರೇ, ವಿಷಯಾಂತರವಾಗುತ್ತಿದೆ. ಇತಿಹಾಸದ ಬಗ್ಗೆ ಮಾತನಾಡುವುದು ಬೇಡ. ನಮ್ಮ ಜನರಿಗೆ ಸಂವಿಧಾನ, ಇತಿಹಾಸ ಎಲ್ಲಾ ಗೊತ್ತಿದೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:**-ಗೊತ್ತಿದೆ, ಅದಕ್ಕೆ ನಿಮ್ಮ ನೋವನ್ನು ಯಾವುದು ನೀವು ಹೇಳಿಕೊಳ್ಳುವುದಕ್ಕಾಗುವುದಿಲ್ಲವೋ ಅದನ್ನು ನಾವು ಹೇಳುತ್ತಿದ್ದೇವೆ.

**ಶ್ರೀ ಸಿ.ಸಿ.ಪಾಟೀಲ್:**-ನಮ್ಮ ನೋವಿಗಿಂತ ಹೆಚ್ಚಾಗಿ ನೀವು ನಿಮ್ಮ ನೋವನ್ನು ತೋಡಿಕೊಳ್ಳುತ್ತಿದ್ದೀರಿ.

**ಶ್ರೀ ವೀರಣ್ಣ ಮತ್ತಿಕಟ್ಟಿ:**-ಮಾನ್ಯ ಸಭಾಪತಿಯವರೇ, ಈ ರಾಜ್ಯದಲ್ಲಿ ಸಂವಿಧಾನಬದ್ಧವಾದ ಸರ್ಕಾರವಿದೆ. ಅದಕ್ಕೆ ಅಂಕಿಗಳಷ್ಟೇ ಆಧಾರವಲ್ಲ. ನಮ್ಮ ಬದ್ಧತೆಯನ್ನು ನಾವು ಚುನಾವಣೆಯನ್ನು ಎದುರಿಸುವಾಗ ಹೇಳುತ್ತೇವೆ. ಚುನಾವಣಾ ಪ್ರಣಾಳಿಕೆಯಲ್ಲಿ ಅವರೂ ಸಹ ಹೇಳಿದ್ದಾರೆ. ಚುನಾವಣೆಗೆ ಹೋಗುವಾಗ ಪ್ರಣಾಳಿಕೆಯಲ್ಲಿ ಯಾವ ಅಂಶಗಳನ್ನು ಹೇಳಿರುತ್ತೇವೆಯೋ ಅವುಗಳನ್ನು ಈಡೇರಿಸುವ ದಿಸೆಯಲ್ಲಿ ಮುಂದುವರೆಯಬೇಕಾಗುತ್ತದೆ. ರಾಜ್ಯದಲ್ಲಿ ಕಾನೂನುಬದ್ಧತೆಯ ಸರ್ಕಾರ ಇರಬೇಕು. ಭ್ರಷ್ಟತೆಗೆ ಅವಕಾಶ ಇರಬಾರದು.ಸರ್ಕಾರದವರು ಯಾವರೀತಿ ತಮ್ಮ ಮೆಜಾರಿಟಿಯನ್ನು ತೋರಿಸಿದರು ಎನ್ನುವುದು ಎಲ್ಲರಿಗೂ ಗೊತ್ತಿದೆ. ನಾನು ಇದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. 18 ಮಂದಿ ಸದಸ್ಯರನ್ನು ಬದುಕುವುದಕ್ಕೆ

ಬಿಡಲಿಲ್ಲ, ಸಾಯುವುದಕ್ಕೂ ಬಿಡಲಿಲ್ಲ. ಮಾನ್ಯ ಸಭಾಪತಿಗಳೇ, ಎರಡು–ಮೂರು ದಿವಸದ ಅವಧಿ ಕೊಟ್ಟು ಸದನವನ್ನು ಕರೆಯುವುದು ಸರಿಯೇ? ಇದರ ಅಗತ್ಯತೆ ಏನಿತ್ತು? ಇದು ದುರ್ದೈವ. ಕಾವೇರಿ–ಕೃಷ್ಣಾ ನದಿಗಳ ನೀರಿನ ಬಳಕೆಗೆ ಸಂಬಂಧಿಸಿದಂತೆ ಬಂದ ತೀರ್ಪಿನ ಸಂದರ್ಭದಲ್ಲೇ ಸರ್ಕಾರ ಸದನವನ್ನು ಕರೆಯಲಿಲ್ಲ. ಆದರೆ ಆಗ ಸದನವನ್ನು ಕರೆಯುವ ಅವಶ್ಯಕತೆ ಇತ್ತು.14 ಜಿಲ್ಲೆಯ ಜನ, 7 ಲಕ್ಷ ಜನ ಸಂತ್ರಸ್ತರಾದರು. ಆಗ ಸದನವನ್ನು ಕರೆಯಲಿಲ್ಲ. . .

**ಕ್ಯಾ.ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಗಳೇ ನಾವು ಕೂಡ ಈ ಕುರಿತು ಮಾತನಾಡುವುದಿದೆ. . .

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಕಾರ್ಣಿಕ್‌ರವರೆ, ನಂತರ ನೀವೂ ಮಾತನಾಡಿ. . .

(ಗೊಂದಲ)

**ಸಭಾಪತಿಯವರು:–** ಮಾನ್ಯ ಮತ್ತೀಕಟ್ಟಿಯವರು ತಮ್ಮ ಭಾಷಣ ಮುಗಿಸುತ್ತಿದ್ದಾರೆ, ಕೊನೆಯ ಪಾಯಿಂಟ್‌ಗೆ ಬಂದಿದ್ದಾರೆ. . .

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯಸಭಾಪತಿಗಳೇ, ನಾವು ಈ ಕುರಿತುನಿಲುವಳಿ ಸೂಚನೆಯ ಅಡಿಯಲ್ಲಿ ಏಕೆ ಮಾತನಾಡಬೇಕು ಎಂದು ಕೇಳುತ್ತಿದ್ದೇವೆ ಎಂದರೆ, ಇದು ರಾಜ್ಯದ ಜನತೆಯ ಮೇಲೆ ಅತ್ಯಂತ ಕೆಟ್ಟ ಪರಿಣಾಮ ಬೀರಿದೆ. ಈ ವಿಷಯ ಬಹಳ ಮಹತ್ವಪೂರ್ಣವಾದುದು. ಆದ್ದರಿಂದ ನಮಗೆ ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದು ಕೇಳಿಕೊಳ್ಳುತ್ತೇನೆ.

**ಶ್ರೀ ಎಂ. ವಿ. ರಾಜಶೇಖರನ್ (ವಿಧಾನಸಭಾ ಕ್ಷೇತ್ರ):–**ಮಾನ್ಯ ಸಭಾಪತಿಗಳೇ, ಈ ಒಂದು ನಿಲುವಳಿ ಸೂಚನೆಯಲ್ಲಿ ನಾನು ಪ್ರವೇಶ ಮಾಡಿ ಮಾತನಾಡಬೇಕೆಂದು ಏತಕ್ಕೆ ತೀರ್ಮಾನ ಮಾಡಿದೆ ಎನ್ನುವ ವಿಚಾರವನ್ನು

ತಮ್ಮ ಮೂಲಕ ನಮ್ಮ ಆಡಳಿತ ಪಕ್ಷದ ಸದಸ್ಯರಿಗೂ ಮತ್ತು ಸದನದ ಎಲ್ಲ ಗೌರವಾನ್ವಿತ ಸದಸ್ಯರಿಗೂ ತಿಳಿಸಬಯಸುತ್ತೇನೆ.

ಮಾನ್ಯ ಸಭಾಪತಿಗಳೇ, ಇತ್ತೀಚಿನ ದಿವಸಗಳಲ್ಲಿ ನಮ್ಮ ರಾಜ್ಯದಲ್ಲಾದ ರಾಜಕೀಯ ಬೆಳವಣಿಗೆ ಹೇಗಿದೆ ಮತ್ತು ಸಂವಿಧಾನಕ್ಕೆ ಯಾವರೀತಿ ಕುಂದು ಬಂದಿದೆ ಎನ್ನುವ ವಿಚಾರದಲ್ಲಿ ಒಂದೆರಡು ವಿಷಯಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ಸಭಾಪತಿಗಳೇ, ಇವತ್ತಿನ ದಿವಸ ideals and values will be inspired the millions of people before and after independence. Those values and ideals are greatly threatened.ಈ ಕುರಿತು ನಾವೆಲ್ಲರೂ ಯೋಚನೆ ಮಾಡಬೇಕಾಗುತ್ತದೆ. ರಾಜಕೀಯ ಬದ್ಧತೆಯನ್ನು ಪಕ್ಷಕ್ಕೆ ಮಾತ್ರ ಸೀಮಿತ ಮಾಡಿಕೊಳ್ಳದೇ ದೇಶದ ಹಿತದೃಷ್ಟಿಯಿಂದ, ರಾಜ್ಯದ ಹಿತದೃಷ್ಟಿಯಿಂದ ನಾವು ಇವತ್ತು ಯೋಚನೆ ಮಾಡಬೇಕಾಗಿದೆ. ಗಾಂಧೀಜಿಯವರು, ಯಾರು ಸಾಧನೆ ಮಾಡಬಯಸುತ್ತಾರೋ ಆ ಸಾಧನೆ ಮಾಡುವ ದಾರಿ ಮಹತ್ವದ್ದಾಗಿರಬೇಕು ಎಂಬ ಮಾತನ್ನು ಹೇಳಿದ್ದಾರೆ. The means should as pure as end. ಇದನ್ನು ನಾವೆಲ್ಲರೂ ಮನವರಿಕೆ ಮಾಡಿಕೊಳ್ಳಬೇಕಾಗುತ್ತದೆ. ನಾನು ಒಂದು ಪಕ್ಷದ ಸದಸ್ಯನಾಗಿದ್ದರೂ ಸಹಿತ ಇವತ್ತಿನ ದಿವಸ ರಾಜ್ಯದ ಹಿತದೃಷ್ಟಿಯಿಂದ, ದೇಶದ ಹಿತದೃಷ್ಟಿಯಿಂದ ಈ ಮಾತನ್ನು ಹೇಳಬಯಸುತ್ತೇನೆ. ನನ್ನ ಮನಸ್ಸಿಗೆ ಚಿಂತನೆ ಬಂದಿರುವಂಥದ್ದು ಏನೆಂದರೆ, ಇಂದು ಆಡಳಿತ ನಡೆಸುತ್ತಿರುವ ಮಾನ್ಯ ಯಡಿಯೂರಪ್ಪನವರು, He has become the victim of circumstances. Let us make it very clear. I am extremely sorry about this.ಇವತ್ತಿನ ದಿವಸ ಅಧಿಕಾರವನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಏನು ಬೇಕಾದರೂ ಮಾಡಬಹುದು ಎನ್ನುವ ಮನೋಭಾವವನ್ನು ಬೆಳಸಿಕೊಂಡರೆ ಮುಂದಿನ ದಿನಗಳಲ್ಲಿ ಈ ರಾಷ್ಟ್ರದಲ್ಲಿ ಸಂವಿಧಾನಕ್ಕೆ ದೊಡ್ಡ ಕುಂದು ಬರುತ್ತದೆ ಎಂಬ ಅಂಶವನ್ನು ಹೇಳಬಯಸುತ್ತೇನೆ. ರಾಜ್ಯದಲ್ಲಿ ಮತ್ತು ರಾಷ್ಟ್ರದಲ್ಲಿ we have been demolishing the institutional provision which we have upheld for

generations, ರಾಜಕೀಯ ವ್ಯಕ್ತಿಗಳೇನಿದ್ದಾರೆ politicians of an institution have been completely demolished. ಒಂದು ಕಾಲದಲ್ಲಿ ರಾಜಕೀಯ ವ್ಯಕ್ತಿಗಳೆಂದರೆ ವಿಶಿಷ್ಟವಾದ ಗೌರವವನ್ನು ಕೊಡುತ್ತಿದ್ದರು, ಅದನ್ನು ನಾವು ನೋಡಿದ್ದೇವೆ. ಇವತ್ತಿನ ದಿವಸ, ರಾಜಕೀಯ ವ್ಯಕ್ತಿಗಳೆಂದರೆ ಅವರ ಕುರಿತು ಹೇಸಿಗೆ ಪಡುವಂತಹ ವಾತಾವರಣ ನಿರ್ಮಾಣವಾಗಿದೆ. ಇದಕ್ಕೆ ಕಾರಣ ಯಾರು ಎನ್ನುವುದರ ಬಗ್ಗೆ ನಾವೆಲ್ಲರೂ ಯೋಚನೆ ಮಾಡಬೇಕಾಗುತ್ತದೆ. ಇದು ಒಂದು ರಾಜಕೀಯ ಪಕ್ಷಕ್ಕೆ ಸಂಬಂಧಪಟ್ಟಿದ್ದಲ್ಲ ಅಥವಾ ಒಬ್ಬ ವ್ಯಕ್ತಿಗೆ ಸಂಬಂಧಪಟ್ಟಿದ್ದಲ್ಲ. ನಾವು ಈ ರಾಷ್ಟ್ರದ ನಾಗರಿಕರಾಗಿ ಯೋಚನೆ ಮಾಡಬೇಕು.ನಮ್ಮ Constitution framers ಯಾರಿದ್ದಾರೋ ಅವರು, ಮುಂದೆ ಇಂತಹ ವಾತಾವರಣ ನಿರ್ಮಾಣವಾಗುತ್ತದೆ ಎಂದು ಖಂಡಿತವಾಗಿಯೂ ತಿಳಿದುಕೊಂಡಿರಲಿಲ್ಲ.They never imagined, otherwise those provisions would have been put as part of the Constitution. ನಾವು ಇವತ್ತು ಶಿಸ್ತನ್ನು ಮೀರಿ, ಎಲ್ಲೆಯನ್ನು ಮೀರಿ ಏನು ವರ್ತಿಸುತ್ತಿದ್ದೇವೆಯೋ ಇಂತಹ ಒಂದು ವರ್ತನೆ ಘಟಿಸುತ್ತದೆ ಎಂದು ಅವರು ಎಣಿಸಿರಲಿಲ್ಲ. ಇವತ್ತಿನ ದಿವಸ Parliamentary system as an institution is in great danger. ಇವತ್ತಿನ ದಿವಸ ಏನಾಗುತ್ತಿದೆ ರಾಷ್ಟ್ರಮಟ್ಟದಲ್ಲಿ ಮತ್ತು ರಾಜ್ಯಮಟ್ಟದಲ್ಲಿ ಕೆಲವು ವ್ಯಕ್ತಿಗಳು ತಮ್ಮ ವಿಚಾರಗಳನ್ನು ಸದನಗಳಲ್ಲಿ ಮಂಡಿಸದೇ, ಬೀದಿಗೆ ಇಳಿದು ತೀರ್ಮಾನ ಮಾಡುತ್ತೇವೆ ಎಂದು ಹೇಳುವುದಾದರೆ ಮುಂದಿನ ಗತಿ ಏನು? The values and ideals which inspired millions of people, is in great danger.ಮೌಲ್ಯಗಳನ್ನು ತಾವು ಹೇಗೆ restore ಮಾಡುತ್ತೀರಿ? It is not confined to you alone. It is not the ruling party alone, it is confined to every one; every one must think and apply their mind. How do we sustain the democracy which has sustained after sacrificing? Why did we fight against the British Empire? I am now at the age of 84, greatly concerned about the future survival of democracy. How did we protect

and sustain the democracy which has been inherited by us after the great sacrifice made by our elders. ಆದ್ದರಿಂದ ನಾವೆಲ್ಲರೂ ಈ ವಿಚಾರದಲ್ಲಿ ಇವತ್ತಿನ ದಿವಸ ಯೋಚನೆ ಮಾಡಬೇಕಾಗಿದೆ. ಇತ್ತೀಚಿನ ದಿನಗಳಲ್ಲಿ ರಾಜ್ಯದಲ್ಲಿ ನಡೆದಿರುವಂಥ ಬೆಳವಣಿಗೆ ಆತಂಕಕಾರಿ ಬೆಳವಣಿಗೆಯಾಗಿದೆ. ಕುರ್ಚಿಯನ್ನು ಉಳಿಸಿಕೊಳ್ಳುವುದಕ್ಕೆ ನಾವು ಏನು ಬೇಕಾದರೂ ಮಾಡುವುದಕ್ಕೆ ಸಿದ್ಧವಾಗಿದ್ದೇವೆ ಎಂದು ಹೇಳುವುದಾದರೆ, ಮುಂದೆ ಬರತಕ್ಕಂಥ ದಿನಗಳಲ್ಲಿ ಪ್ರಜಾಪ್ರಭುತ್ವ ನಾಶವಾಗುತ್ತದೆ ಎಂದು ನನಗನ್ನಿಸುತ್ತಿದೆ.ಈ ಅಂಶವನ್ನು ಈಕಡೆ ಇರುವವರೂ ತಿಳಿದಿಕೊಳ್ಳಬೇಕಾಗು ತ್ತದೆ, ಆಕಡೆ ಇರುವವರೂ ತಿಳಿದುಕೊಳ್ಳಬೇಕಾಗುತ್ತದೆ. ಆದ್ದರಿಂದ, let us protect the institution of politics. There was a time – if you go through the history of thousands of politicians-politics is a noblest profession. ಇವತ್ತು ರಾಜಕೀಯ ಏನಾಗಿದೆ ಎನ್ನುವುದನ್ನು ನಾವೆಲ್ಲ ಯೋಚನೆ ಮಾಡಬೇಕಾಗುತ್ತದೆ. ನಮ್ಮ ಆತ್ಮವನ್ನು ನಾವು ಪರಿಶೀಲನೆ ಮಾಡಿಕೊಳ್ಳಬೇಕಾಗುತ್ತದೆ. That has become a great threat to the survival of politicians as an institution. Similarly, poltical parties. The poltical parties are becoming irrelevant today. You see, what is happening at the national level, the two instances which occurred recently and according to the public opinion no purpose would serve if you have the discussion in the Parliament and State Legislature. Do you want that to become success? ಇದರ ಬಗ್ಗೆ ನಾವೆಲ್ಲ ಯೋಚನೆ ಮಾಡಬೇಕಾಗುತ್ತದೆ. ಆದ್ದರಿಂದ ನಾನು ಮಾನ್ಯ ಸಭಾಪತಿಗಳ ಮೂಲಕ ವಿರೋಧ ಪಕ್ಷ ಮತ್ತು ಆಡಳಿತ ಪಕ್ಷದವರಲ್ಲಿ ಕೇಳಿಕೊಳ್ಳುವುದೇನೆಂದರೆ please give highest attention to protect the values and ideals which inspire all of us. ಆದ್ದರಿಂದ ಇದನ್ನು ಬದಲಾವಣೆ ಮಾಡಿಕೊಳ್ಳಬೇಕಾಗುತ್ತದೆ.

A last word with regard to corruption: Corruption has become the comparative issue. It is very unfortunate. Unless every one of us, both the rulingparty as well as the opposition party comes together, put their minds together to deal with this menace, otherwise our very existence as a civilization is threatened. With these words, I would like to submit that permission may kindly be granted so that there would be a meaningful discussion, from your side and from our side. Our leaders have already taken the initiative. Please do not treat this as a party thing. Please do not stand on the citadel of the party's interest. Let us discuss this in a thread bare manner and then find solutions which are good for the survival of the democracy in future. Thank you, Sir.

**ಸಭಾಪತಿಯವರು:**-ನಿಲುವಳಿ ಸೂಚನೆ ಏಕೆ ಅವಶ್ಯಕ ಎಂಬುದರ ಬಗ್ಗೆ ಮಾನ್ಯ ಸುದರ್ಶನ್‌ರವರು ಈಗ ಮಾತನಾಡುತ್ತಾರೆ. ಆಮೇಲೆ ಸರ್ಕಾರ ಉತ್ತರ ಹೇಳುತ್ತದೆ.

**ಶ್ರೀ ವಿ.ಆರ್.ಸುದರ್ಶನ್ (ವಿಧಾನಸಭಾ ಕ್ಷೇತ್ರ):**-ಮಾನ್ಯ ಸಭಾಪತಿಯವರೇ, ನಾವೆಲ್ಲರೂ ಕೂಡ ನಿಲುವಳಿ ಸೂಚನೆಯನ್ನು ಪ್ರಸ್ತಾಪ ಮಾಡುವುದಕ್ಕೆ ತಮ್ಮ ಅನುಮತಿಯನ್ನು ಕೋರಿದ್ದೇವೆ. ತಾವು preliminary submission ಮಾಡುವುದಕ್ಕೂ ಕೂಡ ಅವಕಾಶವನ್ನು ಮಾಡಿ ಕೊಟ್ಟಿದ್ದೀರಿ ಅದಕ್ಕಾಗಿ ನಾವು ತಮಗೆ ಧನ್ಯವಾದಗಳನ್ನರ್ಪಿಸುತ್ತೇವೆ.

**ಸಭಾಪತಿಯವರು:**-ನಾನು ಕಳೆದ ಬಾರಿಯೇ ಹೇಳಿದ್ದೇನೆ. ಸದನದೊಳಗಡೆ ಮೊಬೈಲ್‌ನ್ನು ತರುವುದಾದರೆ switch off ಮಾಡಿಕೊಂಡು ತರಬೇಕು. ಸದನದೊಳಗೆ ಮೊಬೈಲ್‌ನ್ನು ತರದಿರುವುದು ಒಳ್ಳೆಯದು. ಇಲ್ಲಿ ಜಾಮರ್ ಹಾಕಿದ್ದರು, ಅದು ಏನಾಯಿತು ಎಂದು ಕೆಲವರು ಕೇಳಿದರು ಈಗ

ನಿಮಗೆಲ್ಲಾ ಗೊತ್ತಿದೆ.2ಜಿ, 3ಜಿ ತಂತ್ರಜ್ಞಾನಗಳೆಲ್ಲಾ ಬಂದು ಬಿಟ್ಟಿವೆ. ನಮ್ಮ ಹತ್ತಿರ ಇರುವ ಜಾಮರ್ 2ಜಿ ತಂತ್ರಜ್ಞಾನಕ್ಕೆ ಎಟುಕುವುದಿಲ್ಲ, 3ಜಿ ತಂತ್ರಜ್ಞಾನಕ್ಕಂತೂ ಎಟಕುವುದೇ ಇಲ್ಲ. ಈಗ ಹೊಸ ಜಾಮರ್ ಹಾಕಿಸುವುದಕ್ಕೆ ಪ್ರಯತ್ನ ನಡೆಸಿದ್ದೇನೆ. ಅದು ಮಾರ್ಕೆಟ್‌ನಲ್ಲಿ ದೊರೆಯುತ್ತಿಲ್ಲ. ಅದು ಬರುವ ತನಕ ನಾವೇ ನಮ್ಮ ಮೇಲೆ ಸ್ವಯಂ ನಿಯಂತ್ರಣ ಹಾಕಿಕೊಳ್ಳಬೇಕು.ನೀವೆಲ್ಲಾ ಒಪ್ಪುವುದಾದರೆ, ಸೋಮವಾರದಿಂದ ಬಾಗಿಲುಗಳಲ್ಲಿ ಒಂದು ಡಬ್ಬ ಇಟ್ಟಿರುತ್ತೇನೆ. ನಮ್ಮ ಮೊಬೈಲ್‌ಗಳನ್ನು ಸರ್ಚ್ ಮಾಡುತ್ತಾರೆ. ನಮ್ಮ ಬ್ಯಾಗ್‌ನಲ್ಲಿ, ಜೇಬ್‌ನಲ್ಲಿ ಮೊಬೈಲ್ ಇದ್ದರೆ ಅದನ್ನು ಆ ಡಬ್ಬದಲ್ಲಿ ಹಾಕಿಸುತ್ತಾರೆ. ಹೊರಗಡೆಗೆ ಹೋಗುವಾಗ ಅದನ್ನು ತೆಗೆದುಕೊಂಡು ಹೋಗಬಹುದು. ಅದೇನಾದರೂ ಕಳ್ಳತನವಾಗಿ misplace ಆದರೆ ನಾನು ಜವಾಬ್ದಾರನಲ್ಲ. ಮೊಬೈಲ್ ತರಬೇಡಿ ಎಂದು ಹೇಳುತ್ತಿದ್ದೇನೆ.

**ಶ್ರೀಮತಿ ಮೋಟಮ್ಮ:-**ಮಾನ್ಯ ಸಭಾಪತಿಯವರೇ, ರಿಂಗ್ ಆಗಿದ್ದು ನನ್ನ ಮೊಬೈಲ್‌ನಲ್ಲಿ ನಾನು ಕ್ಷಮೆ ಕೇಳುತ್ತೇನೆ. Switch off ಮಾಡಿದ್ದೆ. ಆದರೂ ರಿಂಗ್ ಆಗಿದೆ.ಏಕೆ ಈ ರೀತಿ ಆಯಿತೋ ಗೊತ್ತಿಲ್ಲ.

**ಸಭಾಪತಿಯವರು:-**ನಾನು ಗೌರವಾನ್ವಿತ ಸದಸ್ಯರಿಗೆ ಮಾತ್ರ ಹೇಳುತ್ತಿಲ್ಲ. ಅಧಿಕಾರಿಗಳಿಗೆ, ಮಾಧ್ಯಮದ ಮಿತ್ರರಿಗೆ ಮತ್ತು ಇಲ್ಲಿಗೆ ಬರತಕ್ಕಂಥ ಎಲ್ಲರಿಗೂ ಹೇಳುತ್ತಿದ್ದೇನೆ. ಒಳಗೆ ಬರುವುದಕ್ಕಿಂತ ಮುಂಚೆ ಮೊಬೈಲ್ switch off ಮಾಡಿ ಒಳಗೆ ಬನ್ನಿ. ನನ್ನದೇನೂ ಅಭ್ಯಂತರವಿಲ್ಲ.

**ಶ್ರೀ ವಿ.ಆರ್.ಸುದರ್ಶನ್:-**ಮಾನ್ಯ ಸಭಾಪತಿಯವರೇ, ಒಂದು ಗಂಭೀರವಾದಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಮೇ 13ನೇ ತಾರೀಖು ಸುಪ್ರೀಂ ಕೋರ್ಟ್‌ಒಂದುತೀರ್ಮಾನವನ್ನು ನೀಡಿದೆ.It is a landmark judgment. It is not only a landmark judgment, but also a historical judgement. ದೇಶದ ಉದ್ದಗಲಕ್ಕೂ ಕೂಡ ಇದರ ಬಗ್ಗೆ ಗಂಭೀರವಾಗಿ ಚರ್ಚೆಯಾಗಿದೆ. ಈ ಒಂದು ಜಡ್ಜ್ ಮೆಂಟ್ ಇಡೀ ರಾಷ್ಟ್ರದ ಜನರ

ಗಮನವನ್ನು ಸೆಳೆದಿರುವುದನ್ನು ನಾವು ನೋಡಿಕೊಂಡು ಬಂದಿದ್ದೇವೆ ಮತ್ತು ನಿರಂತರವಾದಂತಹ ಚರ್ಚೆಗಳು ಕೂಡ ಬರೀ ರಾಜ್ಯದಲ್ಲಷ್ಟೇ ಅಲ್ಲ, ರಾಷ್ಟ್ರದಲ್ಲೂ ಕೂಡ ಆಗುತ್ತಿವೆ. ನಿಲುವಳಿ ಸೂಚನೆ ಹೇಗೆ ಬಹಳ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ ಎಂದರೆ, ಕಳೆದ ವರ್ಷ ಅಕ್ಟೋಬರ್ 10ನೇ ತಾರೀಖಿನಿಂದ ಮೇ 13ರವರೆಗೆ ನಡೆದು ಹೋದಂತಹ ಪ್ರಕರಣಗಳು ಮುಖ್ಯವಾಗುತ್ತದೆ. ಸುಪ್ರೀಂ ಕೋರ್ಟ್‌ನವರು ಉಲ್ಲೇಖ ಮಾಡಿರುವಂಥದ್ದು ಕೂಡ ಆ ಮಧ್ಯೆ ನಡೆದು ಹೋದಂತಹ ಪ್ರಕರಣಗಳೇ.ಆ ಹಿನ್ನಲೆಯಲ್ಲೇ ನಾವು ನಿಲುವಳಿ ಸೂಚನೆಯನ್ನು ಮಂಡಿಸಿರತಕ್ಕಂಥದ್ದು. ಇದು ಸಾರ್ವಜನಿಕ ಮಹತ್ವವಾದ ವಿಷಯವಾಗಿರುವುದರಿಂದ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ನಾವು ಪುನ: ಪುನ: ತಮಗೆ ಮನವಿ ಮಾಡುತ್ತಿದ್ದೇವೆ. ತಾವು ಈಗಾಗಲೇ ಅನೇಕ ಪೀಠಾಸೀನಾಧಿಕಾರಿಗಳ ಸಮ್ಮೇಳನಕ್ಕೆ ಹೋಗಿದ್ದೀರಿ. ನಮ್ಮೆಲ್ಲರಿಗೂ ಗೊತ್ತಿದೆ.The relationship between the legistature and the judiciary, the relationship between the legistrature and the executive, the relationship between the legislature and the press, ಇದೆಲ್ಲಾ ಕೂಡ ಬಹಳ ಮುಖ್ಯವಾಗುತ್ತದೆ. ಪ್ರಜಾಪ್ರಭುತ್ವದ ಯಶಸ್ವಿಗೆ ಇವೆಲ್ಲಾ ಆಧಾರ ಸ್ತಂಭಗಳು. ಅದರಲ್ಲೂ ಕೂಡ ಪ್ರಮುಖವಾಗಿ ನಾಲ್ಕು ಆಧಾರ ಸ್ತಂಭಗಳಿವೆ. ನನಗೆ ಆ ಸದನದಲ್ಲಿ ಏನು ನಡೆಯುತ್ತಿದೆ ಎಂಬುದು ಮುಖ್ಯವಲ್ಲ. ಏಕೆಂದರೆ, ಈ ಸದನದಲ್ಲಿ ಆ ಸದನದ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ನಿಯಮಗಳಲ್ಲಿ ಅವಕಾಶಗಳಿಲ್ಲ. ಆದರೆ, ಸುಪ್ರೀಮ್ ಕೋರ್ಟ್‌ನವರು ಹೇಳಿದಂತಹ ವಿಷಯಗಳು ಮತ್ತು ಈ ರಾಜ್ಯದಲ್ಲಿ ಆಗಿರತಕ್ಕಂಥ ಬೆಳವಣಿಗೆಗಳು ಅದು ಬಹಳ ಮುಖ್ಯವಾಗುತ್ತದೆ. ಪರಿಸ್ಥಿತಿಗಳು ಹೇಗೆ ನಿರ್ಮಾಣವಾಯಿತು, ಪರಿಸ್ಥಿತಿಗಳು ಆಧ್ವಾನವಾಗುವಂತಹ ರೀತಿಯಲ್ಲಿ ಅಧಿಕಾರದ ದುರುಪಯೋಗವಾಗುವಂತಹ ಪರಿಸ್ಥಿತಿ ಹೇಗೆ ನಿರ್ಮಾಣವಾಯಿತು ಎಂಬುದು ಬಹಳ ಮುಖ್ಯವಾಗುತ್ತದೆ.ಮಾನ್ಯ ಸಭಾಪತಿಯವರೇ ಅಧಿಕಾರದ ದುರುಪಯೋಗ ಬಹಳ ಮುಖ್ಯ

ಆಗುವುದಿಲ್ಲವೇ? ಸುಪ್ರೀಂ ಕೋರ್ಟ್‌ನವರು 'Manufactured Majority' ಎಂದು ಹೇಳಿದ್ದಾರಲ್ಲಾ, ಅದು ಬಹಳ ಮುಖ್ಯ ಆಗುವುದಿಲ್ಲವೇ?Natural justice deny ಮಾಡಿದರು ಎಂದು ಹೇಳುವಂಥದ್ದು ಬಹಳ ಮುಖ್ಯ ಆಗುವುದಿಲ್ಲವೆ? ಜವಾಬ್ದಾರಿ ಸ್ಥಾನವನ್ನು ಹೊಂದಿರುವಂಥವರಿಗೆ ಇದು ಯಾವುದು ಮುಖ್ಯವಲ್ಲ ಎಂದು ಹೇಳುವುದಾದರೆ ಈ ಸದನಗಳ ಪಾವಿತ್ರ್ಯತೆ ಏನು?

**ಶ್ರೀ ಎಸ್.ಎ.ರಾಮದಾಸ್ (ವೈದಕೀಯ ಶಿಕ್ಷಣ ಸಚಿವರು)**:-ಮಾನ್ಯ ಸಭಾಪತಿಯವರೇ, ಅದಕ್ಕೆ ನಾನು ಎರಡೆರಡು ಸಲ ಮನವಿ ಮಾಡಿದೆ. ಮಾನ್ಯ ಸದಸ್ಯರು ಸುಪ್ರೀಂ ಕೋರ್ಟಿನ ವಿಚಾರವನ್ನು ಹೇಳುವುದಾದರೆ, ನಾನು ಇಲ್ಲಿ ಇರುವಂತಹ ಎರಡು courtsಗಳಲ್ಲಿ observations ಏನು ಮಾಡಿದ್ದಾರೆ, ಅದನ್ನೂ ಚರ್ಚೆ ಮಾಡಬೇಕಾಗುತ್ತದೆ.ಅವರು ಇಲ್ಲಿ ಒಂದು ಪದವನ್ನು ಹೇಳಿದರು. ಹೈಕೋರ್ಟಿನ ಜಡ್ಜ್‌ಮೆಂಟ್ ಆದ ದಿವಸದಿಂದ ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟ್ ಆಗುವ ಮಧ್ಯದ ಅಂತರದ ಒಳಗಡೆ ರಾಜ್ಯದಲ್ಲಿ ನಡೆದಿರುವಂತಹ ಒಂದು ವಿಚಾರದ ಬಗ್ಗೆ ಸಂವಿಧಾನತ್ಮಕವಾದಂತಹ ಬಹಳ ಮುಖ್ಯವಾದ ವಿಚಾರವನ್ನು ಹೇಳಿದರು. ಈ ದೃಷ್ಠಿಯಿಂದಲೇ ನಾನು ಮೂರು-ಮೂರು ಸಲ ತಮ್ಮನ್ನು ಕೇಳುತಿದ್ದೇನೆ. ನೀವು ಚರ್ಚೆಗೆ ಅನುಮತಿ ನೀಡುವುದಾದರೆ ಮೊದಲು ವಿಚಾರವನ್ನು ತಿಳಿಸಿ.ಮತ್ತೊಂದು ಕ್ರಿಯಾಲೋಪ ಇದೆ. The rule says, "The motion shall not raise any question which under the Constitution or these rules can only be raised on a distinct motion…" ಇಲ್ಲಿ ಒಂದು ಪದವನ್ನು ಅವರು ಸೇರಿಸಿದ್ದಾರೆ.ಬಹಳ ಮಹತ್ವ ವಾದಂತಹ ವಿಚಾರವನ್ನು ಹೇಳಿದ್ದಾರೆ." ಕೇವಲ ಅಧಿಕಾರದಲ್ಲಿ ಉಳಿದುಕೊಳ್ಳಬೇಕೆಂಬ ಕಾರಣದಿಂದ ಸಂವಿಧಾನದ ಮೌಲ್ಯಗಳಲ್ಲಿ ವಿರುದ್ಧವಾದಂತಹ ನಡುವಳಿಕೆವನ್ನು ಮಾನ್ಯ ಮುಖ್ಯಮಂತ್ರಿಗಳು ಎಸಗಿದ್ದಾರೆ" ಎನ್ನುವ

ವಾಕ್ಯವನ್ನು ಸೇರಿಸಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಸಂವಿಧಾನಕ್ಕೆ ವಿರುದ್ಧವಾಗಿ ಹೋಗಿದ್ದಾರೆಂದು ಹೇಳುವುದು, ಸಣ್ಣ ವಿಚಾರವಲ್ಲ. ರಾಜ್ಯದ ಒಬ್ಬ ಮುಖ್ಯಮಂತ್ರಿಗಳ ಮೇಲೆ ಅದನ್ನು ಹೇಳಬೇಕಾದರೆ ಆಡಳಿತದ ಸಂದರ್ಭದಲ್ಲಿ ಆಗಿರುವಂತಹ ನ್ಯೂನತೆಗಳು, ನಿರ್ಣಯಗಳು ಇವೆಲ್ಲಾ ಬರುತ್ತವೆ. ಈ ದೃಷ್ಠಿಯಿಂದಲೇ ಇದು ನಿಲುವಳಿ ಸೂಚನೆ ಅಡಿಯಲ್ಲಿ ಬರುವುದಿಲ್ಲ ಎಂದು ತಮಗೆ ಕೈ ಮುಗಿದು ಪ್ರಾರ್ಥನೆ ಮಾಡಿದೆ. ಇಲ್ಲವೆಂದರೆ, ಇವೆಲ್ಲಾ ರೆಕಾರ್ಡ್‌ಗೆ ಹೋಗುತ್ತದೆ.ಹಲವಾರು ಸಮಸ್ಯೆಗಳು ನಮ್ಮ ಮುಂದೆ ಬರುತ್ತವೆ. ಇಂತಹ ವಿಚಾರಗಳು ನಿಲುವಳಿ ಸೂಚನೆಯ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಬರುತ್ತದೆಯೇ ಇಲ್ಲವೇ ಎಂಬುದನ್ನು ದಯವಿಟ್ಟು ಹೇಳಿ. ಇಲ್ಲದಿದ್ದರೆ ಇಂತಹ ವಿಚಾರಗಳು ಏನಿವೆ ಅವುಗಳನ್ನು ಕಡತದಿಂದ ತೆಗೆಯಿರಿ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-**ಮಾನ್ಯ ಸಭಾಪತಿಯವರೇ, ನಾನು ಅವಾಗಿನಿಂದ ಪ್ರಯತ್ನ ಮಾಡುತ್ತಿದ್ದೇನೆ. ಚರ್ಚೆ ಮಾಡುವುದಕ್ಕೆ ಪ್ರಾರಂಭವಾಗಿ ಒಂದೂವರೆ ಗಂಟೆ ಆಯಿತು. ತಾವುpreliminary submission ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ನಾನು ಪೀಠಕ್ಕೆ ಹೇಳುವುದಕ್ಕಾಗುವುದಿಲ್ಲ. ಚರ್ಚೆಗೆ ಒಂದು ಸಮಯವನ್ನು ನಿಗದಿಪಡಿಸಬೇಕು. ಎಲ್ಲವನ್ನು ಹೇಳಬಾರದು, ಬೇಕಾದದ್ದನ್ನು ಮಾತ್ರ ಹೇಳಬೇಕು ಎಂದು ತಾವು ಪ್ರಾರಂಭದಲ್ಲೇ ಸೂಚ್ಯವಾಗಿ ಹೇಳಿದ್ದೀರಿ. ಎಲ್ಲಾ ವಿಚಾರಗಳನ್ನು ಹೇಳಿದರೂ ಇನ್ನೂ ಚರ್ಚೆಯೇ ಮುಗಿಯುತ್ತಿಲ್ಲ. ತಮ್ಮಲ್ಲಿ ನಾನು ವಿನಂತಿ ಮಾಡುವುದೇನೆಂದರೆ, ಇದಕ್ಕೆ ತಾವು ಎಷ್ಟು ಸಮಯವನ್ನು ನಿಗದಿ ಮಾಡಿದ್ದೀರಿ ಎಂಬುದನ್ನು ಹೇಳಿ? preliminary submission ಮಾಡುವುದಕ್ಕೆ ಒಂದೂವರೆ ಗಂಟೆಯಾದರೆ, ಅಕಸ್ಮಾತ್ ಚರ್ಚೆಗೆ ಅವಕಾಶ ಕೊಟ್ಟರೆ ಇಡೀ ಸದನದ ವೇಳೆ ಇದಕ್ಕೆ ಹೋಗುತ್ತದೆ. ಹಾಗಾಗಿ ತಾವು ಪ್ರಾರಂಭದಲ್ಲಿ ಹೇಳಿದ ಹಾಗೆ ಇದನ್ನು ಸೂಕ್ಷ್ಮವಾಗಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಟ್ಟು, ಇದರಲ್ಲಿ ರಾಜಕಾರಣವನ್ನು ಬೆರೆಸದ ರೀತಿಯಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ

ಸರಿ. ಎರಡನೇ ವಿಚಾರವೇನೆಂದರೆ, ತಾವು ಪಾಯಿಂಟ್ ಆಫ್ ಆರ್ಡರ್ ಬಗ್ಗೆ ಇನ್ನೂ ಏನು ಹೇಳಿಲ್ಲ.

**ಸಭಾಪತಿಯವರು:**-ಸರ್ಕಾರ ಮಾತನಾಡಿದ ಮೇಲೆ ನಾನು ಅದರ ಬಗ್ಗೆ ಮಾತನಾಡುತ್ತೇನೆ.

**ಶ್ರೀ ಎಸ್.ಎ.ರಾಮದಾಸ್:**-ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ್ದು ಸರಿ ಇದೆ. ಹೈಕೋರ್ಟ್ ತೀರ್ಪು ಬಂದಾಗಿನಿಂದ ಸುಪ್ರೀಂ ಕೋರ್ಟ್ ತೀರ್ಪು ಬರುವವರೆಗೆ ನಮ್ಮ ತೀರ್ಮಾನಗಳು ಸಂವಿಧಾನಕ್ಕೆ ವಿರುದ್ಧ ಎನ್ನುವುದಾದರೆ ಈ ವಿಚಾರವಾಗಿ ಚರ್ಚೆಗೆ ನೀವು ಅವಕಾಶ ಕೊಟ್ಟರೆ ನಾವು ಸಹ ಹಿಂದೆ ತೆಗೆದುಕೊಂಡಿರುವಂತಹ ತೀರ್ಮಾನಗಳ ಬಗ್ಗೆ ಹೇಳುತ್ತೇವೆ. ಅಲಹಾಬಾದ್ ಹೈಕೋರ್ಟ್ ತೀರ್ಪು ನೀಡಿದಂತಹ ಸಂದರ್ಭದಲ್ಲಿ ಪ್ರಧಾನಮಂತ್ರಿಗಳಾಗಿದ್ದಂತಹವರು ಅಧಿಕಾರವನ್ನು ಕಳೆದುಕೊಂಡಾಗ ಅಲ್ಲಿಂದ ಮತ್ತೆ ತೀರ್ಪು ಬರುವವರೆಗೆ ದೇಶದಲ್ಲಿ ಏನೇನು ನಿರ್ಧಾರಗಳನ್ನು ತೆಗೆದುಕೊಂಡಿದ್ದಾರೋ ಅದೆಲ್ಲವೂ ಸರಿಯೇ ಎನ್ನುವ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ. ದಯವಿಟ್ಟು ಅವಕಾಶ ಕೊಡಬೇಕಾಗುತ್ತದೆ. ಇಲ್ಲಿ ಪ್ರಶ್ನೆಗಳು ಬಹಳ ಪ್ರಮುಖವಾದವುಗಳಾಗಿದ್ದು, ಇದರಲ್ಲಿ ಸಂವಿಧಾನದ ಬಿಕ್ಕಟ್ಟಿನ ವಿಚಾರವಿದೆ.

**ಸಭಾಪತಿಯವರು:**-ಮಾನ್ಯ ಸದಸ್ಯರಾದ ಶ್ರೀಯುತ ವಿ.ಆರ್. ಸುದರ್ಶನ್‌ರವರು ಬಹಳ ಹಿರಿಯ ಸದಸ್ಯರಿದ್ದು, ಸಭಾಪತಿಗಳಾಗಿ ಕೆಲಸ ನಿರ್ವಹಿಸಿದ್ದಾರೆ. ಆದರೆ, ನೀವು ಕಾನೂನು ಪುಸ್ತಕಗಳನ್ನು ತೋರಿಸಿ ಇದಕ್ಕೆ ಅವಕಾಶ ಕೊಡುವುದು ಬೇಡವೆಂದು ಹೇಳುತ್ತಿದ್ದೀರಿ. ಆದರೆ, ಅವರು ಅವಕಾಶ ಕೊಡಬೇಕೆಂದು ಕೇಳುತ್ತಿದ್ದಾರೆ. ಏತಕ್ಕೆ ಅವಕಾಶ ಕೊಡಬೇಕೆಂದು ಕೇಳುತ್ತಿದ್ದಾರೆಂದು ನೋಡೋಣ. ಅವರು ಹೇಳಿದ್ದನ್ನು ನಾವು ಒಪ್ಪಲೇ ಬೇಕೆಂದು ಕಾನೂನು ಇಲ್ಲ. ಅಥವಾ ನೀವು ಹೇಳಿದ್ದನ್ನು ಒಪ್ಪಿಕೊಳ್ಳಬೇಕೆಂದು ಕಾನೂನು ಇಲ್ಲ. ಅವರು ಏನು ಹೇಳುತ್ತಾರೆಂದು ಕೇಳೋಣ ಏತಕ್ಕೆ ಬೇಕೆಂದು

ಅವರು ಹೇಳುವುದನ್ನು ಕೇಳೋಣ.ನಂತರ ಸರ್ಕಾರ ಏನು ಹೇಳುತ್ತದೆ ಕೇಳೋಣ.ಅವರಿಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡೋಣ.

**ಶ್ರೀ ಮತ್ತಿಕಟ್ಟಿ ವೀರಣ್ಣ:**–ಸನ್ಮಾನ್ಯ ಸಚಿವರಾದ ಶ್ರೀಯುತ ಎಸ್.ಎ.ರಾಮದಾಸ್ ರವರು ಅಲಹಾಬಾದ್ ಹೈಕೋರ್ಟಿನ ತೀರ್ಪಿನ ವಿಚಾರವಾಗಿ ಹೇಳಿದರು. ಅದರ ಪರಿಣಾಮವನ್ನು ನಾವು 1977ರ ಚುನಾವಣೆಯಲ್ಲಿ ಅನುಭವಿಸಿದ್ದೇವೆ. ನೀವು ಮುಂಬರುವ ಚುನಾವಣೆಯಲ್ಲಿ ಇದರ ಪರಿಣಾಮವನ್ನು ಅನುಭವಿಸುತ್ತೀರಿ ಎನ್ನುವುದಕ್ಕೆ ಹೇಳುತ್ತಿದ್ದೇವೆ.

(ಗೊಂದಲ)

**ಶ್ರೀ ಗಣೇಶ್ ಕಾರ್ಣಿಕ್:**–ಚುನಾವಣೆ ಬೇಕಾಗಿದ್ದರೆ ಇಲ್ಲಿ ಚರ್ಚೆ ಏತಕ್ಕೆ ಬೇಕು?

**ಶ್ರೀಮತಿ ಭಾರತಿ ಶೆಟ್ಟಿ:**–ಎರಡು ಸ್ಥಾನಗಳಲ್ಲಿ ಅವರಿಗೆ ಠೇವಣಿಯೇ ಸಿಗಲಿಲ್ಲ.

**ಶ್ರೀ ಸಿ.ಸಿ.ಪಾಟೀಲ್:**–ಅಲಹಾಬಾದ್ ಹೈಕೋರ್ಟಿನ ವಿಚಾರವನ್ನು ಆಗ ಹೇಳಿದರು. ಆದರೆ, ಅದಾದನಂತರ ಮೂರು ಚುನಾವಣೆಗಳು ನಡೆದಿದ್ದು, ಅದರಲ್ಲಿ ನಾವು ಗೆದ್ದಿದ್ದೇವೆ.

(ಗೊಂದಲ)

**ಶ್ರೀ ವಿ.ಆರ್.ಸುದರ್ಶನ್:**ಮಾನ್ಯ ಸಚಿವರಾದ ಶ್ರಿಯುತ ಪಾಟೀಲ್‌ರವರು ನಾನು ಹೇಳುವುದನ್ನು ಗಮನಿಸಬೇಕು. ಈ ಉಪ ಚುನಾವಣೆಗಳ ಗುಂಗಿನಲ್ಲಿ ಬಹಳ ಕಾಲ ಇರಲಿಕ್ಕಾಗುವುದಿಲ್ಲ. ಇತ್ತೀಚೆಗೆ ತಮಿಳುನಾಡಿನಲ್ಲಿ ಏನಾಗಿದೆಯೆನ್ನುವುದು ತಮಗೆ ಅರ್ಥವಾಗಿರಬಹುದು. ತಮಿಳುನಾಡಿನಲ್ಲಿ ಕುಮಾರಿ ಜಯಲಲಿತಾ ಅವರು ಯಾವುದೇ ಉಪ ಚುನಾವಣೆಯಲ್ಲಿ ಗೆಲ್ಲಲಿಕ್ಕೆ ಸಾಧ್ಯವಾಗಲಿಲ್ಲ. ಆದರೆ, ಸಾರ್ವಜನಿಕ ಚುನಾವಣೆ

ಬಂದಂತಹ ಸಂದರ್ಭದಲ್ಲಿ ಪರಿಸ್ಥಿತಿ ಏನಾಯಿತು ಎನ್ನುವುದು ನಿಮಗೆ ಅರ್ಥವಾಗಿರಬೇಕು. ವಿಷಯ ಹೀಗಿರುವಾಗ ಸುಮ್ಮನೆ ಚುನಾವಣೆಗಳ ಬಗ್ಗೆ ಏತಕ್ಕೆ ಮಾತನಾಡುತ್ತೀರಿ?

(ಗೊಂದಲ)

**ಶ್ರೀ ಮತ್ತಿಕಟ್ಟಿ ವೀರಣ್ಣ:-**ಶ್ರೀಯುತ ಗಣೇಶ್ ಕಾರ್ಣಿಕ್‌ರವರು 2 ಜಿ.ತರಂಗಾಂತರ ವಿಚಾರವಾಗಿ ವಿಚಾರಣೆ ಮಾಡಲಿಕ್ಕೆ ಸಿಬಿಐಗೆ ಕೊಟ್ಟರು ಎಂದು ಒಂದು ಸತ್ಯವನ್ನು ಒಪ್ಪಿಕೊಂಡರು. ಅದಕ್ಕೆ ಸುಪ್ರೀಂ ಕೋರ್ಟ್ ಆದೇಶ ನೀಡಿತ್ತು. ಇವರು ಈ ವಿಚಾರವಾಗಿ ಏತಕ್ಕೆ ಸಿಬಿಐ ವಹಿಸಿಕೊಡಲಿಲ್ಲವೆಂದು ನನಗೆ ಈಗ ಅರ್ಥವಾಯಿತು. ಇದರ ಪರಿಣಾಮ ತಮಗೆ ಆಗುತ್ತದೆಂದು ಇವರು ಸಿಬಿಐಗೆ ವಹಿಸಿಕೊಡಲಿಲ್ಲ.

**ಶ್ರೀ ಸಿ.ಸಿ.ಪಾಟೀಲ್:** ಈಗ ಕರ್ನಾಟಕಜನತೆಯ ನಾಡಿಮಿಡಿತ ಭಾರತೀಯ ಜನತಾ ಪಕ್ಷದ ಪರವಾಗಿದೆ. ಮುಂದೆಯೂ ಇರುತ್ತದೆ ಎಂದು ತಮಗೆ ಹೇಳಲಿಕ್ಕೆ ಬಯಸುತ್ತೇನೆ. ತಾವು ಈಗ ಏನು ಮುಂದಿನ ದಿನಗಳಲ್ಲಿ ಹಳ್ಳಿಕಡೆಗಳಲ್ಲಿ ನಡೆಯಿರಿ ಎಂದು ಹೇಳುತ್ತಿದ್ದೀರಿ, 224 ಅಭ್ಯರ್ಥಿಗಳ. .

**ಸಭಾಪತಿಯವರು:** ಮಾನ್ಯ ಸಚಿವರಾದ ಶ್ರೀ ಎಸ್.ಎ. ರಾಮದಾಸ್‌ರವರು ಹೇಳಿದಂತಹ ವಿಚಾರಗಳಿಗೆ ಸಂಬಂಧಪಟ್ಟಂತೆ ಹೇಳಲಿಕ್ಕೆ ಪುಸ್ತಕವನ್ನು ನನ್ನ ಮುಂದೆಯೇ ಇಟ್ಟುಕೊಂಡಿರುತ್ತೇನೆ. ಅದು ಆ ರೀತಿಯಿಲ್ಲವೆಂದು ಹೇಳುತ್ತಾ, ನೀವು ನನಗೆ ಮಾತನಾಡಲಿಕ್ಕೆ ಅವಕಾಶ ಕೊಡಿ ಎಂದು ಹೇಳುವುದಕ್ಕೆ ತಾವು ಪ್ರಯತ್ನ ಮಾಡುತ್ತಿದ್ದೀರಿ. ಅದರ ಬಗ್ಗೆ ಹೇಳಿದರೆ ಸರ್ಕಾರದ ವಾದವನ್ನು ಕೇಳಿ ನನ್ನ ನಿರ್ಣಯ ಕೊಡಲಿಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ತಡವಾಗುತ್ತದೆ. ಆದ್ದರಿಂದ, ಶ್ರೀಯುತ ಸುದರ್ಶನ್‌ರವರು ತಮ್ಮ ವಿಚಾರವನ್ನು ಬೇಗ ಹೇಳಬೇಕು.

**ಶ್ರೀ ವಿ. ಆರ್. ಸುದರ್ಶನ್ :**ಮಾನ್ಯ ಸಭಾಪತಿಯವರೇ, ಈಗ ಅದೇ ಪ್ರಶ್ನೆಯಾಗಿದೆ. ನಾನು ಪುನ: ಪುನ: ಏನು ಹೇಳುತ್ತಿದ್ದೇನೆಂದರೆ, ಅಕ್ಟೋಬರ್ 10 ರಿಂದ ಮೇ 13 ರವರೆಗೆ ಈ ರಾಜ್ಯದಲ್ಲಿ ತೆಗೆದುಕೊಂಡಿರತಕ್ಕಂತಹ ತೀರ್ಮಾನಗಳ ಬಗ್ಗೆ ಹೇಳುತ್ತಿದ್ದೇನೆ. The relationship between the legislature and the executive ಬಗ್ಗೆ ಅನೇಕ ಪ್ರಮುಖವಾದಂತಹ ತೀರ್ಮಾನಗಳಾಗಿವೆ. ಇದಕ್ಕೆ ನೈತಿಕತೆ ಬರುತ್ತದೆಯೇ? ಮುಖ್ಯಮಂತ್ರಿಗಳು ತೆಗೆದುಕೊಂಡಿರತಕ್ಕಂತ ತೀರ್ಮಾನಕ್ಕೆ, ಸರ್ಕಾರ ತೆಗೆದುಕೊಂಡಿರತಕ್ಕಂತಹ ತೀರ್ಮಾನಕ್ಕೆ ನೈತಿಕತೆ ಇದೆಯೇ ಎನ್ನುವ ಪ್ರಶ್ನೆ ನಮ್ಮದಾಗಿದೆ.ಒಂದು ಕಾನೂನು, ನಿಯಮಗಳು, ಸಂಪ್ರದಾಯಗಳು, ಇದರ ಜೊತೆಗೆ ಅಧಿಕಾರ ನಡೆಸತಕ್ಕಂತಹವರಿಗೆ ನೈತಿಕತೆ ಇರಬೇಕಾಗುತ್ತದೆ ಎನ್ನುವುದನ್ನು ಸಭಾ ನಾಯಕರು ಒಪ್ಪುತ್ತಾರೆಯೇ ಎನ್ನುವುದನ್ನು ಕೇಳಲಿಕ್ಕೆ ಬಯಸುತ್ತೇನೆ. ಇಲ್ಲಿ ನಿಮ್ಮ ಬಹುಮತದ ಬಗ್ಗೆ ಯಾರು ಮಾತನಾಡಲಿಲ್ಲ. ನಿಮ್ಮ ಬಹುಮತದ ಬಗ್ಗೆ ಯಾರು ಕೇಳಿದರು? ನಾವು ಯಾರೂ ಕೇಳಲಿಲ್ಲ. ಈ ರಾಷ್ಟ್ರದ ಜನತೆ ಕೇಳಲಿಲ್ಲ, ಈ ರಾಜ್ಯದ ಜನತೆ ಕೇಳಲಿಲ್ಲ. ಇಲ್ಲಿ ಈಗ ಮಾತನಾಡುತ್ತಿರುವುದು ಬಹುಮತದ ಪ್ರಶ್ನೆಯಲ್ಲ. ನಾವು ಈಗ ಸುಪ್ರೀಂ ಕೋರ್ಟಿನ ಒಂದು ರೂಲಿಂಗ್ ಬಗ್ಗೆ ನಾವು ಮಾತನಾಡುತ್ತಿದ್ದೇವೆ, ಮತ್ತು ನೈತಿಕತೆ ಬಗ್ಗೆ ನಾವು ಕೇಳುತ್ತಿದ್ದೇವೆ. ಇದರ ಮಧ್ಯೆ ಸ್ವೇಚ್ಛಾನುಸಾರದ ಆಡಳಿತ ಏನು ನಡೆಯಿತು, ಅದರ ಬಗ್ಗೆ ನಾವು ಕೇಳುತ್ತಿದ್ದೇವೆ. ಕೇಳಿ ಬಂದಂತಹ ಸ್ವಜನ ಪಕ್ಷಪಾತದ ಆಡಳಿತದ ಬಗ್ಗೆ ನಾವು ಕೇಳುತ್ತಿದ್ದೇವೆ. ನೀವು ಇದನ್ನು ಏತಕ್ಕೆ ಆಕ್ಷೇಪ ಮಾಡುತ್ತಿದ್ದೀರಿ, ಏತಕ್ಕೋಸ್ಕರ ಆಕ್ಷೇಪ ಮಾಡುತ್ತಿದ್ದೀರಿ?

**ಶ್ರೀ ಎಸ್.ಎ.ರಾಮದಾಸ್:** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುವುದಕ್ಕೆ ನನ್ನ ಆಕ್ಷೇಪವಿದೆ. ದಯವಿಟ್ಟು, ಮಾನ್ಯ ಸದಸ್ಯರಿಗೆ ಕೈ ಮುಗಿದು ಕೇಳಿಕೊಳ್ಳುತ್ತೇನೆ. ನಾನು ಏತಕ್ಕೆ ಆಕ್ಷೇಪ ಮಾಡುತ್ತಿದ್ದೇನೆಂದರೆ ಮಾನ್ಯ ಸದಸ್ಯರು ಸಭಾಪತಿಗಳಾಗಿ ಸೇವೆ ಸಲ್ಲಿಸಿದ್ದು, ಈ ವಿಚಾರವನ್ನು ಅರ್ಥ ಮಾಡಿಕೊಳ್ಳಬೇಕು. ನೀವು ನಿಲುವಳಿ ಸೂಚನೆಯನ್ನು ತರಬೇಕಾದರೆ. . . .

(ಗೊಂದಲ)

**ಶ್ರೀ ವಿ.ಆರ್.ಸುದರ್ಶನ್:**ನೀವು ಈ ವಿಚಾರವಾಗಿ ಲೋಕಾಯುಕ್ತದ ಮುಂದೆ ಹೋಗಲಿಲ್ಲವೇ?

(ಗೊಂದಲ)

**SRI S.A.RAMADAS:** Sir, I have a point of order in that. ಇಲ್ಲಿ ಮಾನ್ಯ ಸದಸ್ಯರು ಸಭಾಪತಿಗಳಾಗಿ ಸೇವೆ ಸಲ್ಲಿಸಿದ್ದಾರೆ.ಇಲ್ಲಿ ಇವರು ವಿಚಾರವನ್ನು ಹೇಗೆ ತೆಗೆದುಕೊಂಡರು?ಇಲ್ಲಿ ನಮ್ಮ ರೂಲ್ ಪುಸ್ತಕದಲ್ಲಿ ಒಂದು ವಿಚಾರವನ್ನು ಹೇಳುತ್ತಾರೆ. ನಾವು ಯಾವುದನ್ನು motion ಕೊಡುತ್ತೇವೆ, it should not contain arguments, inferences ಎನ್ನುವಂತಹ ಮುಖ್ಯವಾದ ಅಂಶ ಇದೆ. ಇಲ್ಲಿ argumentಇದೆ, inferences ಇದೆ.ಅಲ್ಲಿ ಕುಳಿತುಕೊಂಡು ಅಲ್ಲಿಂದ ಇಲ್ಲಿಯವರೆಗೆ ಏನಾಯಿತು ಎಂದು ನಾನು ವಿಶ್ಲೇಷಣೆ ಮಾಡಲೇ?Is it not an inference? ಆದ್ದರಿಂದ, ನಿಮ್ಮಲ್ಲಿ ನಾನು ಕೈಮಗಿದು ಪ್ರಾರ್ಥನೆ ಮಾಡುತ್ತೇನೆ. ಇಲ್ಲಿ ಇಂತಹ ವಿಚಾರಗಳು ಬಂದಾಗ argumentಗೂ ಅವಕಾಶ ಕೊಡುತ್ತೇವೆ, inferences ಗೂ ಅವಕಾಶವನ್ನು ಕೊಡುತ್ತೇವೆ. ಇದು ರೂಲ್‌ನಲ್ಲಿ ಅವಕಾಶವಿಲ್ಲ, ಹಾಗಾಗಿ, ಈಗ ಏನು ನಿಯಮ 60ರಡಿಯಲ್ಲಿ ಏನು ಕೊಟ್ಟಿದ್ದೀರಿ, ಅದನ್ನು ತರಬಾರದೆಂದು ನಾನು ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ.

(ಗೊಂದಲ)

**ಶ್ರೀ ದಯಾನಂದ:** ಸನ್ಮಾನ ಸಭಾಪತಿಯವರೇ, ಮಾನ್ಯ ಹಿರಿಯ ಸದಸ್ಯರಾದ ಶ್ರೀ ಎಂ.ವಿ.ರಾಜಶೇಖರನ್‌ರವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ತಮ್ಮ ಮೂಲಕ ಸದನಕ್ಕೆ ಮನವಿ ಮಾಡುವುದೇನೆಂದರೆ ನಾವು ಕಾನೂನು ಪುಸ್ತಕಗಳನ್ನು ತೆಗೆದು ಅದಕ್ಕೆstick on ಆಗುವುದರ ಬದಲು ಮಾಲ್ಯಾಧಾರಿತ ಪುಸ್ತಕಗಳನ್ನು ತೆರೆದು ಮೌಲ್ಯಗಳಿಗೂ ಕೂಡ stick on ಆಗಿ, ನಾವು ಈ

ಸದನದಲ್ಲಿ ಚರ್ಚೆ ಮಾಡೋಣವೆಂದು ತಮಗೆ ನಾನು ಮನವಿಯನ್ನು ಮಾಡುತ್ತೇನೆ.

**ಸಭಾಪತಿಯವರು:** ನಾನು ಒಂದು ವೇಳೆ ಈ ವಿಚಾರವಾಗಿ ಮಾತನಾಡಲಿಕ್ಕೆ ಅವಕಾಶ ಕೊಟ್ಟರೆ ಆ ವಿಚಾರವಾಗಿ ಚರ್ಚೆ ಮಾಡಲಿಕ್ಕೆ ಸಮಯ ಬೇಕಲ್ಲವೇ? ಅದಕ್ಕೆ ಅವಕಾಶ ಕೊಡುತ್ತಿನೋ ಇಲ್ಲವೋ ಅವರ ವಾದವನ್ನು ಕೇಳುವುದಕ್ಕಿಂತ ಮೊದಲು ನಾನು ಹೇಳುವುದಕ್ಕೆ ಬರುವುದಿಲ್ಲ. ನೀವುಗಳು ಇದಕ್ಕೆ ಅವಕಾಶ ಸಿಗುತ್ತದೆ, ಸಿಗುವುದಿಲ್ಲವೆಂದು ತಿಳಿದುಕೊಂಡಿದ್ದೀರಿ.ಆದರೆ, ನಾನು ಇನ್ನು ಅದರ ಬಗ್ಗೆ ತೀರ್ಮಾನ ಮಾಡಿರುವುದಿಲ್ಲ.

**ಶ್ರೀ ಮತ್ತಿಕಟ್ಟಿ ವೀರಣ್ಣ:** ನೀವು ಮೌಲ್ಯಗಳ ರಕ್ಷಕರಿದ್ದೀರಿ.

**ಸಭಾಪತಿಯವರು:** ಮಾನ್ಯ ಸದಸ್ಯರಾದ ಶ್ರೀಯುತ ವಿ.ಆರ್. ಸುದರ್ಶನ್‌ರವರು ತಮ್ಮ ಭಾಷಣವನ್ನು ಬೇಗ ಮುಗಿಸಿದರೆ ಸರ್ಕಾರದ ವಾದವನ್ನು ಕೇಳಬಹುದು.

**ಶ್ರೀ ವಿ.ಆರ್.ಸುದರ್ಶನ್:** ಮಾನ್ಯ ಸಭಾಪತಿಯವರೇ, ಒಂದು ವಿಚಾರವನ್ನು ಡಾ: ವಿ.ಎಸ್.ಆಚಾರ್ಯರವರು ಮತ್ತು ಶ್ರೀಯುತ ಎಸ್.ಎ.ರಾಮದಾಸ್‌ರವರು ಗಮನಿಸಬೇಕು.

**ಸಭಾಪತಿಯವರು:** ಸಭಾನಾಯಕರು ಏನಾದರೂ ಈ ವಿಚಾರವನ್ನು ಚರ್ಚೆ ಮಾಡಲಿಕ್ಕೆ ಅವಕಾಶವನ್ನು ಕೊಡಬೇಕೆಂದರೆ ನಾನು ಅದಕ್ಕೆ ಅವಕಾಶವನ್ನು ಕೂಡಲೇ ಬೇಕಾಗುತ್ತದೆ. ಆಗ ನನ್ನ ಪ್ರಶ್ನೆ ಬರುವುದಿಲ್ಲ. ಆದರೆ, ಅವರು ಬೇಡವೆಂದ ಸಂದರ್ಭದಲ್ಲಿ ನಾನು ಈ ಬಗ್ಗೆ ತೀರ್ಮಾನ ಮಾಡಬೇಕಾಗುತ್ತದೆ.ಆದ್ದರಿಂದ, ಅವರು ಈ ವಿಚಾರವಾಗಿ ಏನು ಹೇಳುತ್ತಾರೆನ್ನುವುದನ್ನು ನಾನು ಇನ್ನೂ ಕೇಳಿಲ್ಲ.

**ಶ್ರೀ ವಿ.ಆರ್. ಸುದರ್ಶನ್:** ಈ ನಿಲುವಳಿ ಸೂಚನೆಯ ವಿಚಾರವಾಗಿ ಚರ್ಚೆಗೆ ಏತಕ್ಕೆ ಅವಕಾಶ ಕೊಡಬೇಕೆಂದರೆ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ಒಂದು ಪತ್ರವನ್ನು ಬರೆದಿದೆ.It is no more a secret letter. ಅದು ನಿಮ್ಮ ಇಬ್ಬರಿಗೆ ಸಂಬಂಧಪಟ್ಟಂತಹ ವಿಷಯವಲ್ಲ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಕ್ಕೆ ಸೀಮಿತವಾದಂತಹ ವಿಚಾರ ಇದಲ್ಲ. ಅದನ್ನು ನೀವು ಒಂದು ಫೈಲ್‌ನಲ್ಲಿಹಾಕಿ ಭದ್ರವಾಗಿಟ್ಟುಕೊಳ್ಳುವುದಲ್ಲ ಅಥವಾ ಕೋಲ್ಡ್ ಸ್ಟೋರೇಜ್‌ಗೆ ಕಳುಹಿಸುವಂತಹ ಪತ್ರ ಅದಲ್ಲ. ಅನೇಕ ಸಾರ್ವಜನಿಕ ಮಹತ್ವದ ವಿಷಯಗಳನ್ನು, ಅನೇಕ ಆಡಳಿತಕ್ಕೆ ಸಂಬಂಧಪಟ್ಟ ವಿಷಯಗಳನ್ನು, ಅನೇಕ ಭ್ರಷ್ಟಾಚಾರದ ಹಗರಣಗಳಿಗೆ ಸಂಬಂಧಪಟ್ಟ ವಿಷಯಗಳನ್ನು, ಭ್ರಷ್ಟಾಚಾರದಲ್ಲಿ ಸಿಕ್ಕಿಹಾಕಿಕೊಂಡು, ರಾಜೀನಾಮೆಯನ್ನು ಕೊಟ್ಟು ಹೋದಂತಹ ಮಂತ್ರಿಗಳ ವಿಷಯಗಳನ್ನು ಕೂಡ ಪ್ರಸ್ತಾಪ ಮಾಡಿರತಕ್ಕಂತಹ ವಿಷಯಗಳ ಬಗ್ಗೆ, ಅಕ್ರಮ ಗಣಿಗಾರಿಕೆ ವಿಚಾರಗಳನ್ನೊಳಗೊಂಡಂತೆ ಧೀರ್ಘವಾದಂತಹ ಒಂದು ಪತ್ರವನ್ನು ಬರೆದಿದ್ದಾರೆ. Kindly place it before this august House.ಈ ವಿಚಾರವನ್ನು ತಿಳಿದುಕೊಳ್ಳುವಂತಹ ಹಕ್ಕು ಈ ರಾಜ್ಯದ ಜನತೆಗೆ ಇದೆ. ಅದಕ್ಕೋಸ್ಕರ ಈ ನಿಲುವಳಿ ಸೂಚನೆಯ ವಿಚಾರವಾಗಿ ಚರ್ಚೆ ಮಾಡಬೇಕಾಗುತ್ತದೆ.ಅದು ಕೂಡ ಬಹಳ ಮುಖ್ಯವಾಗಿರುತ್ತದೆ.It was a recent occurrence.

**ಶ್ರೀ ಎಸ್. ಎ. ರಾಮದಾಸ್:** ಇಲ್ಲಿ ಬಹಳ ಮಹತ್ವವಾದಂತಹ ವಿಚಾರವಿದೆ. ಅನುಚ್ಛೇಧ 350ರಡಿಯಲ್ಲಿ ನಮಗೆ ಅವರು ಪತ್ರವನ್ನು ಕಳುಹಿಸಿಕೊಟ್ಟಿದ್ದಾರೆ ಎನ್ನುವುದಾದರೆ ಅದು ಗೌಪ್ಯ ಎನ್ನುವುದು ಅವರಿಗೂ ಗೊತ್ತಿದೆ.ಆದರೆ, ಆ ಪತ್ರವನ್ನು ಕಳುಹಿಸಿರುವುದು ಕಾಂಗ್ರೆಸ್ ಸರ್ಕಾರ ಆಗಿರುವುದರಿಂದ, ಅದು ಮಾನ್ಯ ಸದಸ್ಯರಾದ ಶ್ರೀಯುತ ಸುದರ್ಶನ್‌ರವರ ಹತ್ತಿರ ಇದ್ದರೆ ಅದನ್ನು ಇಲ್ಲಿ ಟೇಬಲ್ ಮಾಡಲಿ.Let him place it on the table of this august House.ಅದಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ಏನು ಕೊಡಲಾಗಿದೆ ಎನ್ನುವುದನ್ನು ನಂತರ ಹೇಳಬಹುದು.ಸರ್ಕಾರ ಗೌಪ್ಯತೆಯನ್ನು

ಅವರು ಕಾಪಾಡಿರುವುದರಿಂದ, ನಮ್ಮ ಸರ್ಕಾರವೂ ಸಹ ಗೌಪ್ಯತೆಯನ್ನು ಕಾಪಾಡಬೇಕಾಗುತ್ತದೆ.ಅದಕ್ಕೆ ಗೌಪ್ಯತೆ ಎನ್ನುವ ಪ್ರಮಾಣವನ್ನು ಸ್ವೀಕಾರ ಮಾಡಿಯೇ ನಾವು ಅಧಿಕಾರಕ್ಕೆ ಬಂದಿದ್ದೇವೆ. ಅವರು ಸಹ ಆ ಪತ್ರವನ್ನು ಗೌಪ್ಯತೆಯಿಂದ ಸೀಲ್ಡ್ ಕವರ್‌ನಲ್ಲಿ ನಮಗೆ ಕಳುಹಿಸಿದ್ದಾರೆ. ನಾವು ಸಹ sealed coverನಲ್ಲಿ ನಮ್ಮ ಉತ್ತರದ ಪತ್ರವನ್ನು ಕಳುಹಿಸಿದ್ದೇವೆ. ಅದರ ಪ್ರತಿ ಇವರ ಹತ್ತಿರ ಇದ್ದರೆ ಸದನದ ಮುಂದೆ ಇಡಲಿ. ಅನಂತರ ನಾವು ಉತ್ತರ ಏನು ಎನ್ನುವುದನ್ನು ನಾವು ಕೊಡುತ್ತೇವೆ. ಆದರೆ, ಇಲ್ಲಿ ಸದನವನ್ನು ಮತ್ತೊಂದು ಬಾರಿಗೆ mislead ಮಾಡುವಂತಹ ವ್ಯವಸ್ಥೆ ಆಗಬಾರದು.

**ಪ್ರೊ॥ ಎಸ್.ಆರ್.ಲೀಲಾ:** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀಯುತ ಸುದರ್ಶನ್‌ರವರ ಈ ವಿಚಾರದ ವಿವರವನ್ನು ಸದನದಲ್ಲಿ present ಮಾಡಬೇಕೆಂದು ಹೇಳುತ್ತಿದ್ದಾರೆ. ಈಗ officialಆಗಿ ಅದನ್ನು ಬರೆದಿದ್ದರೆ, ಅದನ್ನು ಅಲ್ಲಿನ ಕೇಂದ್ರ ಸರ್ಕಾರದ ಗೃಹ ಇಲಾಖೆಯ ಕಾರ್ಯದರ್ಶಿಯವರು ನಮ್ಮ ಮುಖ್ಯ ಕಾರ್ಯದರ್ಶಿಯವರಿಗೆ ಬರೆಯಬೇಕಾಗಿತ್ತು. ಆದರೆ, ಇಲ್ಲಿ ಆ ರೀತಿಯಾಗಿ ಪತ್ರ ಬಂದಿಲ್ಲ. ಮಾನ್ಯ ಕೇಂದ್ರ ಗೃಹ ಮಂತ್ರಿಗಳು 'Top Secret'ಎಂದು ಒಂದು ಪತ್ರವನ್ನು ಬರೆದು ಇಲ್ಲಿನ ಮುಖ್ಯಮಂತ್ರಿಗಳಿಗೆ ಕೊಟ್ಟಿದ್ದಾರೆ.ಮುಖ್ಯಮಂತ್ರಿಗಳು ಸಹ ಅಷ್ಟೇ top secret ಆಗಿ ಉತ್ತರವನ್ನು ಕಳುಹಿಸಿದ್ದಾರೆ.ಆದ್ದರಿಂದ, ಅದನ್ನು ಈ ಸದನದಲ್ಲಿ present ಮಾಡಲಿಕ್ಕೆ ಬರುವುದಿಲ್ಲ. ಹೀಗಾಗಿ ಇಲ್ಲದೇ ಇರುವುದನ್ನು ಕೇಳುವುದು ಬೇಡ.ಇನ್ನೊಂದು ನೈತಿಕತೆಯ ವಿಷಯವಾಗಿ ಮಾನ್ಯ ಸದಸ್ಯರು ಹೇಳಿದರು.

**ಸಭಾಪತಿಯವರು:** ಈಗ ಆ ವಿಚಾರ ಬೇಡ.

**SRI VEERANNA MATHIKATTI:-**This House is supreme. Anything we want to know, you have to place it.

**ಪ್ರೊ॥ ಎಸ್.ಆರ್.ಲೀಲಾ:**ನೀವು ಅದನ್ನು ಕೇಳುವ ಹಾಗಿಲ್ಲ.

**ಶ್ರೀ ಮತ್ತಿಕಟ್ಟಿ ವೀರಣ್ಣ:**ಸರ್ಕಾರ ಸದನದಿಂದಲೇ ಆಗಿದ್ದು.

**ಶ್ರೀ ಸಿ. ಸಿ. ಪಾಟೀಲ್:** ಶ್ರೀಯುತ ವಿ.ಆರ್.ಸುದರ್ಶನ್‌ರವರು ಗೌರವಾನ್ವಿತ ಸಭಾಪತಿಗಳಾಗೆ ಕೆಲಸ ಮಾಡಿದವರಾಗಿದ್ದಾರೆ. ಇದರ ಬಗ್ಗೆ ಹೆಚ್ಚಿನ ಮಾತುಕತೆಯನ್ನು ಬಿಟ್ಟು, ತಾವು ನಿಲುವಳಿ ಸೂಚನೆ ಬಗ್ಗೆ ಮಂಡಿಸುತ್ತಿದ್ದೀರಿ, ಅದರ ಬಗ್ಗೆ ಮುಂದುವರಿದರೆ ಒಳ್ಳೆಯದು.

**ಶ್ರೀ ಮತ್ತಿಕಟ್ಟಿ ವೀರಣ್ಣ:** ಈವಿಚಾರವಾಗಿ ನಾವು ನಮ್ಮ ಚರ್ಚೆಯನ್ನು ಬೇಗ ಮುಗಿಸುತ್ತೇವೆ. ಆದರೆ, ಮಧ್ಯದಲ್ಲಿ ಮತ್ತೆ ಮತ್ತೆ intervention ಆದರೆ, ಬೇರೆ ಬೇರೆ ಪ್ರಸ್ತಾಪವಾದಲ್ಲಿ ಈ ಚರ್ಚೆ ವಿಳಂಭವಾಗುತ್ತದೆ. ಇದಕ್ಕೆ ಕಾರಣರು ಯಾರೂ ಅಲ್ಲ.

**ಶ್ರೀ.ವಿ.ಆರ್.ಸುದರ್ಶನ್:** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವಾಗ ಯಾವುದೇ ಅನುಚ್ಛೇದವನ್ನು ಕೋಟ್ ಮಾಡಿ ಹೇಳಲಿಲ್ಲ. ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಪತ್ರ ಬಂದಿದೆ. ಆ ಪತ್ರದ ವಿವರಗಳನ್ನು ಈ ರಾಜ್ಯದ ಜನರು ತಿಳಿದುಕೊಳ್ಳುವಂತಹ ಜವಾಬ್ದಾರಿ ಇದೆ, ಹಕ್ಕು ಇದೆ. ನಾವೂ ಕೂಡ ಈ ಮನೆಯ ಸದಸ್ಯರಾಗಿ ನಮಗೂ ಕೂಡ ಇವೆಲ್ಲದರ ಬಗ್ಗೆ ತಿಳಿದುಕೊಳ್ಳುವ ಹಕ್ಕು ಇದೆ.I am not the Spokesperson of the Government of India. ನಾನು ಇಲ್ಲಿ ಒಬ್ಬ ಜವಾಬ್ದಾರಿಯುತ ಸದಸ್ಯನಾಗಿ ಮಾತನಾಡುತ್ತಿದ್ದೇನೆ. ಸದಸ್ಯನಾಗಿ ರಾಜ್ಯದ ಆಡಳಿತ ಮತ್ತು ಈ ರಾಜ್ಯದ ಅಭಿವೃದ್ಧಿಯ ಬಗ್ಗೆ ಎಲ್ಲಾ ವಿಚಾರಗಳನ್ನು ತಿಳಿದುಕೊಳ್ಳುವ ಹಕ್ಕು ಮತ್ತು ಜವಾಬ್ದಾರಿ ಇದೆ.ನಾನು ಕೇಂದ್ರ ಸರ್ಕಾರದ ವಕ್ತಾರ ಅಲ್ಲ. ದಯಮಾಡಿ ತಾವು ಇದನ್ನು ಅರ್ಥ ಮಾಡಿಕೊಳ್ಳಬೇಕು.

**ಶ್ರೀ ಎಸ್.ಎ.ರಾಮದಾಸ್:**ನಾನು ಅರ್ಥ ಮಾಡಿಕೊಂಡಿದ್ದೇನೆ. ಅದರಲ್ಲಿ ಇರುವ ಕಂಟೆಂಟ್‌ನ ಮೇಲೆ ಯಾರೋ ಮಂತ್ರಿಗಳ ಮೇಲೆ ಎಲ್ಲಾ

ಆಪಾದನೆಗಳನ್ನು ಒಂದೊಂದಾಗಿ, ಒಂದೊಂದಾಗಿ ಹೇಳುವುದಕ್ಕೆ ಪ್ರಾರಂಭ ಮಾಡಿದ್ದೀರಿ.

**ಶ್ರೀ ವೀರಣ್ಣ ಮತ್ತಿಕಟ್ಟಿ:**ಪತ್ರಿಕೆಗಳಲ್ಲಿ ಬಂದಿದೆ.

**ಶ್ರೀ ಎಸ್.ಎ.ರಾಮದಾಸ್:**ಯಾವುದರಲ್ಲಿಯಾದರೂ ಬಂದಿರಬಹುದು. ವಕ್ತಾರ ಅಲ್ಲದೇ ಇದ್ದರೆ ಏಕೆ ಹೇಳಿದಿರಿ.What right you have? ಆ ಪತ್ರದ ವಿಚಾರವನ್ನು ಹೇಳುವುದಕ್ಕೆ ಹೊರಟಿದ್ದೀರಿ. ಹಾಗಾದರೆ ನಿಮ್ಮ ಹತ್ತಿರ ಇದ್ದರೆ ಅದನ್ನು ಕೊಡಿ.

**ಶ್ರೀ ವೀರಣ್ಣ ಮತ್ತಿಕಟ್ಟಿ:**ನಮ್ಮ ಹತ್ತಿರ ಇಲ್ಲ, ಮಾನ್ಯ ಮುಖ್ಯಮಂತ್ರಿಗಳೇ ಹೇಳಿದ್ದಾರೆ.

(ಗೊಂದಲ)

**ಶ್ರೀ ಎಸ್.ಎ.ರಾಮದಾಸ್:-**ಕೇಂದ್ರದ ಗೃಹ ಸಚಿವರು ಅದರ ಪ್ರತಿಯನ್ನು ಕೆ.ಪಿ.ಸಿ.ಸಿ. ಕಚೇರಿಗೆ ಕಳುಹಿಸಿದ್ದರೆ ಅದರ ಪ್ರತಿಯನ್ನು ಕೊಡಿ.

**ಶ್ರೀಮತಿ ಭಾರತಿ ಶೆಟ್ಟಿ:-** ಅದು ಗೌಪ್ಯ ಇದೆ ಸೀಲ್ ಮಾಡಿ ಕಳುಹಿಸಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಹಾಗಿದ್ದರೆ ಇವೆಲ್ಲವೂ ನಿಮಗೆ ಹೇಗೆ ಗೊತ್ತಾಯಿತು?

**ಸಭಾಪತಿಯವರು:**ತಾವು ಬೇಗನೆ ಮುಗಿಸಿ ಬಿಡಿ. ನಂತರ ಈ ನಿಲುವಳಿ ಸೂಚನೆಗೆ ಅವಕಾಶ ಕೊಡಬೇಕೋ ಬೇಡವೋ ಎಂಬುದರ ಬಗ್ಗೆ ತೀರ್ಮಾನ ಮಾಡೋಣ.

**ಶ್ರೀ ವಿ. ಆರ್.ಸುದರ್ಶನ್ :–**ಬಹಳ ಮುಖ್ಯವಾಗಿ ನಿಲುವಳಿ ಸೂಚನೆಯಲ್ಲಿ ನಾವು ಏನು ಪ್ರಸ್ತಾಪ ಮಾಡಿದ್ದೇವೆ ಎಂದರೆ, ಸುಪ್ರೀಂಕೋರ್ಟ್‌ನ ರೂಲಿಂಗ್‌ನಲ್ಲಿನ 10ನೇ ಶೆಡ್ಯೂಲ್ ಬಗ್ಗೆ ನಾವು ಈ ಸದನದಲ್ಲಿ ಚರ್ಚೆ ಮಾಡಬಾರದಾ? ಈ 10ನೇ ಶೆಡ್ಯೂಲ್ ಬಗ್ಗೆ 1985ರಲ್ಲಿ

ಶ್ರೀ ರಾಜೀವ್ ಗಾಂಧಿಯವರು ತಂದರು.ನಂತರ ಅಧಿಕಾರಕ್ಕೆ ಬಂದ ಮಾನ್ಯ ವಾಜಪೇಯಿಯವರ ಸರ್ಕಾರದಿಂದ ಅದಕ್ಕೆ ಅಮೆಂಡ್‌ಮೆಂಟ್ ತರುವ ಪ್ರಯತ್ನ ಕೂಡ ಆಗಿದೆ. ಹಾಗಿದ್ದರೆ ಆ ಕಾನೂನು ಅಲ್ಲಿಯೇ ನಿಂತು ಹೋಗಬೇಕಾ? ಅದಕ್ಕೆ ಅಗತ್ಯವಿರುವ ಅಮೆಂಡ್‌ಮೆಂಟ್ ಬಗ್ಗೆ ದೀರ್ಘವಾಗಿ ಚರ್ಚೆ ಮಾಡುವ ಅಗತ್ಯ ಇಲ್ಲವೇ?ಈ ಎಲ್ಲಾ ಕಾರಣದಿಂದಾಗಿ ಆ 10ನೇ ಶೆಡ್ಯೂಲ್ ಬಗ್ಗೆ ವಿಶೇಷವಾದ ರೀತಿಯಲ್ಲಿ ಚರ್ಚೆ ಮಾಡಬೇಕಾಗುತ್ತದೆ. ಅದನ್ನೂ ಕೂಡ ಸುಪ್ರೀಂ ಕೋರ್ಟಿನ ರೂಲಿಂಗ್‌ನಲ್ಲಿ ಹೇಳಿರುವ ಕಾರಣಕ್ಕಾಗಿ ನಾವು ಕಳುಹಿಸಿರುವಂತಹ ಈ ಒಂದು ನಿಲುವಳಿ ಸೂಚನೆಯನ್ನು ಚರ್ಚೆಗೆ ತೆಗೆದುಕೊಳ್ಳುವುದರಲ್ಲಿ ಅರ್ಥ ಇದೆ.ತಾವು ಈ ಕುರಿತು ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟಿದ್ದೇ ಆದರೆ ಈ ವಿಚಾರದ ಬಗ್ಗೆ ದೀರ್ಘವಾಗಿ ಹೆಚ್ಚಿನ ರೀತಿಯಲ್ಲಿ ಬೆಳಕು ಚೆಲ್ಲುವುದಕ್ಕೆ ಸಾಧ್ಯವಾಗುತ್ತದೆ. ಇದರ ಬಗ್ಗೆ ಪ್ರಿಸೈಡಿಂಗ್ ಆಫೀಸರ್ಸ್ ಮೇಲೆ ಬಹಳ ದೊಡ್ಡ ಜವಾಬ್ದಾರಿಗಳು ಇವೆ. ದಯಮಾಡಿ ತಾವು ಈ ವಿಷಯದ ಬಗ್ಗೆ ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕಾಗುತ್ತದೆ. ಒಂದು ಕಡೆ 10ನೇ ಶೆಡ್ಯೂಲ್ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ.ಮತ್ತೊಂದು ಕಡೆಯಲ್ಲಿ ಸರ್ಕಾರದ ವೈಫಲ್ಯಗಳ ಬಗ್ಗೆ ಮತ್ತು ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಬರೆದಿರುವ ಪತ್ರದ ಹಿನ್ನಲೆಯಲ್ಲಿ ನಾವು ಚರ್ಚೆ ಮಾಡಬೇಕಾಗುತ್ತದೆ.ಅದೂ ಕೂಡ ನಿಲುವಳಿ ಸೂಚನೆಯ ವ್ಯಾಪ್ತಿಗೆ ಬರುತ್ತದೆ.ಭ್ರಷ್ಟಾಚಾರದ ಹಗರಣಗಳ ಬಗ್ಗೆ ಕೂಡ ನಾವು ಇಲ್ಲಿ ಚರ್ಚೆ ಮಾಡಬೇಕಾಗುತ್ತದೆ.

**ಶ್ರೀ ಎಸ್.ಎ.ರಾಮದಾಸ್:–**ಮಾನ್ಯ ಸಭಾಪತಿಯವರೇ. . . .

(ಗೊಂದಲ)

**ಸಭಾಪತಿಯವರು:–** ಸರ್ಕಾರ ಉತ್ತರವನ್ನು ಕೊಡುವಾಗ ಹೇಳಿ. ಅವರು ಅವಕಾಶವನ್ನು ಕೊಡಿ ಎಂದು ಕೇಳುತ್ತಿದ್ದಾರೆ.

**ಶ್ರೀ.ವಿ.ಆರ್.ಸುದರ್ಶನ್:**–ನಾನು ನಿಲುವಳಿ ಸೂಚನೆಗೆ ಅವಕಾಶವನ್ನು ಮಾಡಿಕೊಡಿ ಎಂದು ಕೇಳುತ್ತಿದ್ದೇನೆ. ಸರ್ಕಾರದ ವತಿಯಿಂದ ಉತ್ತರವನ್ನು ಹೇಳುವುದಕ್ಕೆ ನಿಮಗೆ ಅವಕಾಶಗಳು ಇವೆ. ಅದೇ ರೀತಿಯಲ್ಲಿ ತಮ್ಮ ಅಭಿಪ್ರಾಯಗಳನ್ನು ಹೇಳುವುದಕ್ಕೆ ತಮಗೆ ಅವಕಾಶಗಳು ಇವೆ.

**ಸಭಾಪತಿಯವರು:**– ಈಗ ಸರ್ಕಾರದವರು ಉತ್ತರವನ್ನು ಹೇಳಲಿ.

**ಶ್ರೀ ವಿ.ಆರ್.ಸುದರ್ಶನ್:**–ಈ ನಿಲುವಳಿ ಸೂಚನೆಯ ಮುಖಾಂತರ, ರಾಜ್ಯದಲ್ಲಿ ಇಷ್ಟೆಲ್ಲಾ ಅಧ:ಪತನಕ್ಕೆ ಕಾರಣವಾಗಿರುವ ಮಾನ್ಯ ಮುಖ್ಯಮಂತ್ರಿ ಗಳಾದ ಯಡಿಯೂರಪ್ಪನವರು ನೈತಿಕವಾಗಿ ಇದರ ಜವಾಬ್ದಾರಿಯನ್ನು ಹೊತ್ತು ರಾಜೀನಾಮೆಯನ್ನು ಕೊಡುವ ಮೂಲಕ ಆ ಸ್ಥಾನವನ್ನು ತ್ಯಜಿಸಿಬೇಕಾಗುತ್ತದೆ ಎಂದು ಹೇಳುವುದಕ್ಕೆ ಹೊರಟಿದ್ದೇವೆ. ಈ ಎಲ್ಲ ಕಾರಣಗಳಿಂದಾಗಿ ನಾವು ನಿಲುವಳಿ ಸೂಚನೆಯನ್ನು ಮಂಡಿಸಿದ್ದೇವೆ. ಇದರ ಬಗ್ಗೆ ದೀರ್ಘವಾಗಿ ಚರ್ಚೆ ಆಗಬೇಕಾಗುತ್ತದೆ. ಏತಕ್ಕೋಸ್ಕರವಾಗಿ ಅವರು ರಾಜೀನಾಮೆಯನ್ನು ಕೊಡಬೇಕಾಗುತ್ತದೆ ಮತ್ತು ಅವರು ಈ ರಾಜ್ಯದಲ್ಲಿ ರಾಜೀನಾಮೆಯನ್ನು ಕೊಡುವ ಸಂದರ್ಭಗಳು, ಪರಿಸ್ಥಿತಿಗಳು ಕಳೆದ ಅಕ್ಟೋಬರ್ ತಿಂಗಳಿನಿಂದ ಏನು ನಿರ್ಮಾಣವಾಗಿದೆ ಇವೆಲ್ಲದರ ಬಗ್ಗೆ ನಾವು ಇಲ್ಲಿ ಪ್ರಸ್ತಾಪ ಮಾಡಬೇಕಾಗುತ್ತದೆ. ಆದುದರಿಂದ ತಾವು ಈ ನಿಲುವಳಿ ಸೂಚನೆ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ನಾನು ಪುನ: ಪುನ: ವಿನಂತಿ ಮಾಡುತ್ತೇನೆ ಮತ್ತು ಈ ಬಗ್ಗೆ ತಮ್ಮಲ್ಲಿ ಒತ್ತಾಯವನ್ನು ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:**– ಈಗ ಸರ್ಕಾರ ಏನು ಹೇಳುತ್ತದೆ ಕೇಳೋಣ.

**ಶ್ರೀ.ವಿ.ಎಸ್.ಆಚಾರ್ಯ (ಸಭಾ ನಾಯಕರು) :**–ಮಾನ್ಯ ಸಭಾಪತಿ ಯವರೇ, ಸುಮಾರು ಒಂದೂವರೆ ಗಂಟೆ ಅವಧಿಯಲ್ಲಿ ಮಾನ್ಯ ಪ್ರತಿ ಪಕ್ಷದ ನಾಯಕರಿಂದ ಪ್ರಾರಂಭಿಸಿ ಇತರ 3–4 ಜನ ಪ್ರತಿ ಪಕ್ಷದ ಹಿರಿಯ

ನಾಯಕರು ಈ ಒಂದು ನಿಲುವಳಿ ಸೂಚನೆಯ ವಿಷಯದಲ್ಲಿ ಪ್ರಾಥಮಿಕವಾಗಿ ಪ್ರತಿಪಾದನೆಯನ್ನು ಮಾಡಿದ್ದಾರೆ. ಈ ಮಧ್ಯೆ ನಮ್ಮ ಪಕ್ಷದ ಕೆಲವು ಸದಸ್ಯರು ಕೂಡ ತಮ್ಮ ಪ್ರತಿಕ್ರಿಯೆಯನ್ನು ಕೊಟ್ಟಿದ್ದಾರೆ. ಆದರೆ ನಾನು ಮಾತ್ರ ಅವರು ಮಾತನಾಡುತ್ತಿರುವ ಮಧ್ಯೆ ಒಂದು ಚಕಾರ ಶಬ್ದವನ್ನೂ ಎತ್ತಿಲ್ಲ. ಅವರ ಮಾತುಗಳನ್ನು ಕೇಳಿದ್ದೇನೆ. ಅದೇ ರೀತಿಯಲ್ಲಿ ಸರ್ಕಾರದ ಕಡೆಯಿಂದ ಹೇಳುವ ಮಾತುಗಳಿಗೂ ಅವರು ಅವಕಾಶವನ್ನು ಮಾಡಿಕೊಡಬೇಕೆಂಬುದು ನನ್ನ ಆಶಯವಾಗಿದೆ.ಆ ದೃಷ್ಟಿಯಲ್ಲಿ ನಾನು ಮೊದಲೇ ವಿನಂತಿಯನ್ನು ಮಾಡುತ್ತಿದ್ದೇನೆ. ಅವರು ಕಳುಹಿಸಿರುವ ಆರು ಸಾಲಿನ ನಿಲುವಳಿ ಸೂಚನೆಯಲ್ಲಿ ಏನು ಇದೆ ಎಂದು ಹೇಳುತ್ತೇನೆ. ನನಗೆ ಒಂದು ವಿಷಯದಲ್ಲಿ ಸಂತೋಷವಾಗಿದೆ.ಅವರು ಕಳುಹಿಸಿರುವ ಸೂಚನೆಯ ನಾಲ್ಕನೇ ಸಾಲಿನಲ್ಲಿ "ಪ್ರಜಾಪ್ರಭುತ್ವ, ಜನಾದೇಶ, ಸಂವಿಧಾನ ಹಾಗೂ ಪ್ರಚಲಿತ ಪದ್ಧತಿಗಳು (Established procedures and norms)" ಎಂದು ಇದೆ.ಒಂದು ವಿಚಾರ ನಮಗೆಲ್ಲರಿಗೂ ಗೊತ್ತಿದೆ. ಅವರು ಪ್ರತಿನಿಧಿಸುತ್ತಿರುವ ಒಂದು ಪಕ್ಷ 125 ವರ್ಷಗಳಷ್ಟು ಇತಿಹಾಸ ಇರುವಂತಹ ಒಂದು ಪಕ್ಷವಾಗಿದೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ 64 ವರ್ಷಗಳ ಈ ಆಡಳಿತಾವಧಿಯಲ್ಲಿ ಬಹುತೇಕ ಪಾಲು ಕೇಂದ್ರ ಮತ್ತು ವಿವಿಧ ರಾಜ್ಯಗಳಲ್ಲಿ ಸರ್ಕಾರವನ್ನು ನಡೆಸಿ ಹೆಚ್ಚಿನ ಅನುಭವ ಇರುವಂತಹ ಒಂದು ಪಕ್ಷವಾಗಿದೆ. ಈಗ ಮಾತನಾಡಿದ್ದಂತಹರವರ ಪೈಕಿ ಒಬ್ಬರು ಕೇಂದ್ರದಲ್ಲಿ ಸಚಿವರಾಗಿದ್ದಂಥಹವರು ಮತ್ತು ಇಬ್ಬರು ಸಭಾಪತಿಗಳಾಗಿ ಇದ್ದವರು ಮತ್ತೊಬ್ಬರು ಇಲ್ಲಿ ಸಚಿವರಾಗಿದ್ದು ನಂತರ ಈಗ ಪ್ರತಿ ಪಕ್ಷದ ನಾಯಕಿಯಾಗಿದ್ದಾರೆ. ತುಲನಾತ್ಮಕವಾಗಿ ಹೇಳುವುದಾದರೆ ಅವರ ಪಕ್ಷಕ್ಕಿಂತ ನಮ್ಮ ಪಕ್ಷ ವಯಸ್ಸಿನಲ್ಲಿ ಸಣ್ಣ ಪಕ್ಷವಾಗಿದೆ. ಈಚೆಗೆ ನಾವು ಅಧಿಕಾರಕ್ಕೆ ಬಂದಿದ್ದೇವೆ. ಇದು ನಮ್ಮ ರಾಜ್ಯದ ಮೇಲ್ಮನೆಯಾಗಿದೆ.ತಾವು ಸಭಾಪತಿಗಳಾಗಿ ಆ ಪೀಠವನ್ನು ಅಲಂಕರಿಸಿದ್ದೀರಿ. ನಾನು ಈ ಮನೆಯ ಸಭಾನಾಯಕನ ಸ್ಥಾನದಲ್ಲಿ ಇದ್ದೇನೆ. ಇವತ್ತು ನಮಗೆ ಅವರಷ್ಟು ಅನುಭವ ಇಲ್ಲ ಎಂದು ಹೇಳುವುದನ್ನು ಒಪ್ಪಬಹುದು.ಆದರೆ ಈ ದೇಶದ ಆಡಳಿತ

ಮತ್ತು ನಮ್ಮ ಸಂವಿಧಾನ ಹಾಗೂ ನಮ್ಮ ಒಕ್ಕೂಟದ ವ್ಯವಸ್ಥೆಯ ಬಗ್ಗೆ ನಾವು ಎಂತಹ ಸಂದರ್ಭದಲ್ಲಿಯೂ ಸ್ಪಷ್ಟ ಕಲ್ಪನೆಯನ್ನು ಇಟ್ಟುಕೊಳ್ಳಬೇಕಾಗುತ್ತದೆ. ಇವತ್ತು ಇಷ್ಟು ಹಿರಿಯ ಪಕ್ಷದ ಸದಸ್ಯರಿಗೆ ಅವರಿಗಿಂತ ವಯಸ್ಸಿನಲ್ಲಿ ಮತ್ತು ಅನುಭವದಲ್ಲಿ ಕಡಿಮೆ ಇರುವ ನಾವುಗಳು ಅವರಿಗೆ ಕೆಲವು ಮಾತುಗಳನ್ನು ಹೇಳುವಂತಹ ಒಂದು ಸಂದರ್ಭವನ್ನು ಕಲ್ಪಿಸಿಕೊಂಡದ್ದು ನೋಡಿದರೆ ನನಗೆ ಅವರ ಬಗ್ಗೆ ಸ್ವಲ್ಪ ಕನಿಕರವೆನಿಸುತ್ತದೆ. ಪ್ರಜಾಪ್ರಭುತ್ವ ಸಂವಿಧಾನದಲ್ಲಿ ಪ್ರಜೆಗಳ ಒಂದು ಜನಾದೇಶಕ್ಕೆ ಬಹಳ ಮೌಲ್ಯವಿದೆ. ಒಂದು ವಿಡಂಬನೆ ಏನೆಂದರೆ, ನಿನ್ನೆ ತಾನೆ ವಿಧಾನ ಸಭೆಯಲ್ಲಿ ಬಹುಮತವನ್ನು ಸಾಬೀತು ಮಾಡಿದ್ದೇವೆ. ಯಾವ ಸಭೆಗೆ ನಮ್ಮ ಸರ್ಕಾರದ ರಚನೆಗೆ ಜವಾಬ್ದಾರಿ ಇದೆ, ಆ ಸಭೆಯಲ್ಲಿ ನಮ್ಮ ಸರ್ಕಾರಕ್ಕೆ ಬಹುಮತದ ವಿಶ್ವಾಸ ಇದೆ ಎಂದು ಸಾಬೀತು ಮಾಡಿ ತೋರಿಸಿದ್ದೇವೆ. ಆ ಬಹುಮತವನ್ನು ಸಾಬೀತುಪಡಿಸಿದ 24 ಗಂಟೆಯಲ್ಲಿಯೇ ಮೇಲ್ಮನೆಯಲ್ಲಿ ಈ ರಾಜ್ಯದ ಮುಖ್ಯಮಂತ್ರಿಗಳ ಬಗ್ಗೆ ನಮಗೆ ಅವಿಶ್ವಾಸ ಇದೆ ಎಂದು ಹೇಳುವಂತಹ ರೀತಿಯಲ್ಲಿ ಆಪಾದನೆಯನ್ನು ಮಾಡುತ್ತಿದ್ದಾರೆ. ಇವತ್ತು ಒಂದು ಒಕ್ಕೂಟದ ವ್ಯವಸ್ಥೆಯಲ್ಲಿ ನಾವು ಇದ್ದೇವೆ. ಹೆಚ್ಚೂಕಮ್ಮಿ ಸುಮಾರು ಮೂವತ್ತು ರಾಜ್ಯಗಳು, ಬೇರೆ ಬೇರೆ ಭಾಷೆಗಳು, ಬೇರೆ ಬೇರೆ ರೀತಿಯ ಪ್ರದೇಶಗಳಲ್ಲಿ ಇರತಕ್ಕಂತಹ ಜನರನ್ನು ಈ ಒಂದು ಒಕ್ಕೂಟದ ವ್ಯವಸ್ಥೆಗೆ ತರಲಾಗಿದೆ. ಹಿಂದೆ ಸುಮಾರು 500-516 ಸಂಸ್ಥಾನಗಳಲ್ಲಿ ಬ್ರಿಟಿಷರ ಆಡಳಿತ ಇದ್ದಂಥಾದ್ದನ್ನು ಒಂದು ಒಕ್ಕೂಟದ ವ್ಯವಸ್ಥೆಗೆ ತಂದು ಸಂವಿಧಾನದ ರೂಪದಲ್ಲಿ ಆ ಒಂದು ಚೌಕಟ್ಟಿಗೆ ತಂದು ಇಲ್ಲಿ ಜನರ ಆದೇಶದ ಪ್ರಕಾರ ಸರ್ಕಾರಗಳು ಇರಬೇಕೆಂಬ ಒಂದು ಆಡಳಿತ ವ್ಯವಸ್ಥೆಯನ್ನು ಒಪ್ಪಿಕೊಂಡಂತಹ ಜನರು ನಾವೇ ಆಗಿದ್ದೇವೆ. ಈ ವಿಚಾರವನ್ನು ನಾವು ಮರೆಯಬಾರದು. ಅವರೇ ಹೇಳಿದ ಹಾಗೆ 2008ರ ಚುನಾವಣೆಯಲ್ಲಿ 110 ಜನರ ಬೆಂಬಲ ನಮಗೆ ಸಿಕ್ಕಿತ್ತು.ಇತರೆ ಪಕ್ಷಗಳಿಗೆ ಅಷ್ಟು ಬಹುಮತ ಸಿಗಲಿಲ್ಲ. ನಮಗೆ ಸರ್ಕಾರ ರಚನೆಗೆ ಮೂವರ ಬೆಂಬಲ ಕಡಿಮೆ ಇತ್ತು.ಆ ಸಂದರ್ಭದಲ್ಲಿ ನಮ್ಮ ಸಹಾಯಕ್ಕೆ ಕೆಲವರು ಬಂದರು.ಅವರ

ಸಹಾಯವನ್ನು ತೆಗೆದುಕೊಂಡು ನಾವು ಸರ್ಕಾರವನ್ನು ರಚನೆ ಮಾಡಿದ್ದೆವು.ನಿಮ್ಮ ಕೇಂದ್ರದವರು ಅವರಿಗೆ (ಬಿ.ಜೆ.ಪಿ.ಗೆ) ಒಂದು ರೀತಿಯ ಜನಾದೇಶ ಇದೆ ಅವರು ಸರ್ಕಾರವನ್ನು ರಚನೆ ಮಾಡಲಿ ಎಂದು ಹೇಳಿದರು.ಆದರೆ ಅದನ್ನು ಒಪ್ಪುವುದಕ್ಕೆ from day one ನೀವು ತಯಾರು ಇರಲಿಲ್ಲ.

**ಶ್ರೀ ವೀರಣ್ಣಮತ್ತಿಕಟ್ಟಿ :** ಕಾಂಗ್ರೆಸ್‌ನವರು ಎಂದೂ ನಿಮಗೆ day one ನಿಂದ ಸರ್ಕಾರ ನಡೆಸಬೇಡಿ ಎಂದು ಹೇಳಲಿಲ್ಲ. ನೀವೇ ಕಮಲ ಆಪರೇಷನ್ ಎಂದು ಮಾಡುತ್ತಿದ್ದೀರಿ.

Dr.V.S.ACHARYA**:-** From day one were not ready to accept it.ಅದು ದಾಖಲೆಯಲ್ಲಿ ಇದೆ. ಮೊದಲ ದಿವಸದಿಂದ ನಿಮಗೆ ಜನಾದೇಶ ಎಲ್ಲಿದೆ, ಏನಿದೆ ಎಂದು ಹೀಯಾಳಿಸುವಂಥಾದ್ದು ನಡೆದಿತ್ತು.ಮತ್ತು ಜನಾದೇಶ 110 ಸ್ಥಾನಗಳಿಗೆ ಕೊಟ್ಟಿರುವಂತಾದ್ದು ಮತ್ತು ಇತರ 5-6 ಜನ ನಮಗೆ ಬೆಂಬಲವನ್ನು ಕೊಟ್ಟು ಆಡಳಿತ ನಡೆಸುವುದಕ್ಕೆ ಸಹಕಾರವನ್ನು ಕೊಟ್ಟಿರುವಂಥಾದ್ದು ಎಲ್ಲರಿಗೂ ಗೊತ್ತಿದೆ. ಆ ನಂತರ ಬೇರೆ ಬೇರೆ ಕಾರಣಗಳಿಂದ ನಡೆದಂತಹ ಚುನಾವಣೆಗಳಲ್ಲಿ. . .

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಯಾವ ಕಾರಣವೆಂದು ಹೇಳಿಬಿಡಿ. ಮಾನ್ಯ ಗೌರವಾನ್ವಿತ ಸಭಾ ನಾಯಕರು ಇದು ಯಾವ ಕಾರಣಕ್ಕೆ ಪ್ರಾರಂಭವಾಯಿತು ಎಂದು ಹೇಳಿಬಿಡಲಿ. ನಾನು ಮೂಲ ಏನು ಎಂದು ಹೇಳಿದೆ.

**ಡಾ: ವಿ.ಎಸ್. ಆಚಾರ್ಯ:-** ಮಾನ್ಯ ಸಭಾಪತಿಗಳೇ, ಅವರು ಮಾತನಾಡುವ ಸಂದರ್ಭದಲ್ಲಿ ನಾನು ಮಧ್ಯೆ ಮಾತನಾಡಲಿಲ್ಲ. ಅವರು ಆಮೇಲೆ ಹೇಳಲಿ. ಲೋಕಸಭೆಗೆ ರಾಜ್ಯದಲ್ಲಿ ನಡೆದಂತಹ ಚುನಾವಣೆಯಲ್ಲಿ ಜನರ ಒಟ್ಟಾರೆ ಅಭಿಪ್ರಾಯ ಏನು ಬಂತು ಎಂಬುದು ಎಲ್ಲರಿಗೂ ಗೊತ್ತಿದೆ.ಆ ನಂತರ ಲೋಕಸಭೆಗೆ ಆರಿಸಿ ಹೋದಂತಹವರ ಸ್ಥಾನಗಳಿಗೆ ನಡೆದಂತಹ ವಿಧಾನ ಸಭಾ ಚುನಾವಣೆಯಲ್ಲಿ ಮತ್ತು ವಿಧಾನ ಪರಿಷತ್ತಿಗೆ ನಡೆದಂತಹ

ಚುನಾವಣೆ ಇರಬಹುದು ಮತ್ತು ಬೇರೆ ಬೇರೆ ಇತರೆ ಚುನಾವಣೆಗಳು ಇರಬಹುದು ಮತ್ತು ಕಳೆದ 15 ದಿವಸಗಳು ಹಿಂದೆ ನಡೆದಂತಹ ಮೂರು ಉಪ ಚುಣಾವಣೆಗಳು ಇರಬಹುದು.ಈ ರಾಜ್ಯದ ಜನಾದೇಶ, ಈ ರಾಜ್ಯದ ಜನ ಮಿಡಿತ ಏನು ಇತ್ತು ಎಂದು ಇದನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಬೇಕಾಗುತ್ತದೆ.ಪ್ರಜಾಪ್ರಭುತ್ವದಲ್ಲಿ indicator ಅಥವಾ thermometer ಜನಪರವಾದ ಅಭಿಪ್ರಾಯ ಏನು ಇದೆ ಎಂಬುದು ಜನಾದೇಶದ ಮುಖಾಂತರ ಗೊತ್ತಾಗುತ್ತದೆ.ಲೋಕಸಭಾ ಚುನಾವಣೆಯಲ್ಲಿ 28 ಸ್ಥಾನಗಳ ಪೈಕಿ 19 ಸ್ಥಾನ ನಮ್ಮ ಪಕ್ಷಕ್ಕೆ ಬಂದಿದೆ. ಇದು ಬಹಳ ಹಿಂದೆ ಏನೂ ಅಲ್ಲ. ಮೊನ್ನೆ ನೀವು ಅಂದರೆ ಕೇಂದ್ರದಲ್ಲಿನ ಯು.ಪಿ.ಎ. ಸರ್ಕಾರ ಎರಡು ವರ್ಷ ಪೂರೈಸಿದೆ ಎಂದು ಸಂಭ್ರಮಾಚರಣೆ ಮಾಡಿದ್ದಿರಿ. ಆ ಚುನಾವಣೆಯಲ್ಲಿಯೇ 28 ಸ್ಥಾನಗಳ ಪೈಕಿ 19 ಸ್ಥಾನ ನಮ್ಮ ಪಕ್ಷಕ್ಕೆ ಬಂದಿದೆ. ಈಗಾಗಲೇ ಹೇಳಿದಂತೆ ನಡೆದಂತಹ 10–18 ಉಪ ಚುನಾವಣೆಗಳಲ್ಲಿ ಫಲಿತಾಂಶ ಯಾವ ರೀತಿ ಬಂದಿದೆ,It's a writing on the wall. ಇದನ್ನೆಲ್ಲಾ ನೋಡಿ ತಾವು ತಿಳಿದುಕೊಳ್ಳಬೇಕಾಗಿತ್ತು. ಪ್ರಜಾಪ್ರಭುತ್ವದಲ್ಲಿ ಜನ ಮತವನ್ನು ಕೊಟ್ಟರೆ ಅದನ್ನು ಮನ್ನಣೆ ಮಾಡುವುದಿಲ್ಲ. ಬಹುಮತ ಇದ್ದರೆ ಅದನ್ನು ಮನ್ನಣೆ ಮಾಡುವುದಿಲ್ಲ. ಸರ್ಕಾರ ಸಾಧನೆ ಮಾಡಿದರೆ ಅದನ್ನು ಕೂಡ ಲಕ್ಷ್ಯಕ್ಕೆ ತೆಗೆದುಕೊಳ್ಳುವುದಿಲ್ಲ. ಅಂದರೆ ಇವರು ಏನು ಮಾಡುವುದಕ್ಕೆ ಹೊರಟಿದ್ದಾರೆಂದು ತಾವು ಸ್ವಲ್ಪ ತಿಳಿದುಕೊಳ್ಳಬೇಕಾಗುತ್ತದೆ. ಹಿರಿಯ ನಾಯಕರು ಮಾತನಾಡುತ್ತ ದೇಶದ ಹಿತದೃಷ್ಟಿಯಿಂದ, ರಾಜ್ಯದ ಹಿತದೃಷ್ಟಿಯಿಂದ ಸರ್ಕಾರಗಳು ನಡೆಯಬೇಕೆಂದು ಹೇಳಿದ್ದಾರೆ. ಅದನ್ನು ನಾನು ಕೂಡ ಒಪ್ಪುತ್ತೇನೆ. ದೇಶದ ಹಿತದೃಷ್ಟಿ ಬಿಟ್ಟು, ಜನಪರವಾದಂಥ ದೃಷ್ಟಿಬಿಟ್ಟು ಇನ್ನು ಯಾವುದೇ ವಿಷಯ ಪ್ರಜಾಪ್ರಭುತ್ವದಲ್ಲಿ ಮಹತ್ವದ್ದಲ್ಲ. ಆ ಕೆಲಸವನ್ನು ನಾವು ಮಾಡಬೇಕಾಗುತ್ತದೆ.

**ಶ್ರೀಮತಿ ಮೋಟಮ್ಮ:-**ಹಿರಿಯರು ಮಾತನಾಡುತ್ತ ಜನರ ಹಿತದೃಷ್ಟಿಯಿಂದ ಸರ್ಕಾರ ಯಾವ ರೀತಿಯಿಂದ ನಡೆಯಬೇಕೆಂದು ಕೂಡ ಹೇಳಿದ್ದಾರೆ. ಅವರು ಶಾಸನಬದ್ಧವಾಗಿ ನಡೆಯಬೇಕೆಂದು ಹೇಳಿದ್ದಾರಲ್ಲವೇ?

**ಡಾ: ವಿ. ಎಸ್. ಆಚಾರ್ಯ:-** ತಾವು ಗಡಿಬಿಡಿ ಮಾಡಬೇಡಿ. ನಾನು ಆ ವಿಷಯಕ್ಕೆ ಬರುತ್ತಿದ್ದೇನೆ.

**ಶ್ರೀ ವೀರಣ್ಣಮತ್ತಿಕಟ್ಟಿ :** ಉಪಚುನಾವಣೆಗಳು ಆಗಲು ಕಾರಣವೇನೆಂಬುದನ್ನು ಕೂಡ ಹೇಳಿ. ತಾವು ಮಾತನಾಡುವಾಗ ಉಪಚುನಾವಣೆಗಳು ಆಗಲು ಕಾರಣವೇನೆಂದು ಕೂಡ ಹೇಳಬೇಕು. ಆ ಉಪಚುನಾವಣೆಗಳು ಏಕೆ ಬಂದವು ಎಂದು ಕೂಡ ತಾವು ಹೇಳಬೇಕಾಗುತ್ತದೆ. ತಾವು ಜನರ ಹಿತದೃಷ್ಟಿಯಿಂದ ಕೆಲಸವನ್ನು ಮಾಡಬೇಕೆಂದು ಹೇಳಿದ್ದೀರಿ, ಬಹಳ ಸಂತೋಷ. ಆದರೆ ಉಪಚುನಾವಣೆಗಳು ಏಕೆ ಬಂದವು ಎಂದು ಕೂಡ ತಾವು ಹೇಳಬೇಕು.ಈ ಸಮಸ್ಯೆಗಳಿಗೆ ಮೂಲ ಏನು? ಈ ಸಮಸ್ಯೆಗಳನ್ನು ಬೇರೆಯವರು ಸೃಷ್ಠಿ ಮಾಡಿದ್ದಲ್ಲ. ನೀವೇ ಸೃಷ್ಠಿ ಮಾಡಿದ್ದು ಈ ಸಮಸ್ಯೆಯ ಮೂಲ ಕೂಡ ತಾವು ಹೇಳಿ.

**ಸಭಾಪತಿಯವರು:-** ಸಭಾನಾಯಕರು ಮಾತನಾಡಲಿ.

**ಡಾ: ವಿ. ಎಸ್. ಆಚಾರ್ಯ:-**ಮಾನ್ಯ ಸಭಾಪತಿಯವರೇ, ಸನ್ನಿವೇಶಕ್ಕನುಗುಣವಾಗಿ ಪ್ರಜಾಪ್ರಭುತ್ವದಲ್ಲಿ ಎಮರ್ಜ್ ಆಗುವಂಥ ಸನ್ನಿವೇಶವನ್ನು ಎದುರಿಸಲಿಕ್ಕೆ ನಾವು ನೀವು ಕಲಿಯಬೇಕಾಗುತ್ತದೆ. ಅವರು ಇವತ್ತು ಜನರ ಎದುರು ಹೋಗಿ ಆರಿಸಿ ಬಂದಿದ್ದಾರೆಯೇ ವಿನಹ ಅವರು ಬೇರೆ ರೀತಿಯಿಂದ ಬಂದಿಲ್ಲ.

(ಗೊಂದಲ)

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೇ, ನಾವು ಆರಿಸಿ ಬಂದಿದ್ದಕ್ಕೆ ಇಲ್ಲ ಎಂದು ಹೇಳುತ್ತಿಲ್ಲ. ಈ ಚುನಾವಣೆಗಳು ಏಕೆ ಬಂದವು ಎಂದು ದಯಮಾಡಿ ಹೇಳಿ.

**ಡಾ:. ವಿ. ಎಸ್. ಆಚಾರ್ಯ:–**ಮಾನ್ಯ ಸಭಾಪತಿಯವರೇ, ನಾನು ಆಗಲೇ ಸೂಚ್ಯವಾಗಿ survival instinct ಬಗ್ಗೆ ಹೇಳಿದ್ದೇನೆ. ನಾವು ಅಧಿಕಾರಕ್ಕೆ ಬಂದ ಮೊದಲನೇ ದಿನದಿಂದ ಶ್ರೀ ಧರ್ಮಸಿಂಗ್‌ರಾದಿಯಾಗಿ, ಅವರು ಆಗ ಇನ್ನೂ ಪಾರ್ಲಿಮೆಂಟ್‌ಗೆ ಹೋಗಿರಲಿಲ್ಲ, ಅವರು ಇಲ್ಲಿದ್ದಾಗ ಈ ಸರ್ಕಾರ ನಾಲ್ಕು ದಿವಸಕ್ಕೆ ಹೋಗುತ್ತದೆ, ಎಂಟು ದಿವಸಕ್ಕೆ ಹೋಗುತ್ತದೆಂದು ಭವಿಷ್ಯ, ಅಪಶಕುನದ ಮಾತು ಹೇಳುವಂಥದ್ದಿರುವಾಗ ನಾವು ಹೇಗೆ ಕೆಲಸ ಮಾಡಬೇಕು? ಸರ್ಕಾರಕ್ಕೆ survival instinct ಎಂದು ಇರಬೇಕಾಗುತ್ತದೆ. ಯಾರಿಗಾದರು ಬದುಕುವ ಆಸೆ ಇದ್ದರೆ ನಾಳೆ ಒಳ್ಳೆಯ ಕೆಲಸ ಮಾಡಬೇಕೆಂದಿರುತ್ತದೆ.ಆ ರೀತಿಯಿಂದ ಇಂತಹ ಉಪದ್ವ್ಯಾಪಗಳು ನಮ್ಮ ಸದಸ್ಯರನ್ನು ನೀವು ಕೀಳುವಂಥದ್ದು, ನೀವು ಬೆಂಬಲ ವಾಪಸ್ ತೆಗೆದುಕೊಳ್ಳಿ ನಾವು 8 ದಿವಸದೊಳಗೆ ಈ ಸರ್ಕಾರವನ್ನು ಪದಚ್ಯುತಿ ಮಾಡುತ್ತೇವೆಂದು ಅವರ ಮೇಲೆ ಪರಿಣಾಮ ಬೀರುವ ಹಾಗೆ ಬಿಂಬಿಸಲಾಯಿತು. 7 ತಿಂಗಳು ಏಕೆ ಮನೆಗೆ ಹೋಗಿದ್ದರು ಅಂದರೆ ನಾವೇನು ಮಾಡಿದ್ದಲ್ಲ, it was your making.

(ಗೊಂದಲ)

**ಶ್ರೀಮತಿ ಮೋಟಮ್ಮ:–**ಅದನ್ನು ಯಾರು ಮಾಡಿದ್ದು? Sri Renukacharya is your Advisor. ಅದನ್ನು ನಾವು ಸೃಷ್ಟಿ ಮಾಡಿದ್ದಲ್ಲ.

(ಗೊಂದಲ)

**ಶ್ರೀ. ಗೋ. ಮಧುಸೂದನ್:–**ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಹೇಳುವುದರ ಬಗ್ಗೆ ನನ್ನಲ್ಲಿ ಸ್ವಲ್ಪ ಭಿನ್ನಾಭಿಪ್ರಾಯ ಇದೆ.

ಪಾಪ ಕಾಂಗ್ರೆಸ್‌ನವರ ಮೇಲೆ ಮಾನ್ಯ ಸಭಾನಾಯಕರು ಆ ರೀತಿಯ ನೇರವಾದ ಆಪಾದನೆ ಮಾಡಬಾರದು.ಅವರು ಅಮಾಯಕರಿದ್ದಾರೆ. ಅವರು ಶ್ರೀ ದೇವೇಗೌಡರ ಮಾತನ್ನು ಕೇಳಿದ್ದಾರೆಯೇ ವಿನಹ ಸ್ವಂತ ಬುದ್ಧಿಯನ್ನು ಉಪಯೋಗಿಸಿಲ್ಲ. ಆದ್ದರಿಂದ ಅವರು ಅಪರಾಧಿಗಳಲ್ಲ.

(ಗೊಂದಲ)

**ಶ್ರೀ ವೀರಣ್ಣಮತ್ತೀಕಟ್ಟಿ:-** ಮಾನ್ಯ ಸಭಾಪತಿಯವರೇ, ನಮಗೆ ಈ ರಾಜ್ಯದ ಹಿತ ಮುಖ್ಯ ಎಂದು ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು. ನಾವು ಅದಕ್ಕೋಸ್ಕರ ಬಂದು ಕುಳಿತಿದ್ದೇವೆ. ನಾವು ಯಾರ ಮಾತನ್ನು ಕೇಳಿಲ್ಲ ನಮ್ಮದೇ ಆದ ತತ್ವ, ನೀತಿ, ಬದ್ಧತೆ ಇದೆ.

**ಸಭಾಪತಿಯವರು:-**ಈಗ ಆ ಚರ್ಚೆಯನ್ನು ಅಲ್ಲಿಗೆ ಮುಕ್ತಾಯ ಮಾಡಿ. ಮಾನ್ಯ ಸಭಾನಾಯಕರು ತಮ್ಮ ಭಾಷಣವನ್ನು ಮುಂದುವರೆಸಲಿ.

**ಶ್ರೀ ವೀರಣ್ಣಮತ್ತಿಕಟ್ಟಿ :-**ಮಾನ್ಯ ಮಧುಸೂದನ್‌ರವರು ಮಾತನಾಡಿರುವುದರಿಂದ ನಾನು ಅದಕ್ಕೆ ಉತ್ತರ ಹೇಳಬೇಕಾಗುತ್ತದೆ. ಕಾಂಗ್ರೆಸ್ ಪಕ್ಷಕ್ಕೆ ತನ್ನದೇ ಆದ ನೀತಿ, ಬದ್ಧತೆ ಇದೆ.ಅದಕ್ಕೋಸ್ಕರ ನಾವು ಯಾರ ಮಾತನ್ನು ಕೇಳುವುದಿಲ್ಲ.

(ಗೊಂದಲ)

**ಶ್ರೀ ವಿ.ಆರ್.ಸುದರ್ಶನ್:-**ಮಾನ್ಯ ಸಭಾಪತಿಯವರೇ, ಮಾನ್ಯ ದೇವೇಗೌಡರು ಈ ಸದನದ ಸದಸ್ಯರಲ್ಲ. ಆದ್ದರಿಂದ ಅನಾವಶ್ಯಕವಾಗಿ ಅವರ ಹೆಸರನ್ನು ಇಲ್ಲಿ ಪ್ರಸ್ತಾಪ ಮಾಡುವುದು ಸೂಕ್ತವಲ್ಲ. ಒಂದು ರಾಜಕೀಯ ಪಕ್ಷವಾಗಿ, ಒಂದು ಶಾಸಕಾಂಗ ಪಕ್ಷವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳತಕ್ಕಂಥದ್ದು ಜೆಡಿ(ಎಸ್) ನವರಿಗೆ ಬಿಟ್ಟಂಥ ವಿಷಯ. ನಿರ್ಧಾರವನ್ನು ತೆಗೆದುಕೊಳ್ಳುವುದಕ್ಕೆ ನಮಗೂ ಕೂಡ ಒಂದು

ದೀರ್ಘವಾದಂಥ ಇತಿಹಾಸವಿದೆ, ಹಿನ್ನಲೆ ಇದೆ.ನಿರ್ಧಾರಗಳನ್ನು ತೆಗೆದು ಕೊಳ್ಳತಕ್ಕಂಥದ್ದು ನಮಗೆ ಸಂಬಂಧಪಟ್ಟಂಥ ವಿಷಯ. ಮಾನ್ಯ ಸಭಾನಾಯಕರು ತಾವು ಒಂದು ವಿಷಯವನ್ನು ಹೇಳಬೇಕು. ಈ ರಾಜ್ಯದಲ್ಲಿ 21 ಉಪಚುನಾವಣೆಗಳಾಗಿವೆ, ಅವು ಯಾರ ತೆವಲಿಗೋಸ್ಕರ ಆಗಿವೆ ಎಂದು ತಾವು ಹೇಳಿ?

(ಗೊಂದಲ)

**ಶ್ರೀ. ಗಣೇಶ್ ಕಾರ್ಣಿಕ್:-**ಮಾನ್ಯ ಸಭಾಪತಿಯವರೇ, ಆ ಪದ ಕಡತಕ್ಕೆ ಹೋಗಬಾರದು. ದಯವಿಟ್ಟು ಅದನ್ನು ತೆಗೆಸಿ.

(ಗೊಂದಲ)

**ಸಭಾಪತಿಯವರು:-** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಈ ಸರ್ಕಾರ ಬಂದ ದಿನದಿಂದ ಈ ಸರ್ಕಾರವನ್ನು ಉರುಳಿಸಲೇಬೇಕೆಂದು ಹೇಳುತ್ತಿದ್ದಾರೆ.

(ಗೊಂದಲ)

**ಸಭಾಪತಿಯವರು:-** ಈಗ ಸಭಾನಾಯಕರು ಮಾತನಾಡಲಿ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

**ಶ್ರೀ.ವಿ.ಎಸ್.ಆಚಾರ್ಯ:-**ಮಾನ್ಯ ಸಭಾಪತಿಯವರೇ, insinuation ಎಂದು ಒಂದು ಶಬ್ದ ಇದೆ. ಕೆದಕುತ್ತಾ ಹೋಗುವಂಥದ್ದು.ಅದನ್ನು ಮಾಡಲಿಕ್ಕೆ ನಾನು ಹೋಗಲಿಲ್ಲ. ಏಕೆಂದರೆ ಅದನ್ನು ಮಾಡಿದರೆ ನಾನು ನಿಮ್ಮೆಲ್ಲಾ ಚರಿತ್ರೆ ಹೇಳಬೇಕಾಗುತ್ತದೆ.

(ಗೊಂದಲ)

**ಶ್ರೀ ವೀರಣ್ಣಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೇ, ಸಭಾನಾಯಕರು ಹೇಳಿರುವುದನ್ನು ನಾನು ಒಪ್ಪುತ್ತೇನೆ. ಐದು ದಿವಸಗಳ ಕಾಲ ಇದನ್ನೇ ಚರ್ಚೆ ಮಾಡೋಣ. ಐದು ದಿವಸಗಳ ಕಾಲ ಎಲ್ಲರ ಚರಿತ್ರೆ ಬಗ್ಗೆ ಚಿಂತನೆಯಾಗಲಿ. ಮಾನ್ಯ ಸಭಾನಾಯಕರ ಚರಿತ್ರೆ ಸರಳ ಇರಬೇಕು, ಆದರೆ ಉಳಿದವರದ್ದು?

(ಗೊಂದಲ)

**ಡಾ: ವಿ.ಎಸ್.ಆಚಾರ್ಯ:–** ಮಾನ್ಯ ಸಭಾಪತಿಯವರೇ, ಚುನಾವಣೆಗಳು ಪದೇ ಪದೇ ಏಕೆ ಬಂತು ಎಂದು ಹೇಳುವಂಥದ್ದು ಇಡೀ ರಾಜ್ಯದ ಜನತೆಗೆ ಗೊತ್ತು. ರಾಜ್ಯದ ಜನತೆಯ ಮುಂದೆ ಯಾವುದನ್ನು ಮುಚ್ಚಿಡಲಿಲ್ಲ. ಚುನಾವಣೆ ಜಗಜ್ಜಾಹೀರಾಗಿ ಬರುತ್ತದೆ. ಪ್ರಜಾಪ್ರಭುತ್ವದಲ್ಲಿ ಚುನಾವಣೆ ಬಂದಾಗ ಅದನ್ನು ಎದುರಿಸಬೇಕು. ಸಾಧ್ಯವಿದ್ದರೆ ಜನರ ಬೆಂಬಲ ಪಡೆದು ಗೆಲ್ಲಬೇಕು.ಮೊನ್ನೆ ಮೂರು ಚುನಾವಣೆ ಬಂದಾಗ ನೀವು ನಿಲ್ಲದೆ ಓಡಿ ಹೋಗಲಿಲ್ಲ, ನೀವು ಚುನಾವಣೆಗೆ ಸ್ಪರ್ಧಿಸಿದ್ದೀರಿ, ಆದರೆ ಎರಡು ಕಡೆ ನಿಮ್ಮ ಠೇವಣಿ ಹೋಯಿತು.

**ಸಭಾಪತಿಯವರು:–** ತಪ್ಪು ಮಾಹಿತಿ ಹೋಗುವುದು ಬೇಡ. ಒಂದೇ ಕಡೆ ಠೇವಣಿ ಹೋಗಿದೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ನಾವು ನಿಮ್ಮನ್ನು ಸೋಲಿಸಲೇಬೇಕೆಂದಿದ್ದರೆ ನಾವು ಅವರ ಜೊತೆ ಕೈ ಜೋಡಿಸುತ್ತಿದ್ದೆವು.

**ಡಾ: ವಿ.ಎಸ್.ಆಚಾರ್ಯ:–**ಅಲ್ಲಿ ಸೋಲಿಸುವುದಿಲ್ಲ, ಇಲ್ಲಿ ಬಹುಮತ ಇರುವ ಸರ್ಕಾರ..

**ಶ್ರೀಮತಿ ಮೋಟಮ್ಮ:–**ಮಾನ್ಯ ಸಭಾಪತಿಯವರೇ, ಒಂದೇ ಒಂದು ನಿಮಿಷ ಅವಕಾಶ ಕೊಡಿ, ಅವರು ಚುನಾವಣೆಯ ಬಗ್ಗೆ ಹೇಳಿದ್ದಾರೆ.

ಆದ್ದರಿಂದ ನಾನು ಒಂದು ವಿಷಯ ಹೇಳುತ್ತೇನೆ. ಬೇರೆ ಏನೂ ಹೇಳುವುದಕ್ಕೆ ಹೋಗುವುದಿಲ್ಲ.

**ಸಭಾಪತಿಯವರು:–** ಈಗ ಚುನಾವಣೆ ಬಗ್ಗೆ ಚರ್ಚೆ ಬೇಡ.

**ಶ್ರೀ. ಸಿ. ಸಿ. ಪಾಟೀಲ್ :–**ಮಾನ್ಯ ಸಭಾಪತಿಯವರೇ, ನಮ್ಮನ್ನು ಸೋಲಿಸಲೇಬೇಕೆಂದರೆ ಅವರೊಂದಿಗೆ ಕೈ ಜೋಡಿಸುತ್ತಿದ್ದರೆಂದು ಹೇಳಿದ್ದಾರೆ. ಇನ್ನು ಹತ್ತು–ಹನ್ನೆರಡು ವರ್ಷ ನಮ್ಮನ್ನು ಸೋಲಿಸುವ ಮನಸ್ಸು ಅವರು ಮಾಡುವುದಿಲ್ಲವೆನ್ನುವ ವಿಶ್ವಾಸ ನನಗಿದೆ.

**ಶ್ರೀಮತಿ ಮೋಟಮ್ಮ:–**ನಾವು ಠೇವಣಿ ಕಳೆದುಕೊಂಡಿದ್ದೇವೆಂದು ಹೇಳಿದ್ದಾರಲ್ಲ. ಅದಕ್ಕೆ ಕಾರಣ ಇವರು ಚುನಾವಣೆಯಲ್ಲಿ ವ್ಯಾಪಾರಕ್ಕೆ ನಿಂತರೆ ಏನು ಮಾಡುವುದು? ಆ ಬಿಡ್ಡಿಂಗ್ ನಮ್ಮ ಕೈಯಲ್ಲಿ ಮಾಡುವುದಕ್ಕೆ ಆಗಲಿಲ್ಲ.

**ಡಾ: ವಿ. ಎಸ್. ಆಚಾರ್ಯ:–**ಮಾನ್ಯ ಸಭಾಪತಿಯವರೇ, ಚುನಾವಣೆ ಬಂದಾಗ ಚುನಾವಣೆಯ ಫಲಿತಾಂಶ ನೋಡಿಕೊಂಡು graceful ಆಗಿ ಇರುವಂಥದ್ದನ್ನು ಕಲಿಯಬೇಕು. ಚುನಾವಣೆಯ ಫಲಿತಾಂಶದ ಬಗ್ಗೆ ಒಂದು ಐಬು ಕಟ್ಟಿ ಮಾತನಾಡುವುದು ಹೇಡಿಗಳು ಮಾಡುವಂಥ ಕೆಲಸ. ನಾನು ಹಿಂದೆ ಕೂಡ ಅದನ್ನು ಹೇಳಿದ್ದೆ.ಜನ ಓಟು ಕೊಟ್ಟಿದ್ದಕ್ಕೆ ತಾವು ಮೊದಲು ಗೌರವ ಕೊಡುವುದಕ್ಕೆ ಕಲಿಯಿರಿ. ಜನರಿಗೆ ಕೊಡುವಂಥ ಗೌರವ ಕೊಡಿ. ಇಲ್ಲದಿದ್ದರೆ ಚುನಾವಣೆಯ ಮೇಲೆ ನಮಗೆ ವಿಶ್ವಾಸ ಇಲ್ಲವೆಂದು ಹೇಳಿ.

**ಶ್ರೀ ದಯಾನಂದ:–**ಆರು ಕೋಟಿ ಜನರ ಒಟ್ಟಿಗೆ ಅಭಿಪ್ರಾಯ ಕೇಳಿ. ಆಮೇಲೆ ಅಭಿಪ್ರಾಯದ ಬಗ್ಗೆ ತೀರ್ಮಾನ ಮಾಡೋಣ.ಒಬ್ಬೊಬ್ಬರನ್ನೆ ಕುಸ್ತಿಗೆ ಕರೆಯುವುದು ಅಲ್ಲ.

**ಶ್ರೀಮತಿ ಮೋಟಮ್ಮ:–**ಮಾನ್ಯ ಸಭಾಪತಿಯವರೇ, ತಮಿಳುನಾಡಿನಲ್ಲಿ ಚುನಾವಣೆಯಾಗಿದೆ. ಅಲ್ಲಿ ಬಿ.ಜೆ.ಪಿ.ಯವರು ಎಷ್ಟು ಸೀಟ್‌ಗಳನ್ನು ಗೆದ್ದಿದ್ದಾರೆ.70 ಸೀಟ್‌ಗಳನ್ನು ಹಾಕಿ ಕೇವಲ 13 ಸೀಟ್‌ಗಳನ್ನು ಗೆದ್ದಿದ್ದಾರೆ.ಅಲ್ಲಿ ನೀವು ಏಕೆ ಗೆಲ್ಲಲಿಲ್ಲ.

**ಡಾ: ವಿ.ಎಸ್.ಆಚಾರ್ಯ:-**ನಾವು ಅಲ್ಲಿ ಗೆಲ್ಲಲಿಲ್ಲ ಎನ್ನುವುದನ್ನು ನಾವು ಒಪ್ಪುತ್ತೇವೆ.

(ಗೊಂದಲ)

**ಸಭಾಪತಿಯವರು:-** ಈಗ ಇಲ್ಲಿ ಆ ಚರ್ಚೆ ಬೇಡ.

**ಶ್ರೀ ಆರ್.ವಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಈಗ ಆಗಿರುವಂಥ ಚುನಾವಣೆಗಳಲ್ಲಿ ಅವರ ಅಭ್ಯರ್ಥಿಗಳಾಗಿರುವಂಥವರು ಕೇವಲ ಇಬ್ಬರು. ಇಬ್ಬರೂ ಸೋತಿದ್ದಾರೆ. ಎಲ್ಲಾ ಗೆದ್ದಿರತಕ್ಕಂಥವರು ನಮ್ಮ ಪಕ್ಷದವರು. ಬೇರೆ ಪಕ್ಷದವರು. ಅವರು ನಿಂತಿರುವವರು ಅಂದರೆ ಒಬ್ಬರು ಗುಲಬರ್ಗಾದಲ್ಲಿ, ಒಬ್ಬರು ತುರುವೇಕೆರೆಯಲ್ಲಿ ಎರಡೂ ಅಭ್ಯರ್ಥಿಗಳು ಚುನಾವಣೆಯನ್ನು ಸೋತಿದ್ದಾರೆ. ಗೆದ್ದಿರುವಂಥದ್ದು ಕೂಡ ಯಾವ ರೀತಿ ಗೆದ್ದಿದ್ದಾರೆಂದು ಆತ್ಮಾವಲೋಕನ ಮಾಡಿಕೊಳ್ಳಬೇಕು.

**ಡಾ: ವಿ. ಎಸ್.ಆಚಾರ್ಯ:-**ಮಾನ್ಯ ಸಭಾಪತಿಯವರೆ, ನನ್ನ ವಿಷಯ ಇಷ್ಟೆ, ನೀವು ಇವತ್ತು ಮಾತನಾಡುವಾಗ ಪ್ರಜಾಪ್ರಭುತ್ವದ ಉಲ್ಲೇಖ ಮಾಡಿದ್ದೀರಿ. ಸಂವಿಧಾನದ ಉಲ್ಲೇಖ ಮಾಡಿದ್ದೀರಿ. ಜನಾದೇಶದ ಉಲ್ಲೇಖ ಕೂಡ ಮಾಡಿದ್ದೀರಿ. ಒಕ್ಕೂಟ ವ್ಯವಸ್ಥೆಯ ಬಗ್ಗೆ ಕೂಡ ನಾವು ಮಾತನಾಡಬೇಕಾಗುತ್ತದೆ. ಇವತ್ತು ಬಹುಮತ ಇದ್ದ ರಾಜ್ಯ ಯಾವುದೇ ಸಂವಿಧಾನದ ಕ್ರೈಸಿಸ್ ಆಗದೆ, ಸಂವಿಧಾನದ ಕ್ರೈಸಿಸ್ ಮಾಡಿದರೆ ಇವರು ಮಾಡಿದ್ದಾರೆ 8-10 ದಿವಸ ಸರ್ಕಾರವನ್ನು ಒಂದು ರೀತಿಯಲ್ಲ ಪ್ಯಾರಲೈಸ್ ಆಗುವಂತೆ ಮಾಡಿರುವಂಥ ಕೆಲಸ ಇವರ ಮುಖಾಂತರ ಇವತ್ತು ಷಡ್ಯಂತ್ರ ನಡೆದಿದೆ. ಅದು ಬಿಟ್ಟರೆ ಸಂವಿಧಾನದ ಕ್ರೈಸಿಸ್ ಏನೂ ನಡೆದಿರಲಿಲ್ಲ. ನಾವು 2ನೇ ತಾರೀಖು ಅಧಿವೇಶನ ನಡೆಯಬೇಕೆಂದು ಕೇಳಿದರೆ ಅದಕ್ಕೆ ಬೇಕಾಂದಂಥ ಅನುಮತಿಯನ್ನು. . .

(ಗೊಂದಲ)

(12.00 ಗಂಟೆ)

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):–**ಮಾನ್ಯ ಸಭಾಪತಿಯವರೇ, ನಿಮ್ಮ ಪಕ್ಷದ ಎಲ್ಲಾ ಸದಸ್ಯರಿಗೂ double standard ಇದೆ. ನಿಮಗೆ ಗೊತ್ತಿಲ್ಲ. ಅದು ರೆಡ್ಡಿಗಳ ಪ್ರಕರಣದಲ್ಲಿರಬಹುದು, ಶ್ರೀ ರೇಣುಕಾಚಾರ್ಯರವರ ಪ್ರಕರಣ ಇರಬಹುದು. ಬೇಳೂರು ಗೋಪಾಲಕೃಷ್ಣರವರ ಪ್ರಕರಣ ಇರಬಹುದು. ಇದನ್ನು ಮೊದಲು ನೋಡಿಕೊಳ್ಳಿ.

(ಗೊಂದಲ)

**ಸಭಾಪತಿಯವರು:–**ದಯಮಾಡಿ ಸಭಾ ನಾಯಕರು ಮಾತನಾಡಲು ಬಿಡಿ.

**ಶ್ರೀ ಮನೋಹರ್ ಮಸ್ಕಿ:–** ಮಾನ್ಯ ಸಭಾಪತಿಯವರೇ, ನಿಮ್ಮ ಪಕ್ಷದ ಎಲ್ಲಾ ಸದಸ್ಯರುಗಳಿಗೆ double standard ಇದೆ ಎಂದು ಹೇಳಿದ್ದಾರೆ. ಅದು ನಿಮಗೂ ಅನ್ವಹಿಯಿಸುತ್ತದೆ.

**ಶ್ರೀಮತಿ ಮೋಟಮ್ಮ:–**ಈಗ ಆಗಿರುವಂತಹ ತೀರ್ಮಾನಗಳೆಲ್ಲವೂ ಕೂಡ double standard ಎಲ್ಲದಲ್ಲಿಯೂ ಭಿನ್ನಮತಸ್ಥರಿದ್ದಾರೆ.

**ಶ್ರೀ ಮನೋಹರ್ ಮಸ್ಕಿ:–** ಮಾನ್ಯ ವಿರೋಧ ಪಕ್ಷದ ನಾಯಕರು ನಮ್ಮ ಪಕ್ಷದ ಎಲ್ಲಾ ಸದಸ್ಯರುಗಳಿಗೂ double standard ಇದೆ ಎಂದು ಹೇಳಿದ್ದಾರೆ. ಇದರಿಂದ ನಮಗೆ ಅವಮಾನವಾಗುವುದಿಲ್ಲವೇ?ಅವರು ಯಾರಿಗೆ double standard ಇದೆ ಎಂದು ಹೇಳಬೇಕಲ್ಲವೇ?

**ಶ್ರೀಮತಿ ಮೋಟಮ್ಮ:–**ನಾನು ಮನೋಹರ್ ಮಸ್ಕಿಯವರಿಗೆ double standard ಇದೆ ಎಂದು ಹೇಳಲಿಲ್ಲ. ಯಾರು ಭಿನ್ನಮತವನ್ನು ಮಾಡಿದರು ಅವರೆಲ್ಲರಿಗೂ ಕೂಡ double standard ಇದೆ. ಯಾರು ಸರ್ಕಾರವನ್ನು ಇಕ್ಕಟ್ಟಿನಲ್ಲಿ ಸಿಕ್ಕಿಸಿದರು ಅವರೆಲ್ಲರಿಗೂ double standard ಇದೆ.

**ಶ್ರೀ ಮನೋಹರ ಮಸ್ಕಿ:–** ನಮ್ಮ ಪಕ್ಷದ ಎಲ್ಲಾ ಸದಸ್ಯರುಗಳಿಗೆ ಎಂದು ಹೇಳಿದ ಮಾತನ್ನು ವಿರೋಧ ಪಕ್ಷದ ನಾಯಕರು ವಾಪಸ್ಸು ತೆಗೆದುಕೊಳ್ಳಬೇಕು.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–**ಮಾನ್ಯ ಸಭಾಪತಿಯವರೇ, ನಮಗೆ ಮರ್ಯಾದೆ ಇಲ್ಲವೇ? ಎಲ್ಲಾ ಸದಸ್ಯರು ಎಂದು ಏಕೆ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು.

**ಶ್ರೀ ಆರ್.ವಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಅಧಿಕಾರಕ್ಕೋಸ್ಕರವಾಗಿ ಇವರು ಯಾವ stand ಬೇಕಾದರೂ ತೆಗೆದುಕೊಳ್ಳುತ್ತಾರೆ. ಒಂದು ಉದಾಹರಣೆಗೆ ಹೇಳುವುದಾದರೆ, ತಾಯಿ ಮಕ್ಕಳ ಸಂಬಂಧ ಏನಿದೆ ಅದಕ್ಕೂ ಕೂಡ ಕಳಂಕವನ್ನು ತೆಗೆದುಕೊಂಡು ಬಂದಿದ್ದಾರೆ.ಇವತ್ತು ಆ ಮಹಿಳೆ ಕೂಡ ನನ್ನ ಮಕ್ಕಳಲ್ಲವೆಂದು ಹೇಳಿದ್ದಾರೆ.ಆದರೆ ರೆಡ್ಡಿಯವರು ಸುಷ್ಮಾ ಸ್ವರಾಜ್‌ರವರನ್ನು ನಮ್ಮ ತಾಯಿ ಎಂದು ಹೇಳುತ್ತಾರೆ.ಅಂಥದ್ದರ ಬಗ್ಗೆಯೇ ಕಳಂಕವನ್ನು ಇವರು ತರುತ್ತಾರೆ.

**ಸಭಾಪತಿಯವರು:–**ಇಲ್ಲಿ ಇಂತಹ ವಿಷಯಗಳು ಪ್ರಸ್ತಾಪ ಮಾಡುವುದು ಬೇಡ. ಅದು ಅಪ್ರಸ್ತುತ.ಡಾ:ವಿ.ಎಸ್.ಆಚಾರ್ಯರವರೇ, ನೀವು ಸರ್ಕಾರದ ಪರವಾಗಿ ಕೊಡುತ್ತಿರುವಂತಹ ಉತ್ತರವನ್ನು ಮುಂದುವರೆಸಿ.

**ಡಾ:ವಿ.ಎಸ್.ಆಚಾರ್ಯ:–**ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದಕ್ಕೆ ಎದ್ದು ನಿಂತಾಗ ನಿಮ್ಮೆಲ್ಲರಲ್ಲಿ ನಾನು ವಿನಂತಿಯನ್ನು ಮಾಡಿಕೊಂಡಿದ್ದೇನೆ. ವಿರೋಧ ಪಕ್ಷದವರು ಒಂದೂವರೆ ಗಂಟೆಗಳ ಕಾಲ ಮಾತನಾಡುವಾಗ ನಾನು ಮಧ್ಯೆದಲ್ಲಿ ಮಾತನಾಡಲಿಲ್ಲ. ದಯವಿಟ್ಟು ನಾನು ಸರ್ಕಾರದ ಪರವಾಗಿ ಮಾತನಾಡುವಂಥದ್ದನ್ನು ಕೇಳುವ ಸಮಾಧಾನವನ್ನು ತೆಗೆದುಕೊಳ್ಳಬೇಕು. ಇವತ್ತು ಸಂವಿಧಾನ, ಪ್ರಜಾಪ್ರಭುತ್ವ, ಜನಾದೇಶ, ಒಕ್ಕೂಟ ವ್ಯವಸ್ಥೆ ಇರುವಲ್ಲಿ, ಯಾವುದೇ ರೀತಿಯ ಬಹುಮತಕ್ಕೆ ಚ್ಯುತಿ ಬರದೇ, ಯಾವುದೇ ಸಾಂವಿಧಾನಿಕ crisis ಅಲ್ಲಿ ಇಲ್ಲದೇ, ಯಾವುದೇ ಕಾನೂನು

ಅವ್ಯವಸ್ಥೆ ಇಲ್ಲದೇ ಒಂದು ಸರ್ಕಾರವನ್ನು ವಜಾ ಮಾಡಿ ಎಂದು ಒಂದು ಜವಾಬ್ದಾರಿಯುತವಾದಂತಹ ಪಕ್ಷ ಎಂದು ಹೇಳುವವರು ದೆಹಲಿಯಲ್ಲಿರುವ ಕೇಂದ್ರ ಸರ್ಕಾರದವರ ಹತ್ತಿರ ಹೋದರು. ಇಲ್ಲಿ ರಾಜಭವನದ ಮುಖಾಂತರ ಮಾಡಿದರಲ್ಲಾ, ಇವತ್ತು ಕೇಂದ್ರ ಸರ್ಕಾರದಲ್ಲಿದ್ದವರು ವಿವೇಚನೆಯನ್ನು ಉಪಯೋಗ ಮಾಡಿದರು, ಅವರ ಮೇಲೆ ನಮಗೆ 100ಕ್ಕೆ 100 ವಿಶ್ವಾಸ ಕೂಡ ಇತ್ತು, ಯಾವ ಒಂದು ಗಳಿಗೆಯಲ್ಲಿಯೂ ಕೂಡ ನಮ್ಮ ಸರ್ಕಾರಕ್ಕೆ ತೊಂದರೆ ಬರುತ್ತದೆಂದು ನಾವು ತಿಳಿದಿರಲಿಲ್ಲ. ಈ ಉಪದ್ವ್ಯಾಪ ನಡೆಯುವುದಿಲ್ಲ ಎಂದು ಗೊತ್ತಿತ್ತು.ಆದರೆ ಒಂದು ವೇಳೆ ಇಂತಹ ಜನರೇ ಕೇಂದ್ರ ಸರ್ಕಾರದಲ್ಲಿದ್ದು ಈ ರೀತಿಯ ಸರ್ಕಾರವನ್ನು ವಜಾ ಮಾಡಿದಿದ್ದರೆ. (ಗೊಂದಲ) ಮಾನ್ಯ ಸಭಾಪತಿಯವರೇ, ನಾನು yield ಆಗಿಲ್ಲ.

**ಶ್ರೀ ಆರ್.ವಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರು ಏನು ಮಾತನಾಡಿದರೂ ಕೂಡ ನಾವು ಕಿವಿ, ಕಣ್ಣು ಮುಚ್ಚಿಕೊಂಡು ಕುಳಿತುಕೊಳ್ಳಬೇಕೇ?

**ಡಾ:ವಿ.ಎಸ್.ಆಚಾರ್ಯ:-**ಮಾನ್ಯ ಸಭಾಪತಿಯವರೇ, ಭಾರತ ಸರ್ಕಾರ ಎಲ್ಲಾ ವಿಷಯಗಳನ್ನು ಗಮನಿಸಿ ಸರಿಯಾದ ನಿರ್ಣಯವನ್ನು ಕೊಟ್ಟಿದೆ.

**Sri V.R.SUDARSHAN**:- Mr.Chairman sir, we welcome the appreciation of Dr. V.S.Acharya about Government of India.ಅದನ್ನು ಖಂಡಿತ appreciation ಮಾಡೋಣ.

**ಡಾ:ವಿ.ಎಸ್.ಆಚಾರ್ಯ:-** ಒಂದು ವೇಳೆ ಭಾರತ ಸರ್ಕಾರ ಅದಕ್ಕೆ ವ್ಯತಿರಿಕ್ತ ತೀರ್ಮಾನವನ್ನು ತೆಗೆದುಕೊಂಡಿದ್ದರೆ, ಮಾನ್ಯ ಸಭಾಪತಿಯವರೇ, ನಾವು ಒಂದು mainstream ರಾಜ್ಯ. ನಾವು ನೀವು nationalists ರಾಷ್ಟ್ರೀಯ ವಾದಿಗಳು.ಇವತ್ತು ನಮ್ಮ ಪಾರ್ಟಿ ವಯಸ್ಸಿನಲ್ಲಿ ಸಣ್ಣದಿರಬಹುದು. ಆದರೆ incidentally. . .

**ಶ್ರೀ ಮತ್ತಿಕಟ್ಟೆವೀರಣ್ಣ:-**ಮಾನ್ಯ ಸಭಾಪತಿಯವರೇ, ಬಿಜೆಪಿ ಯನ್ನು ವಯಸ್ಸಿನಲ್ಲಿ ಸಣ್ಣದು ಎನ್ನುವುದು ಬೇಡ. ಈ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಬಿಟ್ಟರೆ ಭಾರತೀಯ ಜನತಾ ಪಕ್ಷವೇ ಇರುವುದು.

**ಡಾ:ವಿ.ಎಸ್.ಆಚಾರ್ಯ:-**ಈ ರಾಜ್ಯದಲ್ಲಿ ಪರಿಸ್ಥಿತಿ ಏನಾಗಿದೆ ಎಂದರೆ, ನೀವು ನಾವು 300 ಜನ ಸದಸ್ಯರ ಪೈಕಿ, ದೇಶಕ್ಕೋಸ್ಕರವಾಗಿ, ದೇಶದ ಸ್ವಾತಂತ್ರ್ಯಕ್ಕೋಸ್ಕರ, ಸಂವಿಧಾನಕ್ಕೋಸ್ಕರ ಜೈಲು ವಾಸವನ್ನು ಜುಲೈ 13ನೇ ತಾರೀಖಿನಿಂದ ಜನವರಿ 1972ನೇ ಇಸವಿಯವರೆಗೆ 19 ತಿಂಗಳು ಅತೀ ಹೆಚ್ಚು ಅನುಭವಿಸಿದವರು ನಾವಿಬ್ಬರು. ಹಾಗಾಗಿ ಸ್ವಲ್ಪ ನಮ್ಮ ಮಾತನ್ನು ಕೇಳಿ. ನಾವು ತ್ಯಾಗ ಮಾಡಿದಂಥವರು ಮೊನ್ನೆಯ ದಿವಸ ಕೇಂದ್ರ ಸರ್ಕಾರ ಏನಾದರು ವ್ಯತಿರಿಕ್ತ ನಿರ್ಣಯವನ್ನು ತೆಗೆದುಕೊಂಡಿದ್ದರೆ, ನಮ್ಮದು mainstream ರಾಜ್ಯ.ನಾವು ರಾಷ್ಟ್ರೀಯ ವಾದಿಗಳು. ಸಣ್ಣ ಪುಟ್ಟ ರಾಜ್ಯಗಳು periphery ಇರತಕ್ಕಂಥದ್ದು.ಬೇರೆ ರಾಜ್ಯದವರು ಏನು ಅಂದುಕೊಳ್ಳುತ್ತಿದ್ದರು?ಇದೊಂದು cabbage ಎಂದು ಹೇಳುತ್ತಿರಲಿಲ್ಲವೇ? ದೇಶದ ಮರ್ಯಾದೆ ಏನಾಗುತ್ತಿತ್ತು. ಮೊನ್ನೆಯ ದಿವಸ ನೀವುಗಳು ಏನು ಮಾಡುವುದಕ್ಕೆ ಹೊರಟಿದ್ದೀರಿ? ನಾನು ಹೇಳುತ್ತಿರವಂಥದ್ದು ಬಹುಮತ ಇರುವಂತಹ ರಾಜ್ಯವನ್ನು ಯಾವುದೇ ಸಂವಿಧಾನದ banana republic ಬರದೇ, ಯಾವುದೇ ರೀತಿಯ ತೊಂದರೆ ಇಲ್ಲದೇ ಇದ್ದಾಗ, ನೀವು ಏನಾದರು ಒಂದು (ಗೊಂದಲ) ಇಲ್ಲಿ ಚುನಾಯಿತ ಸರ್ಕಾರ, ಅದರಲ್ಲಿಯೂ ಮೊನ್ನೆಯ ಮೂರು ಕ್ಷೇತ್ರಗಳ ಮರು ಚುನಾವಣೆಯಲ್ಲಿ ಮೂರು ಸ್ಥಾನವನ್ನು ನಮ್ಮ ಪಕ್ಷ ಗೆದ್ದಿದೆ. ಗೆದ್ದಿದ್ದಕ್ಕೆ ಒಂದು ದಿವಸವಾದರೂ ಸಂತೋಷ ಪಡುವುದಕ್ಕೆ ಅವಕಾಶ ಮಾಡಿ ಕೊಟ್ಟರೇ? ನೀವು ಪಾಪಿ, ಏಕೆಂದರೆ,

(ಗೊಂದಲ)

**ಡಾ:ವಿ.ಎಸ್.ಆಚಾರ್ಯ:-**ನೀವು ಪಾಪಿಗಳು. ಈ ಮಾತನ್ನು ನಾನು ಹೇಳಿದ್ದಲ್ಲ.

(ಗೊಂದಲ)

**ಡಾ:ವಿ.ಎಸ್.ಆಚಾರ್ಯ:-**ನಾನು ಇನ್ನು ಮಾತನ್ನು ಪೂರ್ಣ ಮಾಡಿಲ್ಲ. ಹೇಳುತ್ತೇನೆ.

(ಗೊಂದಲ)

**ಡಾ:ವಿ.ಎಸ್.ಆಚಾರ್ಯ:-**ನಾನು ಉತ್ತರವನ್ನು ಕೊಡುತ್ತೇನೆ.

**ಶ್ರೀ ಮತ್ತಿಕಟ್ಟಿ ವೀರಣ್ಣ:-**ಮಾನ್ಯ ಸಭಾಪತಿಯವರೇ, ಡಾ: ವಿ.ಎಸ್. ಆಚಾರ್ಯರವರು ಈ ಮಾತನಾಡುತ್ತಾರೆಂದು ನಾವ್ಯಾರು ನಿರೀಕ್ಷೆ ಇಟ್ಟುಕೊಂಡಿರಲಿಲ್ಲ.

(ಗೊಂದಲ)

**ಸಭಾಪತಿಯವರು:-** ವಿರೋಧ ಪಕ್ಷದವರು ದಯಮಾಡಿ ಎಲ್ಲಾ ಸದಸ್ಯರುಗಳು ಕುಳಿತುಕೊಳ್ಳಬೇಕು. ಅವರ ಮನಸ್ಸಿಗೆ ಏನಾದರು ಅನ್ನಿಸಿದ್ದರೆ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ.

**ಶ್ರೀಮತಿ ಮೋಟಮ್ಮ:-**ಮಾನ್ಯ ಸಭಾಪತಿಯವರೇ, ಮಾನ್ಯ ಸಭಾ ನಾಯಕರು, ನಮ್ಮ ಪಕ್ಷ ಬಹಳ ಕೀಳು ಮಟ್ಟದ್ದು ಎಂದು ಹೇಳುತ್ತಿದ್ದಾರೆ. ಮಾನ್ಯ ಸಭಾ ನಾಯಕರು ಹಿರೀಕರಿದ್ದಾರೆ.ಆದರೆ ಅವರು ಮಾತನಾಡಿದ್ದು ಏನು?

**ಡಾ:ವಿ.ಎಸ್.ಆಚಾರ್ಯ:-**ಮಾನ್ಯ ಸಭಾಪತಿಯವರೇ, ನಾನು ಮಾತನಾಡಿದ ಯಾವುದೇ ಪದವನ್ನು ವಾಪಸ್ಸು ತೆಗೆದುಕೊಳ್ಳುವುದಿಲ್ಲ. ವಾಪಸ್ಸು ತೆಗೆದುಕೊಳ್ಳುವಂತಹ ಶಬ್ದವನ್ನು ನಾನು ಹೇಳಿಲ್ಲ.

**ಶ್ರೀಮತಿ ಮೋಟಮ್ಮ:-**ಮಾನ್ಯ ಸಭಾಪತಿಯವರೇ, ನಮ್ಮ ಪಕ್ಷಕ್ಕೆ ಯಾವ ರೀತಿಯಾಗಿ ಮರ್ಯಾದೆ ಇದೆ ಎನ್ನುವುದು ನಮಗೆ ಗೊತ್ತು.

(ಗೊಂದಲ)

**ಡಾ:ವಿ.ಎಸ್.ಆಚಾರ್ಯ:-**ಮೊನ್ನೆಯ ದಿವಸ ನಡೆದ ಮೂರು ಕ್ಷೇತ್ರಗಳ ಮರು ಚುನಾವಣೆಯಲ್ಲಿ, ಮೂರು ಕ್ಷೇತ್ರಗಳಲ್ಲಿ ನಮ್ಮ ಪಕ್ಷದ ಅಭ್ಯರ್ಥಿಗಳೇ ಬೆಳಿಗ್ಗೆ 11 ಗಂಟೆಗೆ ಚುನಾವಣೆಯಲ್ಲಿ ಜಯಶೀಲರಾದರು ಎಂದು ಘೋಷಣೆಯಾದ ಮೇಲೆ ಸಂಜೆ ನಾವು ಸಂತೋಷ ಆಚರಣೆ ಮಾಡಬೇಕೆಂದು ಇದ್ದರೆ, ಅಷ್ಟರಲ್ಲಿಯೇ ಈ ಗಂಡಾಂತರವನ್ನೆಲ್ಲಾ ತಂದು ಹಾಕಿದರೆ, ನಾವು ಇಡೀ ದಿವಸ ಸಂತೋಷ ಆಚರಣೆ ಮಾಡುವುದಕ್ಕೆ ಬಿಡಲಿಲ್ಲವೆಂದು ನಾನು ಹೇಳಿದಂತಹ ಮಾತಲ್ಲ ಆ ಶಬ್ದವನ್ನು ಯಾರು ನಮ್ಮ ಪಕ್ಷದವರಿಗೆ ಓಟು ಕೊಟ್ಟು ಗೆಲ್ಲಿಸಿದಂತಹ ಕ್ಷೇತ್ರದ ಜನಗಳು ಹೇಳಿದಂತಹ ಮಾತು.

**Sri V.R.SUDARSHAN:-**Mr.Chairman sir, I am raising a point of order.

**Dr. V. S. ACHARYA :-**What point of order? There is no point of order.

**ಸಭಾಪತಿಯವರು:-** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ ಏನು ಪಾಯಿಂಟ್ ಆಫ್ ಆರ್ಡರ್?

**ಶ್ರೀ ವಿ.ಆರ್.ಸುದರ್ಶನ್:-**ಮಾನ್ಯ ಸಭಾಪತಿಯವರೇ, ಸಭಾ ನಾಯಕರಿಗೆ ದೀರ್ಘವಾದಂತಹ ಅನುಭವ ಇದೆ. ಸಭಾ ನಾಯಕರಾಗಿ ಅವರು ಕೆಲಸ ಮಾಡುವಂತಹ ಸಂದರ್ಭದಲ್ಲಿ ಅವರು ತಮ್ಮ ಸರ್ಕಾರವನ್ನು defend ಮಾಡಿಕೊಳ್ಳುವಂತಹ ಸಂದರ್ಭದಲ್ಲಿ ಆವೇಶಪೂರಿತವಾಗಿ ಬಹಳ emotional ಆಗಿ.....

(ಗೊಂದಲ)

**ಶ್ರೀ ಎಸ್.ಎ.ರಾಮದಾಸ್(ವೈದ್ಯಕೀಯ ಶಿಕ್ಷಣ ಸಚಿವರು):-**ಮಾನ್ಯ ಸಭಾಪತಿಯವರೇ, ಮರು ಚುನಾವಣೆಯಲ್ಲಿ ನಮ್ಮ ಪಕ್ಷದವರು ಗೆದ್ದಾಗ, ಸಂತೋಷ ಆಚರಣೆಯನ್ನು ಮಾಡುವುದಕ್ಕೆ ಬಿಡಲಿಲ್ಲ ಪಾಪಿಗಳೆಂದು ಹೇಳಿದಂತಹ ಮಾತನ್ನು ಸಭಾ ನಾಯಕರು ಹೇಳಿದ್ದು ತಪ್ಪಾ?

(ಗೊಂದಲ)

**ಶ್ರೀವಿ.ಆರ್.ಸುದರ್ಶನ್:-**ಮಾನ್ಯ ಸಭಾಪತಿಯವರೇ, ಮಾನ್ಯ ಸಭಾ ನಾಯಕರು ಬಹಳ ಸಮರ್ಥರಿದ್ದಾರೆ. ಮಾನ್ಯ ಎಸ್.ಎ.ರಾಮದಾಸ್‌ರವರು ಏಕೆ ಅವರ ಪರವಾಗಿ ವಕಾಲತ್ತು ಮಾಡುತ್ತಿದ್ದಾರೆ?.

**ಶ್ರೀ ಎಸ್.ಎ.ರಾಮದಾಸ್:-** ವಕಾಲತ್ತು ಅಲ್ಲ. ಅವರು ನಮ್ಮ ನಾಯಕರು.

**ಶ್ರೀ ವಿ.ಆರ್.ಸುದರ್ಶನ್:-**ಮಾನ್ಯ ಸಭಾ ನಾಯಕರು ಸಮರ್ಥರಿದ್ದಾರೆ. ನೀವು ಏಕೆ ವಕಾಲತ್ತು ಮಾಡುತ್ತೀರಿ?

**ಶ್ರೀ ಎಸ್.ಎ.ರಾಮದಾಸ್:-** ಮಾನ್ಯ ಸಭಾಪತಿಯವರೇ, ಇವತ್ತು ನಮ್ಮ ಸಭಾ ನಾಯಕರು ಆ ಪದವನ್ನು ಉಪಯೋಗಿಸಬೇಕಾಗಿದ್ದರೆ ಅವರಿಗೆ ನೋವು ಎಷ್ಟಿದೆ ಎನ್ನುವುದನ್ನು ದಯಮಾಡಿ ಅರ್ಥ ಮಾಡಿಕೊಳ್ಳಬೇಕು. ಇವತ್ತು ಕರ್ನಾಟಕ ರಾಜ್ಯದ ಆರು ಕೋಟಿ ಜನರು ಕೊಟ್ಟಂತಹ ಒಂದು ಮಗು ನಮ್ಮ ಸರ್ಕಾರ.ಪ್ರತಿದಿವಸ ಅದರ ಕತ್ತನ್ನು ಹಿಸುಕಿ ಸಾಯಿಸುವಂತಹ ಪ್ರಯತ್ನ ಮಾಡುತ್ತಿರುವುದು ಪಾಪ ಎಂದು ಹೇಳಿದ್ದು ತಪ್ಪೇ?

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೇ, ಅದನ್ನು ನಾವು ಮಾಡುತ್ತಿಲ್ಲ. ಅವರ ಪಕ್ಷದವರೇ ಮಾಡುತ್ತಿರುವಂಥದ್ದು.

(ಗೊಂದಲ)

**ಶ್ರೀ ತೋಂಟದಾರ್ಯ:-**ಮಾನ್ಯ ಸಭಾಪತಿಯವರೇ, ಈಗ ವಿರೋಧ ಪಕ್ಷದವರು ತಾವೇ ಸೃಷ್ಟಿಸಿಕೊಂಡು ಬಲೆಯಲ್ಲಿ ಬಿದ್ದು ಮಿಲಿ ಮಿಲಿ ಎಂದು ಒದ್ದಾಡುತ್ತಿದ್ದಾರೆ.

**ಸಭಾಪತಿಯವರು:-** ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು. . .

**ಶ್ರೀ.ವಿ.ಆರ್.ಸುದರ್ಶನ್:-**ಮಾನ್ಯ ಸಭಾಪತಿಯವರೇ, . . .

**ಶ್ರೀಮತ್ತಿಕಟ್ಟಿ ವೀರಣ್ಣ:-** ನೀವು rapists, ದರೋಡೆಕೋರರು ಎಂದು ಜನ ಹೇಳುತ್ತಿದ್ದಾರೆ.

**ಶ್ರೀ ವಿ.ಆರ್.ಸುದರ್ಶನ್:-**ಮಾನ್ಯ ಸಭಾಪತಿಯವರೇ, ದಯಮಾಡಿ ತಾವು ಕಡತವನ್ನು ಪರಿಶೀಲನೆ ಮಾಡಬೇಕು. ಆ ಪದವನ್ನು ಉಪಯೋಗ ಮಾಡುವುದಕ್ಕೆ ಸದನದಲ್ಲಿ ಅವಕಾಶ ಇಲ್ಲ.ಮಾನ್ಯ ಸಭಾ ನಾಯಕರು ಆ ಪದವನ್ನು ಅವರು ಹಿಂದಕ್ಕೆ ಪಡೆದುಕೊಳ್ಳಬೇಕು.ಇಲ್ಲ. ನೀವು ಕಡತದಿಂದ ತೆಗೆದು ಹಾಕಬೇಕು. ಅವರು ಯಾವ context ನಲ್ಲಿ ಹೇಳಿದರು? ರಾಜ್ಯಪಾಲರು ಕೇಂದ್ರ ಸರ್ಕಾರಕ್ಕೆ ಆಗಿಂದಾಗ್ಗೆ ವರದಿಗಳನ್ನು ಕಳುಹಿಸುವಂಥದ್ದೇನಿದೆ ಅದೊಂದು ಸಾಮಾನ್ಯವಾದಂತಹ ಪ್ರಕ್ರಿಯೆ. ಅದು ನಿರಂತರವಾಗಿ ಎಲ್ಲ ಕಾಲದಲ್ಲಿಯೂ ಎಲ್ಲ ಸಂಧರ್ಭಗಳಲ್ಲಿಯೂ ನಡೆದುಕೊಂಡು ಹೋಗುತ್ತದೆ. ಉಪ ಚುನಾವಣೆ ಫಲಿತಾಂಶ ಬಂದ ದಿವಸ ಇಲ್ಲಿಂದ ಹೋದಂತಹ ವರದಿಯ ಹಿನ್ನೆಲೆಯಲ್ಲಿ ಅವರು ಆ ಮಾತನ್ನು ಹೇಳುತ್ತಿದ್ದಾರೆ. ಇದು ಎಷ್ಟರಮಟ್ಟಿಗೆ ಸರಿಯಾಗುತ್ತದೆ? ಸಭಾನಾಯಕರಾಗಿ ಈ ಸದನದ ಒಳಗೆ ಆ ಮಾತನ್ನು ಅವರು ಹೇಳುವುದು ಸರಿಯೇ ಇದು ಸಾರ್ವಜನಿಕ ಸಭೆಯ ವೇದಿಕೆ ಅಲ್ಲ, ಅವರು ತಮ್ಮ ಬಿಜೆಪಿ ಪಕ್ಷದ ಕಾರ್ಯಕರ್ತರ ಸಭೆಯಲ್ಲಿ ಆ ರೀತಿ ಮಾತನಾಡಿಕೊಳ್ಳುವುದಾದರೆ ಅದು ಅವರ ಹಕ್ಕು. ಅದರ ಬಗ್ಗೆ ನಾನು ಮಾತನಾಡುವುದಿಲ್ಲ. ಅವರು ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ್ದನ್ನು ನಾನು ಈ ಸದನದೊಳಗೆ ಪ್ರಶ್ನೆ ಮಾಡುತ್ತಿಲ್ಲ. ನಾನು ಅವರಿಗೆ ಕೇಳುವಂಥದ್ದೇನೆಂದರೆ ಈ ಸದನದಲ್ಲಿ ಅವರು ಹೇಳಿದಂತಹ

ಮಾತುಗಳ ಬಗ್ಗೆ ಹೇಳುವುದಾದರೆ ಇದು ನಿಜವಾಗಿಯೂ ಕೂಡ ಅವರು ವ್ಯಕ್ತಿತ್ವಕ್ಕೆ ಕೂಡ ಶೋಭೆ ತರುವುದಿಲ್ಲ. ಹಾಗಿದ್ದರೆ ನಾನು ಈ ಸರ್ಕಾರ, it's a curse to the people of the state ಎಂದು ಹೇಳಬೇಕಾಗುತ್ತದೆ. ಈ ಸರ್ಕಾರ ಈ ರಾಜ್ಯದ ಜನತೆಗೆ ಒಂದು ಶಾಪವಾಗಿ ಪರಿಣಮಿಸಿದೆ ಎನ್ನುವಂತಹ ಮಾತನ್ನು ಹೇಳಬೇಕಾಗುತ್ತದೆ. ಆದ್ದರಿಂದ,let us not go to that extent. ದಯಮಾಡಿ ಆ ರೀತಿಯ ಪದಗಳನ್ನು ಅವರು ಉಪಯೋಗ ಮಾಡುವಂತಹ ಅವಶ್ಯಕತೆ ಈ ಸಂದರ್ಭದಲ್ಲಿ ಖಂಡಿತವಾಗಿಯೂ ಇರಲಿಲ್ಲ.

(ಗೊಂದಲ)

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಸಾಮೂಹಿಕ ರಾಜೀನಾಮೆ ಕೊಟ್ಟು ಚುನಾವಣೆಗೆ ಹೋಗಲಿ, ಆ ರೀತಿ ಮಾಡಿದರೆ ಇವರಿಗೆ ಯಾವುದು ಶಾಪ ಎನ್ನುವಂತಹ ಸತ್ಯ ಗೊತ್ತಾಗುತ್ತದೆ.

(ಗೊಂದಲ)

**ಸಭಾಪತಿಯವರು:–** ಸಭಾನಾಯಕರು ಮಾತನಾಡುತ್ತಿದ್ದಾರೆ, ದಯಾಮಾಡಿ ಎಲ್ಲರೂ ಕುಳಿತುಕೊಳ್ಳಿ.

**ಡಾ:ವಿ.ಎಸ್.ಆಚಾರ್ಯ(ಸಭಾನಾಯಕರು):–**ಮಾನ್ಯ ಸಭಾಪತಿಯವರೇ, ನಾನು ಈ ಸಂದರ್ಭದಲ್ಲಿ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಇವರ ದೃಷ್ಟಿಯಿಂದ ಈ ಸರ್ಕಾರದ ಅಸ್ತಿತ್ವ ಮುಂದುವರಿಕೆಗೆ ಕಾರಣವಾಗುವಂತಹ ವಿಧಾನ ಸಭೆ ನಿನ್ನೆಯಷ್ಟೇ ಆ ವಿಶ್ವಾಸ ನಿರ್ಣಯವನ್ನು ಪಾಸ್ ಮಾಡಿದ ನಂತರ ಇವರು ಈ ರೀತಿಯ ಚರ್ಚೆಯನ್ನೇನು ಮಾಡುತ್ತಿದ್ದಾರೆ ಇದು ನನ್ನ ಪ್ರಕಾರ ಅಸಂಗತವಾದಂತಹ ಒಂದು ಚರ್ಚೆ. ಇನ್ನು ಎರಡನೆಯದಾಗಿ, ವಿರೋಧ ಪಕ್ಷದವರು ನ್ಯಾಯಾಲಯದ ತೀರ್ಪಿನ ಬಗ್ಗೆ ಬಹಳ ಉಲ್ಲೇಖ ಮಾಡುತ್ತಿದ್ದಾರೆ.

**ಶ್ರೀ ನಸೀರ್ ಅಹಮದ್:-** ನಿನ್ನೆ ತಂದಿರತಕ್ಕಂತಹ ವಿಶ್ವಾಸ ನಿರ್ಣಯದಲ್ಲಿ the Government has won with trust vote with the blessings of seven disqualified members.ಅದನ್ನು ಏಕೆ ಪ್ರಸ್ತಾವನೆ ಮಾಡುತ್ತೀರಿ? ಅವರು ಏಕೆ ನ್ಯಾಯಾಲಯಕ್ಕೆ ಹೋಗಿದ್ದರು?

**ಡಾ: ವಿ.ಎಸ್.ಆಚಾರ್ಯ:-** ಮಾನ್ಯ ಸಭಾಪತಿಯವರೇ, ಇವರು ಒಮ್ಮೆ ತಮಗೆ ಬೇಕಾದಾಗ ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಉಲ್ಲೇಖಿಸುತ್ತಾರೆ, ಅದೇ ಸರ್ವೋಚ್ಚ ನ್ಯಾಯಾಲಯ ನಮ್ಮ ಸದಸ್ಯರಿಗೆ ನೀವು ಬಿ.ಜೆ.ಪಿ ಎಂದು ಹೇಳುತ್ತೀರಿ, ವಾಪಸ್ ಬಿ.ಜೆ.ಪಿ.ಗೆ ಹೋಗಿ ಎಂದು ಹೇಳಿದಾಗ ಇವರಿಗೆ ಅದು ಬೇಡ. ಅಂದರೆ ಬಹಳ selectiveಆಗಿ ಆ ತೀರ್ಪನ್ನು ತೆಗೆದುಕೊಳ್ಳುವುದಾದರೆ ಅದರ ಬಗ್ಗೆ ನಾವು ವಿಮರ್ಶೆ ಮಾಡುವುದಕ್ಕೆ ಹೋಗುವುದಿಲ್ಲ. ಇವತ್ತು ನ್ಯಾಯಾಲಯದಲ್ಲಿ ಏನು ಸ್ಪೀಕರ್‌ರವರ ವಿವೇಚನಾತ್ಮಕ quasi-judicial authority ಶೆಡ್ಯೂಲ್ 10ರ ಪ್ರಕಾರ ಇದೆ ಅದನ್ನೆಲ್ಲಾ ಕೂಡಿಸಿಕೊಂಡು ಒಂದು ನಿರ್ಣಯವನ್ನೇನು ತೆಗೆದುಕೊಳ್ಳಲಾಗಿದೆ ಅದನ್ನು ನಮ್ಮ ರಾಜ್ಯದ ಉಚ್ಚ ನ್ಯಾಯಾಲಯ ಎತ್ತಿ ಹಿಡಿದಂತಹ ವಿಷಯ ಅವರಿಗೆ ಗೊತ್ತಿದೆ. ಅದನ್ನು ನಾವು ಯಾರೂ ಮರೆಮಾಚುವಂತಿಲ್ಲ. ಅದನ್ನು ಎತ್ತಿಹಿಡಿದ ಮೇಲೆ ಆ ಸದಸ್ಯರು ಅನರ್ಹರಾಗಿ ಒಂದಷ್ಟು ದಿವಸ ಹೊರಗಿದ್ದದ್ದುಂಟು. ಆ ರೀತಿ ಅವರು ಹೊರಗಿದ್ದದ್ದು ಕೂಡ authentic ಎಂದೇ ಹೇಳಬಹುದು. ಏಕೆಂದರೆ ಕಾನೂನು ಮತ್ತು ಆಡಳಿತ ಬೇರೆ ಬೇರೆ ಪದರಗಳಲ್ಲಿ ಕೆಲಸ ಮಾಡುತ್ತಿವೆ. ನಮ್ಮ ರಾಜ್ಯದ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ಪೀಠವೇ ಆ ತೀರ್ಮಾನವನ್ನು ಮಾಡಿರುವಂಥದ್ದು, ಇದನ್ನವರು ಮಾಡಿದ್ದಾರೆ. ಈ ರೀತಿ ನಮ್ಮ ರಾಜ್ಯದ ಉಚ್ಚ ನ್ಯಾಯಾಲಯ ಮತ್ತು ದೇಶದ ಸರ್ವೋಚ್ಚ ನ್ಯಾಯಾಲಯದ ಬಗ್ಗೆ ನಮಗೆಲ್ಲರಿಗೂ ಶ್ರದ್ಧೆ ಇದೆ. ತಾವು ಸಹ ವಕೀಲರಾಗಿ ಕೆಲಸ ಮಾಡಿದಂತಹವರು. ಇವತ್ತು ಸರ್ವೋಚ್ಚ ನ್ಯಾಯಾಲಯ ಆದೇಶ ಕೊಟ್ಟ ನಂತರ ಅದರ ಪ್ರಕಾರ ನಾವು ನಡೆದುಕೊಂಡಿದ್ದೇವೆ. ಅದರ ವಿರುದ್ಧವಾಗಿ

ನಾವು ಯಾವುದೇ ಚಕಾರ ಶಬ್ದವನ್ನು ಎತ್ತಿರುವುದಿಲ್ಲ. ಇನ್ನು ಅಲ್ಲಿ ಕೆಲವು stricture ಎಂದು ಇವರು ಹೇಳುತ್ತಾರೆ, observation ಎಂದು ಇತರ ಕಾನೂನು ಪಂಡಿತರು ಹೇಳುತ್ತಾರೆ. ದೇಶದ ಖ್ಯಾತ ವಿದ್ವಾಂಸರು ಹೇಳುತ್ತಾರೆ, ನಮ್ಮ ರಾಜ್ಯದ ಹಿಂದಿನ ಮೂರು-ನಾಲ್ಕು ಜನ Advocate General ರವರು ಅಭಿಪ್ರಾಯ ಕೊಡುತ್ತಾರೆ, ಅದು ಯಾವ ಅಭಿಪ್ರಾಯವೂ ಅಲ್ಲ. ಇವತ್ತು ಬಹುಮತ ಇದ್ದಂತಹ ಸರ್ಕಾರವನ್ನು, ಒಕ್ಕೂಟ ವ್ಯವಸ್ಥೆಯನ್ನು ತೆಗೆದರೂ ಅಡ್ಡಿ ಇಲ್ಲ, ಒಕ್ಕೂಟ ವ್ಯವಸ್ಥೆ ನಾಶವಾದರೂ ಅಡ್ಡಿ ಇಲ್ಲ. ಜನರ ವಿಶ್ವಾಸ ಹಾಳಾದರೂ ಅಡ್ಡಿ ಇಲ್ಲ ಎಂದು ಸುಮಾರು 125 ವರ್ಷದ ಇತಿಹಾಸ ಇರುವಂತಹ ಪಕ್ಷದ ಪ್ರತಿನಿಧಿಗಳಾದ ಇವರು ಹೇಳುವುದಾದರೆ ಇವತ್ತು ಮುಖ್ಯಮಂತ್ರಿಗಳ ವಿರುದ್ಧ ಇವರೇನು ಹೇಳುವುದಕ್ಕೆ ಹೊರಟಿದ್ದಾರೆ ಯಾವ ಮುಖ್ಯಮಂತ್ರಿಗಳ ಬಗ್ಗೆ ಕರ್ನಾಟಕದ ಸುಮಾರು ಮೂವತ್ತು ಸಾವಿರ ಗ್ರಾಮಗಳಲ್ಲಿನ ಜನರು ಬಿಜೆಪಿ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದ ನಂತರ ನಮ್ಮ ಬದುಕಿನ ದಿಶೆಯೇ ಬದಲಾವಣೆ ಆಯಿತು, ಗ್ರಾಮದ ಚಿತ್ರಣವೇ ಬದಲಾಯಿತು ಎಂದು ಏನು ಹೇಳುತ್ತಿದ್ದಾರೆ ಅಂತಹ ಜನರಿಗೆ ಇವರು ದ್ರೋಹ ಮಾಡುತ್ತಿದ್ದಾರೆ.

(ವಿರೋಧ ಪಕ್ಷದ ಸದಸ್ಯರು ಜೋರಾಗಿ ನಕ್ಕರು)

**ಡಾ:ವಿ.ಎಸ್.ಆಚಾರ್ಯ:-** ನೀವು ನಗುತ್ತಿದ್ದೀರಿ, ಮೊನ್ನೆ ಚುನಾವಣೆಯಲ್ಲಿ ನಿಮ್ಮ ಪಕ್ಷಕ್ಕೆ 3 ಸ್ಥಾನಗಳು ಬಂದವಲ್ಲಾ ಅವತ್ತಿನಂತೆಯೇ ಮುಂದೆ ಮತ್ತೊಂದು ದಿವಸ ಕೂಡ ಫಲಿತಾಂಶ ಬರಲಿಕ್ಕಿದೆ.

(ಗೊಂದಲ)

**ಶ್ರೀಮತಿ ಮೋಟಮ್ಮ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಚುನಾವಣೆಯ ಸಂದರ್ಭದಲ್ಲಿ ಚುನಾವಣಾ ಪ್ರಣಾಳಿಕೆ ಗಳಲ್ಲಿ ಇವರು ಗುಡಿಸಲು ರಹಿತ ರಾಜ್ಯವನ್ನು ನಿರ್ಮಾಣ ಮಾಡುವುದಾಗಿ

ತಿಳಿಸಿದ್ದರು, ಆದರೆ ಗುಡಿಸಲುಗಳು ಇನ್ನೂ ಹಾಗೆಯೇ ಇವೆ. ಆ ಜನರು ಸಂತೋಷ ಪಡುತ್ತಿದ್ದಾರೆಯೇ? ಪ್ರತಿ ಕಿಲೋಗ್ರಾಂಗೆ ಎರಡು ರೂಪಾಯಿಗಳ ದರದಲ್ಲಿ ಅಕ್ಕಿಯನ್ನು ವಿತರಿಸುವುದಾಗಿ ತಿಳಿಸಿದ್ದರು.ಆ ಜನರು ಇನ್ನೂ ಕಾಯುತ್ತಲೇ ಇದ್ದಾರೆ. ಅವರು ಸಂತೋಷವಾಗಿದ್ದಾರೆಯೇ? ನಿರುದ್ಯೋಗಿಗಳಿಗೆ ಭತ್ಯೆ ಕೊಡುವುದಾಗಿ ತಿಳಿಸಿದ್ದರು, ಅವರು ಸಂತೋಷ ಪಡುತ್ತಿದ್ದಾರೆಯೇ? ಯಾರು ಸಂತೋಷ ಪಡುತ್ತಿದ್ದಾರೆ ಹೇಳಿ ನೋಡೋಣ. ಯಾರು ಸಂತೋಷ ಪಡುತ್ತಿದ್ದಾರೆ ಎಂದರೆ, ಡಿ–ನೋಟಿಫಿಕೇಷನ್‌ನಲ್ಲಿ ಜಮೀನು ಪಡೆದವರು, ಕೈಗಾರೀಕರಣಕ್ಕೋಸ್ಕರ ನೂರಾರು ಎಕರೆ ಭೂಮಿಯನ್ನು ಪಡೆದಂತಹವರು ಸಂತೋಷ ಪಡುತ್ತಿದ್ದಾರೆಯೇ ಹೊರತು ಬಡವರು ಯಾರೂ ಸಂತೋಷ ಪಡುತ್ತಿಲ್ಲ.

**ಡಾ:ವಿ.ಎಸ್.ಆಚಾರ್ಯ:–** ಮಾನ್ಯ ಸಭಾಪತಿಯವರೇ, ಇವತ್ತು ಅದೇ ಸರ್ವೋಚ್ಚ ನ್ಯಾಯಾಲಯ, ಯಾವ ಸರ್ವೋಚ್ಚ ನ್ಯಾಯಾಯಲದ ಕೆಲವು observations ಮಾಡಿರುವುದರ ಬಗ್ಗೆ ಈಗ ನಮಗೆ ಇವರು ಹೇಳುತ್ತಿದ್ದಾರೆ ಈ ದೇಶದಲ್ಲಿ ಉಚ್ಚ ನ್ಯಾಯಾಲಯಗಳು, ಸರ್ವೋಚ್ಚ ನ್ಯಾಯಾಲಯ ಬೇರೆ ಬೇರೆ ಸಂದರ್ಭಗಳಲ್ಲಿ ಅದರ Constitution Bench ಇದ್ದರೆ ಸಂವಿಧಾನದ ಪ್ರಕಾರ ಕೆಲವು ನಿರ್ಣಯಗಳೂ ತಪ್ಪಾಗಿವೆ ಎಂದು ಹೇಳುವಂಥದ್ದು, Actನ ಪ್ರಕಾರ ತಪ್ಪಾಗಿದ್ದರೆ ತಪ್ಪಾಗಿದೆ ಎಂದು ಹೇಳುವಂಥದ್ದು ಸ್ವಾಭಾವಿಕ. ಈಗ ವಿರೋಧ ಪಕ್ಷದಲ್ಲಿರುವವರು ಹಿಂದೆ ಅಧಿಕಾರದಲ್ಲಿದ್ದಾಗ ಮಂತ್ರಿಗಳಾಗಿ ಯಾವುದಾದರೂ ಆದೇಶವನ್ನು ಹೊರಡಿಸಿದ್ದರೆ ನಮ್ಮೆಲ್ಲರಿಗೂ ಗೊತ್ತಿರುವಂತೆ, ನಾವು ಮಾಡಿದಂತಹ ಆದೇಶ ನಾಳೆ ಯಾರಾದರೊಬ್ಬ ಪ್ರಜೆ ನಾನು ಈ ಆದೇಶದಿಂದ ಬಾಧಿತನಾಗಿದ್ದೇನೆ ಎಂದು ಹೇಳುವಂತಹವನು ನ್ಯಾಯಾಲಯಕ್ಕೆ ಹೋಗಿ ಅದಕ್ಕೆ ತಡೆಯಾಜ್ಞೆಯನ್ನು ತರಬಹುದು, ಅದು ರದ್ದಾಬೇಕು ಎಂದು ಹೇಳಬಹುದು. ಆ ರೀತಿ ಮಾಡಿದ ಮಾತ್ರಕ್ಕೆ ನಾವು ಅದರ ಬಗ್ಗೆ ಅನ್ಯಥಾ ಭಾವಿಸಬೇಕೆಂದೇನೂ ಇಲ್ಲ, ಆ ಆದೇಶ ರದ್ದಾಗುತ್ತದೆ ಅಷ್ಟೇ ವಿನಃ ಆ ರೀತಿ ಆದೇಶವಾದ ಕೂಡಲೇ ಮಂತ್ರಿ ಸ್ಥಾನಕ್ಕೆ ರಾಜೀನಾಮೆ

ಕೊಡಬೇಕು ಎಂದೇನೂ ಇಲ್ಲ.ರಾಜೀನಾಮೆ ಕೊಡುವಂತಹ strictures ಅದರಲ್ಲಿ ಹಾಕಿದರೆ ಮಾತ್ರ ರಾಜೀನಾಮೆ ಕೊಟ್ಟು ಹೋಗಬೇಕಾಗುತ್ತದೆ. ಅದು ಬೇರೆ ವಿಷಯ. ಈಗಿನ ಗೌರವಾನ್ವಿತ ಪ್ರಧಾನಮಂತ್ರಿಗಳ ಬಗ್ಗೆ '2G spectrum' ನಲ್ಲಿ ಅವರ ಗಮನಕ್ಕೆ ಬಂದ ಮೇಲೂ ಸಹ ಸುಮಾರು 10 ತಿಂಗಳು ಕಳೆದರೂ ಅವರು ಏನೂ ಮಾಡಿಲ್ಲ ಎಂದು ಸರ್ವೋಚ್ಚ ನ್ಯಾಯಾಲಯ ಹೇಳಿದಾಗ ಇವರಿಗೆ ಅದೇನೂ ಕೇಳಿಸಲಿಲ್ಲವೇ?

(ಗೊಂದಲ)

**ಶ್ರೀಮತಿ ಮೋಟಮ್ಮ:-** ಶ್ರೀ ಎ.ರಾಜಾ ಅವರು ರಾಜೀನಾಮೆ ಕೊಡಲಿಲ್ಲವೇ, ಅವರ ಮೇಲಿನ ಆರೋಪ prove ಆಗಿದೆಯೇ? ಶ್ರೀಮತಿ ಕನಿಮೋಳಿಯವರು ಜೈಲಿಗೆ ಹೋಗಿದ್ದಾರೆ, ಅವರ ಮೇಲಿನ ಆರೋಪ prove ಆಗಿದೆಯೇ? ಅದು ಆಪಾದನೆ ಅಷ್ಟೆ. ಹಾಗಾದರೆ ಅದು prove ಆಗಿದೆಯೇ?

**ಡಾ:ವಿ.ಎಸ್.ಆಚಾರ್ಯ:-** ಮಾನ್ಯ ಸಭಾಪತಿಯವರೇ, ಪ್ರತಿಪಕ್ಷದ ನಾಯಕರು ಇಷ್ಟು blind ಆಗಿರಬಾರದು ನಾನು ಶ್ರೀಯುತ ಎ.ರಾಜಾ ಅವರ ಸುದ್ದಿಯನ್ನು ಪ್ರಸ್ತಾಪ ಮಾಡಲಿಲ್ಲ. ಮಾನ್ಯ ಪ್ರಧಾನಮಂತ್ರಿಯವರು 10 ತಿಂಗಳ ಕಾಲ ಆ ವಿಚಾರದ ಬಗ್ಗೆ ಅವರ ಗಮನಕ್ಕೆ ತಂದಾಗಲೂ ಏನೂ ಮಾಡಲಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದಾಗ, ಮಾನ್ಯ ಪ್ರಧಾನ ಮಂತ್ರಿಗಳು ಅದರ ಬಗ್ಗೆ ಏನೂ ಮಾಡಲಿಲ್ಲ. ಹಾಗಾಗಿ ತಮಗೆ ಬೇಕಾದ ಹಾಗೆ ನ್ಯಾಯಾಲಯದ ಆದೇಶಗಳನ್ನು ಉಲ್ಲೇಖಿಸುವುದು ಸರಿಯಲ್ಲ.

(ಗೊಂದಲ)

**ಶ್ರೀ ವೀರಣ್ಣ ಮತ್ತೀಕಟ್ಟಿ:-** ಮಾನ್ಯ ಸಭಾಪತಿಯವರೇ, ಪ್ರಧಾನ ಮಂತ್ರಿಗಳ ಬಗ್ಗೆ ಮಾನ್ಯ ಸಭಾನಯಕರು ಪ್ರಸ್ತಾಪ ಮಾಡುತ್ತಿದ್ದಾರೆ. ಪಾರ್ಲಿಮೆಂಟ್‌ನಲ್ಲಿ ಇವರ ನಾಯಕರಾಗಿ ಅರಣ್ ಜೇಟ್ಲಿಯವರು, ಶ್ರೀಮತಿ

ಸುಷ್ಮಾ ಸ್ವರಾಜ್, ಸನ್ಮಾನ್ಯ ಎಲ್.ಕೆ.ಅಡ್ವಾಣಿಯವರು ಆ ವಿಚಾರವನ್ನು ಕೇಳುತ್ತಾರೆ, ಇಲ್ಲಿ ಇವರು ಹೇಳಲಿ. CAG Report ನಿಮ್ಮ ಮೇಲಿದೆ, ಲೋಕಾಯುಕ್ತ ರಿಪೋರ್ಟ್ ಇದೆ.ಅದರ ಆಧಾರದ ಮೇಲೆ ನೀವು ಸಂಬಂಧಪಟ್ಟವರ ಮೇಲೆ ಇನ್ನೂ ಕ್ರಮ ತೆಗೆದುಕೊಂಡಿಲ್ಲ, ಇವರು ಬೇರೆಯವರ ಬಗ್ಗೆ ಮಾತನಾಡುತ್ತಾರಲ್ಲಾ, ಇವರಿಗೆ ಯಾವ ನೈತಿಕ ಹಕ್ಕಿದೆ?

**ಡಾ:ವಿ.ಎಸ್.ಆಚಾರ್ಯ:–** ಮಾನ್ಯ ಸಭಾಪತಿಯವರೇ, ನ್ಯಾಯಾಲಯದ ಆದೇಶವನ್ನು ತಮಗೆ ಬೇಕಾದಂತೆ ತೀರ್ಮಾನ ಮಾಡುವಂಥದ್ದು, ಜನಾದೇಶ ಕೊಟ್ಟರೆ...

**ಶ್ರೀ ವೀರಣ್ಣ ಮತ್ತೀಕಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಪ್ರಧಾನ ಮಂತ್ರಿಗಳ ಬಗ್ಗೆ ಮಾತನಾಡಿದ್ದಕ್ಕೆ ಸಂತೋಷ. ಆದರೆ ರಾಜ್ಯದಲ್ಲಿ ನಿಮ್ಮದು ಏನೇನು ನಡೆದಿದೆ ಎಂಬುದನ್ನು ಕೂಡ ಹೇಳಿ. CAG Report ಇವರ ವಿರುದ್ದವಾಗಿದೆ, ಲೋಕಾಯುಕ್ತ ವರದಿ ಕೂಡ ಇವರ ವಿರುದ್ಧವಾಗಿಯೇ ಇದೆ. ಆರು ತಿಂಗಳಲ್ಲಿ ಆ ಬಗ್ಗೆ ಕ್ರಮ ತಗೆದುಕೊಳ್ಳುತ್ತೇವೆ ಎಂದು ಹೇಳಿ ಸುಮಾರು ಎರಡು ವರ್ಷಗಳಾದರೂ ಇನ್ನೂ ಯಾರ ಮೇಲೂ ಕ್ರಮ ತೆಗೆದುಕೊಂಡಿಲ್ಲ. ಸಾವಿರಾರು ಕೋಟಿ ರೂಪಾಯಿಗಳಷ್ಟು ಬೆಲೆಬಾಳುವಂತಹ ಗಣಿ ಅದಿರನ್ನು ಸೂಟ್ ಕೇಸ್ ನಲ್ಲಿಟ್ಟುಕೊಂಡು ಹೋಗುವುದಕ್ಕಾಗುತ್ತದೆಯೇ, ಸಾವಿರಾರು ಟ್ರಕ್‌ಗಳು ಅದಿರನ್ನು ತುಂಬಿಕೊಂಡು ಹೋದವು, ಆ ವಿಚಾರದ ಬಗ್ಗೆ ಇವರು ಮಾತನಾಡುತ್ತಿಲ್ಲ. ರಿಪೋರ್ಟ್ ಬಂದಾಗ ಮತ್ತೆ ಇವರು ಹೇಳುತ್ತಾರೆ, ಇವರ ಈ ಭಂಡಧೈರ್ಯ ಮತ್ತೊಬ್ಬರಿಗಿಲ್ಲ. ಇವರು ಜನರು ಕೊಟ್ಟ ಆಶೀರ್ವಾದವನ್ನು ಭಸ್ಮಾಸುರನಂತೆ ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ, ಅದನ್ನು ನಾವು ಕೇಳುತ್ತಿದ್ದೇವೆ. ಪ್ರಧಾನ ಮಂತ್ರಿಗಳ ಬಗ್ಗೆ ಮಾತನಾಡುವ ಇವರು ರಾಜ್ಯದಲ್ಲಿ ಯಾವ ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂಬುದನ್ನು ಅವರ ಆತ್ಮಸಾಕ್ಷಿಯನ್ನು ಪ್ರಶ್ನಿಸಿಕೊಳ್ಳಲಿ ಸಂವಿಧಾನಬದ್ಧವಾಗಿ ಇವರು ಹೇಗೆ ನಡೆದುಕೊಂಡಿದ್ದಾರೆ ಎಂಬುದನ್ನು ಹೇಳಲಿ.

**ಡಾ:ವಿ.ಎಸ್.ಆಚಾರ್ಯ:–** ಮಾನ್ಯ ಸಭಾಪತಿಯವರೇ, ಇಲ್ಲಿ ಎರಡು ವಿಷಯಗಳನ್ನು ಗಮನಿಸಬೇಕಾಗುತ್ತದೆ. ನ್ಯಾಯಾಲಯಗಳ ಆದೇಶಗಳನ್ನು ತಮ್ಮ ಮೂಗಿನ ನೇರಕ್ಕೆ ಬೇಕಾದಂತೆ ತಿರುಚಿಕೊಂಡು ಹೇಳುವಂತಹ ಅವಶ್ಯಕತೆ ಇಲ್ಲ. ನ್ಯಾಯಾಲಯಗಳು ಎಲ್ಲಾ ಕಾಲದಲ್ಲಿಯೂ ಬೇರೆ ಬೇರೆ ಸರ್ಕಾರಗಳ ವಿರುದ್ಧ, ಅವರ ಆದೇಶಗಳ ವಿರುದ್ಧ ತೀರ್ಪನ್ನು ಕೊಟ್ಟಂಥದ್ದಿದೆ. ಆ ರೀತಿ ವಿರುದ್ಧ ತೀರ್ಪನ್ನು ಕೊಟ್ಟಾಗ ಸರ್ಕಾರದ ಆ ಆದೇಶ ರದ್ದಾಗುತ್ತದೆ. ಅದರ ಅರ್ಥ ಆ ಆದೇಶ ಕೊಟ್ಟಂತಹ ಮಂತ್ರಿಯೋ, ಮುಖ್ಯಮಂತ್ರಿಯೋ, ಪ್ರಧಾನ ಮಂತ್ರಿಯೋ ರಾಜೀನಾಮೆ ಕೊಟ್ಟು ಹೋಗಬೇಕು ಎಂದು ಹೇಳುವಂಥದ್ದಲ್ಲ. ಇದು ಇವರಿಗೂ ಗೊತ್ತಿದೆ, ನಮಗೂ ಗೊತ್ತಿದೆ. ಲೋಕಾಯುಕ್ತರ ಆದೇಶದ ವಿಚಾರವನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ಲೋಕಾಯುಕ್ತ ಸಂಸ್ಥೆ ಅಸ್ತಿತ್ವಕ್ಕೆ ಬಂದ ಮೇಲೆ ಲೋಕಾಯುಕ್ತರಿಗೆ ಇಲ್ಲಿಯವರೆಗೆ ಯಾರೂ ಕೊಡದೆ ಇದ್ದಂತಹ ಕೆಲವು ವಿಶೇಷವಾದ ಅಧಿಕಾರಗಳನ್ನು ನಮ್ಮ ಸರ್ಕಾರ ಕೊಟ್ಟಿದೆ. ಇದುವರೆಗೆ ಅಧಿಕಾರದಲ್ಲಿದ್ದ ಯಾವ ಸರ್ಕಾರಗಳು ಲೋಕಾಯುಕ್ತರಿಗೆ ಅಂತಹ ಅಧಿಕಾರಗಳನ್ನು ಕೊಟ್ಟಿರಲಿಲ್ಲ.

**ಶ್ರೀ ವೀರಣ್ಣ ಮತ್ತೀಕಟ್ಟಿ:–** ನೀವು ಅದನ್ನು ಕಾರ್ಯರೂಪಕ್ಕೆ ತೆಗೆದುಕೊಂಡು ಬನ್ನಿ.

**ಡಾ:ವಿ.ಎಸ್.ಆಚಾರ್ಯ:–** ನಾವು ಕಾರ್ಯರೂಪಕ್ಕೆ ತಂದಿದ್ದೇವೆ.

(ಗೊಂದಲ)

**ಶ್ರೀ ವೀರಣ್ಣ ಮತ್ತೀಕಟ್ಟಿ:–** ಮಾನ್ಯ ಸಭಾಪತಿಯವರೇ, ಈಗ ಎರಡು ವರ್ಷಗಳ ಹಿಂದೆ ಆರು ತಿಂಗಳಿನಲ್ಲಿ ಆ ಬಗ್ಗೆ ರಿಪೋರ್ಟ್ ಕೊಡುವುದಾಗಿ ಸರ್ಕಾರ ತಿಳಿಸಿತ್ತು. ದಯಮಾಡಿ ಆ ವಿಚಾರದ ಬಗ್ಗೆ ಮಾನ್ಯ ಸಭಾನಾಯಕರು ಮಾತನಾಡಬೇಕೆಂದು ಕೇಳುತ್ತಿದ್ದೇವೆಯೇ ವಿನಃ ನಾವು ಬೇರೆ ಯಾವುದನ್ನೂ ಕೇಳುತ್ತಿಲ್ಲ.

**ಡಾ॥ವಿ.ಎಸ್.ಆಚಾರ್ಯ(ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ರಾಜ್ಯದ ಜನತೆಗೆ ಈ ಐದು ವರ್ಷದಲ್ಲಿ ಸರ್ಕಾರ ಏನೇನು ಸಾಧನೆಗಳನ್ನು ಮಾಡಿದೆ, ಏನೇನು ಬದಲಾವಣೆಗಳಾಗಿದೆ ಎಂಬುದು ತಿಳಿದಿದೆ. ಅದರ ಆಧಾರದ ಮೇಲೆ ವಿಶ್ವಾಸದಿಂದ ಮುಂದಿನ ಎರಡು ವರ್ಷವನ್ನೂ ಸಹ ನಾವೇ ಆಡಳಿತವನ್ನು ನಡೆಸುತ್ತೇವೆ. ಕಳೆದ ಮೂರು ವರ್ಷದಿಂದ ಇವರು ಕೊಟ್ಟಂತಹ ಕಿರಿಕಿರಿಯ ನಡುವೆಯೇ ನಾವು ಇಷ್ಟು ಕೆಲಸವನ್ನು ಮಾಡಿದ್ದೇವೆ. ಒಂದು ವೇಳೆ ಇವರು ಸಹಕಾರ ಕೊಟ್ಟಿದ್ದರೆ ಇನ್ನೂ ಒಳ್ಳೆಯ ರೀತಿಯಲ್ಲಿ ಸರ್ಕಾರವನ್ನು ನಡೆಸುತ್ತಿದ್ದೆವು. ಹಾಗಾಗಿ ಇದಕ್ಕೆ ಅನುಮತಿಯನ್ನು ಕೊಡಬಾರದೆಂದು ತಮ್ಮಲ್ಲಿ ವಿನಂತಿಸುತ್ತೇನೆ.

**ಶ್ರೀ ವೀರಣ್ಣ ಮತ್ತೀಕಟ್ಟಿ:–** ಈ ರಾಷ್ಟ್ರದ 12 ರಾಜ್ಯಗಳಲ್ಲಿ ಕಾಂಗ್ರೆಸ್ಸೇತರ ಸರ್ಕಾರಗಳಿವೆ. ಮಧ್ಯಪ್ರದೇಶ, ಉತ್ತರ ಪ್ರದೇಶ, ಒಡಿಸ್ಸಾ, ಮತ್ತು ಬಿಹಾರಗಳಲ್ಲಿ ಬಿಜೆಪಿ ಸರ್ಕಾರ ಇದೆ. ಅವರ ಮೇಲೆ ಮಾಡದ ಆರೋಪ ನಿಮ್ಮ ಮೇಲೆ ಏಕೆ ಮಾಡುತ್ತಿದ್ದಾರೆ? ಮನುಷ್ಯರಾದವರು ತಿಳಿದುಕೊಳ್ಳಬೇಕು ಕಣ್ರೀ, ಮಾನ ಇದ್ದವರು ಇದನ್ನು ತಿಳಿದುಕೊಳ್ಳುತ್ತಾರೆ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಕೆಲವು ಸದಸ್ಯರುಗಳು ನಿಯಮ 59ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ನೀಡಬೇಕೆಂದು ನನಗೆ ಒಂದು ನೋಟಿಸನ್ನು ಕೊಟ್ಟಿದ್ದರು. ಆ ನೋಟಿಸಿನಲ್ಲಿ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿ, ನಿಯಮ 59ರ ಅಡಿಯಲ್ಲಿ ಈ ವಿಷಯವನ್ನು ಅಂದರೆ ಇತ್ತೀಚೆಗೆ ನಡೆದ ನಿರ್ದಿಷ್ಟ ವಿಷಯ ಆಗಿದ್ದು, ಸಾರ್ವಜನಿಕ ಅತ್ಯಂತ ಮಹತ್ವವುಳ್ಳದ್ದಾಗಿರುವದರಿಂದ ಈ ವಿಷಯದ ಮೇಲೆ ನಿಲುವಳಿ ಸೂಚನೆ ಅಡಿಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ನಮಗೆ ಅವಕಾಶ ಕೊಡಿ ಎಂದು ಕೇಳಿದ್ದರು.ಅದಕ್ಕೆ ಪೂರಕವಾಗಿ ಹಲವಾರು ವಿಚಾರಗಳನ್ನು ನಾಲ್ಕಾರು ಸದಸ್ಯರುಗಳು ಮಾತನಾಡಿದ್ದಾರೆ. ಆದರೆ ಈ ವಿಷಯ ನಿಲುವಳಿ ಸೂಚನೆ ಅಡಿಯಲ್ಲಿ ಪ್ರಸ್ತಾಪ ಮಾಡುವುದಕ್ಕೆ

ಬರುವುದಿಲ್ಲವೆಂದು ಸರ್ಕಾರದ ಸಚಿವರಾಗಿರವಂತಹ ಶ್ರೀ ಎಸ್.ಎ. ರಾಮದಾಸ್ ಅವರು 'Kaul & Shakdher' ಉಲ್ಲೇಖ ಮಾಡಿ ಹಲವು ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಸಭಾ ನಾಯಕರು ಸರ್ಕಾರದ ಪರವಾಗಿ ಮಾತನಾಡಿ ನಿಲುವಳಿ ಸೂಚನೆಗೆ ದಯಮಾಡಿ ಅವಕಾಶ ಕೊಡಬೇಡಿ ಎಂದು ಕೇಳಿದ್ದಾರೆ.

**ಶ್ರೀ ವಿ.ಆರ್.ಸುದರ್ಶನ್:-** ಮಾನ್ಯ ಸಭಾಪತಿಯವರೇ, ತೀರ್ಪನ್ನು ಕೊಟ್ಟಾದ ಮೇಲೆ .......

**ಸಭಾಪತಿಯವರು:-** ತೀರ್ಪನ್ನು ಕೂಡಲೇ ಬೇಕು. ನಾನು ಎರಡು ಗಂಟೆಗಳ ಕಾಲಾವಕಾಶವನ್ನು ಕೊಟ್ಟಿದ್ದೇನೆ. ನಾನೇನಾದರು ನಿಮ್ಮ ಪರವಾಗಿ ತೀರ್ಪನ್ನು ಕೊಟ್ಟರೆ ಅದಕ್ಕೂ ಸಹ ಸಮಯವನ್ನು ನಿಗದಿ ಪಡಿಸುತ್ತೇನೆ. ಈ ನಿಲುವಳಿ ಸೂಚನೆಯನ್ನು allow ಮಾಡಿದರೆ ಅದಕ್ಕೂ ಸಹ ಸಮಯವನ್ನು ನಿಗದಿ ಪಡಿಸುತ್ತೇನೆ. ಅಲೋ ಮಾಡದೆ ಇದ್ದರೆ ಇಲ್ಲ ಅಷ್ಟೆ. ಆದುದರಿಂದ ಚರ್ಚೆ ಮುಂದುವರೆಸುವುದು ಬೇಡ.

**ಶ್ರೀ ವಿ.ಆರ್.ಸುದರ್ಶನ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾ ನಾಯಕರು ಒಂದು ಗಂಭೀರವಾದಂತಹ ಮಾತನ್ನು ಅಂದರೆ ಶಬ್ದ ಪ್ರಯೋಗ ಮಾಡಿದ್ದಾರೆ. ದಯಮಾಡಿ ಅದನ್ನು ಅಷ್ಟು ಹಗುರವಾಗಿ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಯಾರು "ಪಾಪಿಗಳು", ಯಾರ "ಪಾಪದ ಕೊಡ" ತುಂಬಿದೆ ಎನ್ನುವುದನ್ನು ಜನರು ತೀರ್ಮಾನ ಮಾಡುತ್ತಾರೆ.

(ಗೊಂದಲ)

**ಸಭಾಪತಿಯವರು:-** ಈಗ ಅದರ ಬಗ್ಗೆ ಚರ್ಚೆ ಬೇಡ.

**ಶ್ರೀ ವಿ.ಆರ್.ಸುದರ್ಶನ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾ ನಾಯಕರು ಆ ಮಾತನ್ನು withdraw ಮಾಡಿಕೊಳ್ಳಬೇಕು ಇಲ್ಲವೆಂದರೆ ತಾವು ಕಡತದಿಂದ ತೆಗೆಸಿಹಾಕಬೇಕು.

(ಗೊಂದಲ)

**ಸಭಾಪತಿಯವರು:-** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಈಗ ಸಭಾ ನಾಯಕರಾಗಿರುವಂತಹ ಡಾ॥ವಿ.ಎಸ್.ಆಚಾರ್ಯರವರು ಮಾತನಾಡುತ್ತಾರೆ. ಅವರು ಒಬ್ಬ ಸಾತ್ವಿಕ ಮನುಷ್ಯರೆಂದು ನಾವೆಲ್ಲರೂ ಒಪ್ಪಿಕೊಳ್ಳುತ್ತೇವೆ. ಅವರು ಯಾವತ್ತೂ ಸಹ ಉದ್ವೇಗದಿಂದ ಮಾತನಾಡಿರುವುದಾಗಲೀ ಅಥವಾ ಕೋಪದಿಂದ ಮಾತನಾಡಿರುವುದನ್ನು ಯಾರು ನೋಡಿಲ್ಲ. ಆದರೆ ಅವರು ಸಾರ್ವಜನಿಕವಾಗಿ ಉಪಯೋಗಿಸುವಂತಹ ಒಂದು ಪದವನ್ನು ಬಳಸಿದ್ದಾರೆ. ನೋವಿನಿಂದ ಅವರು ಮಾತನಾಡಿದ್ದಾರೆ. ಆ ಪದ ತಮಗೆ ಒಪ್ಪಿಗೆ ಇಲ್ಲವೆಂದು ಹೇಳಿತ್ತಿದ್ದೀರಿ.ಆದರೆ ಅವರು ಇಲ್ಲ, ನಾನು ಹೇಳಿದ್ದು context ನಲ್ಲಿ ಅದನ್ನು ನೋಡಬೇಕು, ಅದನ್ನು ಬೇರೆ ರೀತಿ ನೋಡಬೇಡಿ ಎಂದು ಹೇಳಿದ್ದಾರೆ. ಆದರೂ ಸಹ ನಾನು ಅವರನ್ನು ನಮ್ಮ ಕೊಠಡಿಗೆ ಕರೆಸಿ ಆ ವಿಷಯದ ಬಗ್ಗೆ ಇನ್ನೊಮ್ಮೆ ಚರ್ಚೆ ಮಾಡಿ ತೀರ್ಮಾನ ಮಾಡುತ್ತೇನೆ. ಆದುದರಿಂದ ಸಧ್ಯಕ್ಕೆ ಆ ಪದ ಹಾಗೆಯೇ ಇರಲಿ.ನಾನು ಈಗ ಈ ವಿಷಯದ ಬಗ್ಗೆ ಹೇಳುವಾಗ 'Kaul & Shakdher' ಉಲ್ಲೇಖ ಆಗಿದೆ. ನಾನೂ ಸಹ ಅದರ ಬಗ್ಗೆ ನೋಡಿದ್ದೇನೆ. 'Kaul & Shakdher' ನ ಪುಸ್ತಕದಲ್ಲಿ 546ನೇ ಪುಟದಲ್ಲಿ ..........

**ಡಾ॥ವಿ.ಎಸ್.ಆಚಾರ್ಯ:-** ಮಾನ್ಯ ಸಭಾಪತಿಯವರೇ, ನಾನು ಈ ವಿಷಯದ ಬಗ್ಗೆ ಒಂದು ಸಣ್ಣ ವಿವರಣೆಯನ್ನು ಕೊಡಲೇ ಬೇಕು. ಮೂರು ಉಪ ಚುನಾವಣೆಯಲ್ಲಿ ನಮ್ಮ ಪಕ್ಷ ಗೆದ್ದಿದೆ.

(ಗೊಂದಲ)

ಮಾನ್ಯ ಸಭಾಪತಿಯವರೇ, ನಾನು ವಿವರಣೆ ಕೊಡುವುದಕ್ಕೆ ಎದ್ದು ನಿಂತಿದ್ದೇನೆ.

**ಸಭಾಪತಿಯವರು:–** ಮಾನ್ಯ ಸುದರ್ಶನರವರು ಪ್ರಸ್ತಾಪ ಮಾಡಿರುವಂತಹ ವಿಷಯಕ್ಕೆ ಮಾನ್ಯ ಸಭಾನಾಯಕರು ಸಮಜಾಯಿಷಿ ನೀಡುತ್ತಿದ್ದಾರೆ.

**ಡಾ॥ವಿ.ಎಸ್.ಆಚಾರ್ಯ:–** ನೋಡಿ ಮೂರು ಚುನಾವಣೆಗಳು ಗೆದ್ದಾಗ ಆ ಕ್ಷೇತ್ರದ ಜನ ಸಿಹಿ ಹಂಚುವುದಕ್ಕೆ ನಮ್ಮ ಬಳಿ ಬಂದರು. ಆದರೆ ಆ ಸಮಯದಲ್ಲಿ ನಾವೆಲ್ಲರೂ ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಗೆ ಬರಬಹುದು ಎಂಬ ವಿಷಯವಾಗಿ ಚಿಂತಾಕ್ರಾಂತರಾಗಿ ಕುಳಿತುಕೊಂಡಿದ್ದೆವು.

**ಶ್ರೀ ವೀರಣ್ಣ ಮತ್ತೀಕಟ್ಟಿ:–** ಮಾನ್ಯ ಸಭಾನಾಯಕರು ಏಕೆ ಸುಳ್ಳನ್ನು ಹೇಳುತ್ತಿದ್ದಾರೆ. ಏಕೆಂದರೆ ಕೇಂದ್ರ ಸರ್ಕಾರದಿಂದ ಯಾವುದೇ ರೀತಿಯಾದಂತಹ ಹಾನಿಯಾಗುವುದಿಲ್ಲವೆಂದು ಅವರಿಗೆ ತಿಳಿದಿತ್ತು.

(ಗೊಂದಲ)

**ಶ್ರೀ ವಿ.ಆರ್.ಸುದರ್ಶನ್:–** ಬೇರೆ ಪಕ್ಷದಿಂದ ಆಯ್ಕೆಯಾಗಿ ಬಂದಂತಹ ಶಾಸಕರುಗಳಿಗೆ ಆಮಿಷವನ್ನು ತೋರಿಸಿ, ನೀವು ಕರೆದುಕೊಂಡು ಹೋದಂತಹ ಪಕ್ಷಕ್ಕೆ ಚಿಂತಾಕ್ರಾಂತ ಆಗುವುದಿಲ್ಲವೇ? ನಿಮಗೆ ಮಾತ್ರ ಸಿಟ್ಟು ಬರುತ್ತದೆ, ನಿಮಗೆ ಮಾತ್ರ ನೋವಾಗುತ್ತದೆಯೇ, ಇನ್ನೊಂದು ರಾಜಕೀಯ ಪಕ್ಷಕ್ಕೆ ನೋವಾಗುತ್ತದೆ ಎಂದು ನಿಮಗೆ ತಿಳಿಯುವುದಿಲ್ಲವೇ?

**ಡಾ॥ವಿ.ಎಸ್.ಆಚಾರ್ಯ:–** ಆ ಸಮಯದಲ್ಲಿ ಚುನಾವಣೆಯಲ್ಲಿ ಗೆದ್ದು ಬಂದಂತಹ ಆ ಕ್ಷೇತ್ರದ ಜನತೆ ಬಂದು ನಮಗೆ ನೂರಕ್ಕೆ ನೂರರಷ್ಟು ಫಲಿತಾಂಶ ಬಂದಿದೆ, ಅದರ ಸಂತೋಷವನ್ನು ಅನುಭವಿಸುವುದಕ್ಕೆ ಬಿಡುತ್ತಿಲ್ಲವಲ್ಲ ಈ "ಪಾಪಿಗಳು" ಎಂದು ಅವರು ಹೇಳಿದಂತ ಮಾತುಗಳೇ ವಿನಃ ನಾನು ಹೇಳಿದಂತಹ ಮಾತುಗಳಲ್ಲ ಇದು.

**ಶ್ರೀ ವೀರಣ್ಣ ಮತ್ತೀಕಟ್ಟಿ:–** ಜನರು ಈಗ ಅಂದುಕೊಳ್ಳುತ್ತಿದ್ದಾರೆ. ಏನೆಂದರೆ, ಯಾರನ್ನು ನಾವು ಆಶೀರ್ವಾದ ಮಾಡಿ ಕಳುಹಿಸಿ ಕೊಟ್ಟೆವೋ

ಅವರು ಇಂದು ಒಂದು ರೀತಿಯಲ್ಲಿ ಭಸ್ಮಾಸುರರು ಆದಂತೆ ಆಗಿದ್ದಾರೆ.ಇಡೀ ಕರ್ನಾಟಕವನ್ನೇ ಭಸ್ಮ ಮಾಡುತ್ತಾರೋ ಏನೋ ಎಂದು ಮಾತನಾಡಿಕೊಳ್ಳುತ್ತಿದ್ದಾರೆ.

**ಡಾ॥ವಿ.ಎಸ್.ಆಚಾರ್ಯ:–** ಮಾನ್ಯ ಸಭಾಪತಿಯವರೇ, ಆ ಊರಿನ ಜನರ ಭಾವನೆ ಏನಿತ್ತು ಎಂಬುದನ್ನು ನಾನು ಹೇಳಿದೆ. ಆದರೆ ನಾನು ಹೇಳಿದಂತಹ ಮಾತಿನಿಂದ ಮಾನ್ಯ ಸದಸ್ಯರ ಮನಸ್ಸಿಗೆ ನೋವಾಗಿದ್ದರೆ ನಾನು ಆ ಮಾತನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಏಕೆಂದರೆ, ಈ ಶಬ್ದ ನನ್ನದಲ್ಲ, ಈ ಶಬ್ದ ಜನರದ್ದು.ಅದನ್ನು ನಾನು ಇಲ್ಲಿ ಪ್ರತಿಧ್ವನಿಸಿದೆ ಅಷ್ಟೆ.

**ಶ್ರೀ ವಿ.ಆರ್.ಸುದರ್ಶನ್:–**ಮಾನ್ಯ ಸಭಾಪತಿಯವರೇ, ನಾವು ಹೇಳುವಂತಹ ಮಾತುಗಳು ಸಹ ಜನರ ಧ್ವನಿಯಾಗಿದೆ.

**ಡಾ॥ವಿ.ಎಸ್.ಆಚಾರ್ಯ:–** ಅಂತಹ "ಪಾಪದ" ಕೆಲಸ ಮಾಡಬೇಡಿ.

**ಸಭಾಪತಿಯವರು:–** ಈಗ ಆ ವಿಷಯ ಮುಗಿಯಿತು. ಈ ಎಲ್ಲಾ ಹಿನ್ನಲೆಯಲ್ಲಿ 'Kaul & Shakdher' ಮತ್ತು ನಡಾವಳಿಗಳು ಇರುವಂತಹ ವಿಷಯಗಳನ್ನೆಲ್ಲಾ ಗಮನಿಸಿದಾಗ 'Kaul & Shakdher' ನಲ್ಲಿರುವಂಥದ್ದನ್ನು ಅವರೇನು ಉಲ್ಲೇಖ ಮಾಡಿದ್ದರು ಅದನ್ನು ನಾನು ಪುನಃ ಓದುವುದಕ್ಕೆ ಇಷ್ಟಪಡುತ್ತೇನೆ – "It has been observed by the Speaker that Members should not make allegations or cast aspersions against Members of Statutory Bodies, High Dignitaries and Governor of a State, Chief Minister or any other Minister in a State Government and the State Legislature" ಎಂದು ಇರುವುದನ್ನು ನಾನು ಗಮನಿಸಿದ್ದೇನೆ. ಜೊತೆಗೆ ಮಾನ್ಯ ಸದಸ್ಯರು ನಿಲುವಳಿ ಸೂಚನೆಗೆ ಕೋರಿ ಕೊಟ್ಟಿರುವಂತಹ ಪತ್ರದಲ್ಲಿ ಒಂದು ವಿಷಯವನ್ನು ಬಹಳ ಸ್ಪಷ್ಟವಾಗಿ ಪ್ರಸ್ತಾಪ ಮಾಡಿದ್ದೀರಿ. ಪ್ರಜಾಪ್ರಭುತ್ವದ ಜನಾದೇಶ, ಸಂವಿಧಾನ ಹಾಗೂ ಪ್ರಚಲಿತ ಪದ್ದತಿಗಳಿಗೆ ವಿರುದ್ದವಾದ ನಡವಳಿಕೆ ಇದಾಗಿದ್ದು, ಮಾನ್ಯ ಮುಖ್ಯಮಂತ್ರಿಗಳು ಅಧಿಕಾರದಲ್ಲಿ

ಮುಂದುವರೆಯುವ ನೈತಿಕ ಹಕ್ಕನ್ನು ಕಳೆದುಕೊಂಡಿರುತ್ತಾರೆ ಎಂಬ ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. ಹಾಗಾಗಿ ಮಾನ್ಯ ಮುಖ್ಯಮಂತ್ರಿಗಳ ಅಧಿಕಾರ ಮುಂದುವರೆಯಬೇಕೇ ಅಥವಾ ಬೇಡವೆ ಎಂಬುದರ ಬಗ್ಗೆ ತೀರ್ಮಾನ ನಮ್ಮ ಸದನದಲ್ಲಿ ಎಂದೂ ಆಗಿಲ್ಲ. ಆಗಬಾರದು. ಆದುದರಿಂದ ಈ ವಿಷಯದ ಬಗ್ಗೆ ನಿಲುವಳಿ ಸೂಚನೆಗೆ ಅವಕಾಶವನ್ನು ನಿರಾಕರಿಸಿದ್ದೇನೆ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೇ, ನಿಮ್ಮಿಂದ ನಾವು ನ್ಯಾಯವನ್ನು ನಿರೀಕ್ಷೆ ಮಾಡಿದ್ದೆವು. ಆದರೆ ನಮ್ಮ ತೀರ್ಪಿನಿಂದಾಗಿ ನಮ್ಮ ಮನಸ್ಸಿಗೆ ಬಹಳ ನೋವುಂಟಾಗಿದೆ. ಹಾಗೂ ಸರ್ಕಾರದ ನಡವಳಿಕೆ ಹಾಗೂ ಧೋರಣೆಯಿಂದಲೂ ಸಹ ಒಂದು ರೀತಿಯಲ್ಲಿ ಮನಸ್ಸಿಗೆ ನೋವುಂಟಾಗಿದೆ. ನೀವು ನಿಮ್ಮ ಎಲ್ಲಾ ಹುಳುಕುಗಳನ್ನು ಮುಚ್ಚಿಟ್ಟುಕೊಂಡಿರಿ.16 ಜನ ಶಾಸಕರು ನಿಮ್ಮ ವಿರುದ್ದ ನಡೆದುಕೊಂಡಾಗ "ನಾವು ಉಗುಳಿದಂತಹ ಎಂಜಲು" ಎಂದು ಹೇಳಿದಿರಿ. ಆದರೆ ಅವರು ವಾಪಸ್ಸು ಬಂದಾಗ ನಿಮ್ಮ ಅಧ್ಯಕ್ಷರು ಏನು ಹೇಳಬೇಕು?ಆ 'ಎಂಜಲನ್ನು' ವಾಪಸ್ಸು ತೆಗೆದುಕೊಂಡಂತೆ ಆಗುವುದಿಲ್ಲವೇ? ಇಂಥ ಎಲ್ಲಾ ಸಂವಿಧಾನ ಬಾಹಿರವಾದಂತಹ ಎಲ್ಲಾ ಕಥೆಗಳನ್ನು ಇಟ್ಟುಕೊಂಡು ನಮ್ಮನ್ನು "ಪಾಪಿಗಳು" ಎಂದು ಹೇಳುತ್ತೀರಲ್ಲ ಇದು ಸರಿಯೇ?ಆದುದರಿಂದ ನಿಮ್ಮ ಈ ಧೋರಣೆಯನ್ನು ಖಂಡಿಸುತ್ತೇವೆ.

(ಗೊಂದಲ)

**ಶ್ರೀ ಎಸ್.ಎ.ರಾಮದಾಸ್:-** ಮಾನ್ಯ ಸಭಾಪತಿಯವರೇ, ಸುಪ್ರೀಂ ಕೋರ್ಟ್ 16 ಜನ ಶಾಸಕರನ್ನು ಬಿ.ಜೆ.ಪಿ ಸದಸ್ಯರು ಎಂದು ತೀರ್ಪು ನೀಡಿರುವುದಕ್ಕೆ ಇವರಿಗೇಕೆ ಇಷ್ಟೊಂದು ಬೇಜಾರಾಗಿದೆ?

(1.00 ಗಂಟೆ)

**ಶ್ರೀಮತಿ ಮೋಟಮ್ಮ:-**ಸರ್ಕಾರದ ಧೋರಣೆ, ಸರ್ಕಾರ ನಡೆದುಕೊಂಡ ರೀತಿಯನ್ನು ವಿರೋಧಿಸುತ್ತಾ, ಈ ಸದನವನ್ನು ಬಹಿಷ್ಕರಿಸಿ, ಸದನದಿಂದ ಹೊರಕ್ಕೆ ಹೋಗುತ್ತಿದ್ದೇವೆ.

(ಗೊಂದಲ)

**ಶ್ರೀ ವಿ.ಆರ್.ಸುದರ್ಶನ್:-** ಮಾನ್ಯ ಸಭಾಪತಿಗಳೇ, ತಮ್ಮ ನಿರ್ಣಯದ ಬಗ್ಗೆ ಆಗಲೀ ಅಥವಾ ತಮ್ಮ ತೀರ್ಪಿನ ಬಗ್ಗೆಯಾಗಲೀ ನಮ್ಮ ವಿರೋಧವಿಲ್ಲ. ಆದರೆ ಈ ಸರ್ಕಾರದ ನಡವಳಿಕೆ ಹಾಗೂ ಧೋರಣೆಯನ್ನು ವಿರೋಧಿಸಿ ಈ ಸದನದಿಂದ ನಾವು ವಾಕ್ ಔಟ್ ಮಾಡುತ್ತಿದ್ದೇವೆ.

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾತ್ಯಾಗವನ್ನು ಮಾಡಿದರು)**

**ಶ್ರೀ ಎಸ್.ಎ.ರಾಮದಾಸ್:-** ಸುಪ್ರೀಂ ಕೋರ್ಟಿನ ತೀರ್ಪಿಗೆ ನೀವು ಬೆಲೆ ಕೊಡುತ್ತಿಲ್ಲವೆಂದು ನಮಗೂ ಸಹ ನಿಮ್ಮ ಬಗ್ಗೆ ದುಃಖವಾಗುತ್ತದೆ. ಅವರೆಲ್ಲರೂ ಬಿಜೆಪಿ ಪಕ್ಷದ ಸದಸ್ಯರು ಎನ್ನುವುದನ್ನು ಸಂತೋಷದಿಂದ ಒಪ್ಪಿಕೊಳ್ಳಿ.

**ಸಭಾಪತಿಯವರು:-** ಯಾವುದೇ ಮಾನ್ಯ ಸದಸ್ಯರಾಗಲೀ, ತಮ್ಮ ಆಸನದಲ್ಲಿ ನಿಂತು ಮಾತನಾಡಿರುವುದನ್ನು ಬಿಟ್ಟು, ಬೇರೆ ಕಡೆಗಳಲ್ಲಿ ನಿಂತು ಅಥವಾ ಕುಳಿತು ಮಾತನಾಡಿದ್ದನ್ನು ಅಥವಾ ಘೋಷಣೆಗಳನ್ನು ಹಾಕಿರುವುದನ್ನು ನಮ್ಮ ವರದಿಗಾರರು ನಡವಳಿಕೆಗಳಲ್ಲಿ ದಾಖಲಿಸಿ, ವರದಿ ಮಾಡಬಾರದು. ಮಾಧ್ಯಮದ ಪ್ರತಿನಿಧಿಗಳಲ್ಲಿಯೂ ಸಹ ಮನವಿಯನ್ನು ಮಾಡುತ್ತೇನೆ. ಇದು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಸೂಕ್ತವಲ್ಲ ಎನ್ನುವುದನ್ನು ತಾವೆಲ್ಲರೂ ಗಮನಿಸಬೇಕು.

ಇಂದು ಶುಕ್ರವಾರ, ನಾವು ಹಾಕಿಕೊಂಡಿರುವ ಕಲಾಪಗಳಲ್ಲಿ ಗಮನಸೆಳೆಯುವ ಸೂಚನೆಗಳು ಮತ್ತು ನಿಯಮ 330 ಅಡಿಯಲ್ಲಿ ಚರ್ಚೆ ಮಾಡತಕ್ಕ ವಿಚಾರಗಳು ಸಹ ಇವೆ. ಇದರ ಜೊತೆಗೆ ಖಾಸಗಿ ಸದಸ್ಯರ

ನಿರ್ಣಯಗಳು ಸಹ ಇವೆ. ಈಗಾಗಲೇ ಸಮಯ 1 ಗಂಟೆ ಆಗಿದೆ.ಬೆಳಿಗ್ಗೆ ಹತ್ತು ಗಂಟೆ ಮೂವತ್ತು ನಿಮಿಷದಿಂದಲೂ ಸಹ ನಾವು ಸದನದಲ್ಲಿದ್ದೇವೆ. ಈವತ್ತಿನ ಅಜೆಂಡಾವನ್ನು ಮುಂದುವರೆಸುವ ಬಗ್ಗೆ ಸಭಾನಾಯಕರು ತಮ್ಮ ಅಭಿಪ್ರಾಯವನ್ನು ಹೇಳಬೇಕು.

**ಶ್ರೀ ಮನೋಹರ ಮಸ್ಕಿ:–** ಮಾನ್ಯ ಸಭಾಪತಿಗಳೇ, ಸೋಮವಾರ ತೆಗೆದುಕೊಳ್ಳೋಣ.

**ಸಭಾಪತಿಯವರು:–** ನಾನು ಸಭಾನಾಯಕರನ್ನು ಕೇಳಿದ್ದು.

**ಡಾ॥ ವಿ.ಎಸ್.ಆಚಾರ್ಯ(ಸಭಾನಾಯಕರು):–** ಮಾನ್ಯ ಸಭಾಪತಿಗಳೇ, ಪ್ರತಿಪಕ್ಷಗಳು ಇದ್ದಾಗ ಚರ್ಚೆ ಮಾಡುವುದು ಸೂಕ್ತ. ಅವರದ್ದೇ ಸುಮಾರು ಪ್ರಶ್ನೆಗಳಿವೆ, ಹಾಗಾಗಿ ಸೋಮವಾರದಂದು ಚರ್ಚೆಗೆ ತೆಗೆದುಕೊಳ್ಳುವುದು ಸೂಕ್ತ.

**ಸಭಾಪತಿಯವರು:–** ಖಾಸಗಿ ಸದಸ್ಯರ ನಿರ್ಣಯದ ಬಗ್ಗೆ ಚರ್ಚೆ ಮಾಡುವುದು ನಮ್ಮೆಲ್ಲರ ಜವಾಬ್ದಾರಿಯಿದೆ. ಇವತ್ತು ಶುಕ್ರವಾರ ಆದರೂ ಸಹ ವಿರೋಧ ಪಕ್ಷಗಳು ಒಂದು ನಿಲುವಳಿ ಸೂಚನೆಯನ್ನು ತಂದ ಹಿನ್ನಲೆಯಲ್ಲಿ ಅದಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಲಾಯಿತು. ಆ ಬಗ್ಗೆ ಸುಮಾರು ಎರಡೂವರೆ ಗಂಟೆಗಳ ಕಾಲ ಚರ್ಚೆ ನಡೆಯಿತು. ಹೀಗಾಗಿ ಖಾಸಗಿ ಸದಸ್ಯರ ವಿಚಾರದಲ್ಲಿ ಒಂದು ಲಿಸ್ಟ್ ಆಗಿದೆ.ಇನ್ನು ಎರಡು ಅರ್ಧದಲ್ಲಿ ನಿಂತಿದೆ.ಹಿಂದಿನ ಅಧಿವೇಶನದಲ್ಲಿ ಮಸ್ಕಿಯವರು ಮಂಡಿಸಿದಂತಹ ಒಂದು ನಿರ್ಣಯಕ್ಕೆ ಸರ್ಕಾರದಿಂದ ಉತ್ತರ ಬಂದಿತ್ತು.ನಾನು ಅದರ ಬಗ್ಗೆ ಒಂದು ರೂಲಿಂಗನ್ನು ಕೂಡ ನೀಡಿದ್ದೆನು. ಸರ್ಕಾರ ನಾವು ಕೂಡ ಇದರ ಬಗ್ಗೆ ಗಮನಿಸಿದ್ದು, ನಾವೇ ಒಂದು ವಿಧೇಯಕವನ್ನು ತರುವುದಾಗಿ ಹೇಳಿಕೆ ನೀಡಿತ್ತು.ನಾನು ಆಗ ಒಂದು ರೂಲಿಂಗನ್ನು ನೀಡಿದ್ದೆನು. "ಮಾನ್ಯ ಸದಸ್ಯರು ಈ ಪ್ರಸ್ತಾವವನ್ನು ಮಂಡಿಸಿದ್ದಾರೆ. ಅದಕ್ಕೆ ಸರ್ಕಾರದ ಪರವಾಗಿ ಸಂಬಂಧಪಟ್ಟ ಸಚಿವರು

ವಿವರಣೆಯನ್ನು ನೀಡಿದ್ದಾರೆ. ಈ ವಿಚಾರವನ್ನು ಚರ್ಚೆಗೆ ತರುವುದಕ್ಕೆ ಮೊದಲು ಸಚಿವರೊಂದಿಗೆ ಚರ್ಚಿಸಿ ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳಬಹುದು" ಎಂದು ಅದನ್ನು ತಡೆಹಿಡಿಯಲಾಗಿತ್ತು. ಈಗಲೂ ಸಹ ಕಾಲ ಮಿಂಚಿಲ್ಲ ಮಾನ್ಯ ಸಚಿವರು, ಸಭಾನಾಯಕರು ಮತ್ತು ಮುಖ್ಯ ಸಚೇತಕರು ಸಹ ಸದನದಲ್ಲಿ ಹಾಜರಿರುವದರಿಂದ ಈ ವಿಚಾರವನ್ನು ಸಂಬಂಧಪಟ್ಟ ಸಚಿವರ ಗಮನಕ್ಕೆ ತರಬೇಕು. "ಸೌಹಾರ್ದ ಸಹಕಾರ" ತಿದ್ದುಪಡಿ ವಿಧೇಯಕದ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾವವನ್ನು ಮಾಡಿದ್ದರು. ಅದರ ಬಗ್ಗೆ ಸರ್ಕಾರ ತನ್ನ ಗಮನವನ್ನು ಹರಿಸಬೇಕಾಗುತ್ತದೆ.ಮುಂದಿನ ಶುಕ್ರವಾರ ಸಹ ಇರತಕ್ಕ ಒಂದೆರೆಡು ಖಾಸಗಿ ನಿರ್ಣಯಗಳ ಬಗ್ಗೆ ಚರ್ಚೆಯನ್ನು ಮಾಡಬೇಕಾಗುತ್ತದೆ. 2–3 ಖಾಸಗಿ ನಿರ್ಣಯಗಳ ಬಗ್ಗೆ ನನಗೆ ಸಮಿತಿಯಿಂದ ರೆಫ಼ರ್ ಮಾಡಲಾಗಿದೆ.ಪ್ರಮುಖ ವಿರೋಧ ಪಕ್ಷದವರು ಇವತ್ತು ವಾಕ್‌ಔಟ್ ಮಾಡಿದ್ದೇವೆ ಎನ್ನುವ ಪದವನ್ನು ಪ್ರಯೋಗಿಸಿ ಸದನದಿಂದ ಹೊರಗೆ ಹೋಗಿದ್ದಾರೆ.ಮುಂದಿನ ವಿಚಾರಗಳ ಬಗ್ಗೆ ಚರ್ಚೆ ಮಾಡಲು ಸೋಮವಾರದಂದು ಅವರು ಸದನಕ್ಕೆ ಬರಬಹುದೆನ್ನುವ ಆಶಯ ನನಗಿದೆ. ಹಾಗೆಯೇ ಜನತಾದಳದ ಸದಸ್ಯರು ಕೂಡ ಸದನಕ್ಕೆ ಹಾಜರಾಗಲಿಲ್ಲ. ಆದರೆ ದೂರವಾಣಿ ಮುಖೇನ ಪಕ್ಷದ ನಾಯಕರು ಮಾತನಾಡಿ, ಸದನಕ್ಕೆ ಬರುವುದಿಲ್ಲ ಎನ್ನುವ ಮಾತನ್ನು ತಮಗೆ ಹೇಳಲು ಮನಸ್ಸಿಗೆ ನೋವಾಗುತ್ತದೆ ಎಂದು ತಿಳಿಸಿರುತ್ತಾರೆ. ಅದನ್ನು ಈ ಸದನದಲ್ಲಿ ಉಲ್ಲೇಖ ಮಾಡಬೇಕಾಗುತ್ತದೆ. ಅವರೆಲ್ಲರೂ ಸದನಕ್ಕೆ ಬಂದಲ್ಲಿ ಎಲ್ಲಾ ವಿಚಾರಗಳ ಬಗ್ಗೆ ಚರ್ಚೆಯನ್ನು ಮಾಡೋಣ, ನಮ್ಮ ಸದನವನ್ನು ಚೆನ್ನಾಗಿ ನಡೆಸೋಣ ಎನ್ನುವ ಭಾವನೆಗಳೊಂದಿಗೆ, ಈಗ ಸದನವನ್ನು ಸೋಮವಾರ ಮಧ್ಯಹ್ನ 12 ಗಂಟೆ 15 ನಿಮಿಷಗಳ ವರೆಗೆ ಮುಂದುಡುತ್ತಿದ್ದೇನೆ.

**(ಸದನವು ಮಧ್ಯಾಹ್ನ 1 ಗಂಟೆ 5 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 6ನೇ ಜೂನ್ ಮಾಹೆ 2011ರ ಸೋಮವಾರದಂದು ಮಧ್ಯಾಹ್ನ 12 ಗಂಟೆ 15 ನಿಮಿಷಕ್ಕೆ ಸೇರಲು ನಿಶ್ಚಯಿಸಿತು.)**